ಕಾವ್ಯ ಮಂಡಲದ ಪರವಾಗಿ,
ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನ ನಿಬಂಧ

ವಚನಕಾರ್ತಿಯರು ಮತ್ತು ಅವರ ವೃತ್ತಿ ವೈವಿಧ್ಯ

2008

353

ಕಾವ್ಯ ಮಂಡಲದ ಪರವಾಗಿ,
ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನ ನಿಬಂಧ

2008

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ **ಪುಷ್ಪಲತಾ ಕೆ.ಪಿ.** ಅವರು ನನ್ನ ನೇರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ **"ವಚನಕಾರ್ತಿಯರು ಮತ್ತು ಅವರ ವೃತ್ತಿ ವೈವಿಧ್ಯ"** ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಿಯಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾಲಯದ ಅಥವಾ ಬೇರೆ ಯಾವುದೇ ತತ್ಸಮಾನ ಪದವಿಗಳಿಗಾಗಿಯಾಗಲೀ ಒಪ್ಪಿಸಿರುವುದಿಲ್ಲ.

ಎಂ.ಎಸ್. ಆಶಾದೇವಿ

(ಡಾ.ಎಂ.ಎಸ್.ಆಶಾದೇವಿ)

ಮಾರ್ಗದರ್ಶಕರು

ಪ್ರಮಾಣ ಪತ್ರ

"ವಚನಕಾರ್ತಿಯರು ಮತ್ತು ಅವರ ವೃತ್ತಿ ವೈವಿಧ್ಯ" ಎಂಬ ನಿಬಂಧವನ್ನು **ಎಂ.ಫಿಲ್** ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ. ಎಂ.ಎಸ್.ಆಶಾದೇವಿ** ಅವರ ಮಾರ್ಗದರ್ಶನದಲ್ಲಿ ಬರೆದು ಸಿದ್ಧಪಡಿಸಿದ್ದೇನೆ. ಈ ನಿಬಂಧವು ನನ್ನ ಸ್ವಂತ ಪರಿಶ್ರಮ ಹಾಗೂ ಪ್ರಯತ್ನದ ಫಲವಾಗಿದೆ.

ಈ ನಿಬಂಧದ ವಿಷಯವನ್ನಾಗಲೀ ಅಥವಾ ಯಾವುದೇ ಭಾಗವನ್ನಾಗಲೀ ಈ ಮೊದಲು ಯಾವ ಪದವಿ ಅಥವಾ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ :

ಸಂಶೋಧನಾ ವಿದ್ಯಾರ್ಥಿ
(ಪುಷ್ಪಲತಾ ಕೆ.ಪಿ.)

ವಚನಕಾರ್ತಿಯರು ಮತ್ತು ವೃತ್ತಿ ವೈವಿಧ್ಯ

ಪರಿವಿಡಿ

ವಚನಕಾರ್ತಿಯರು ಮತ್ತು ಅವರ ವೃತ್ತಿ ವೈವಿಧ್ಯ

ಪೀಠಿಕೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿಗೆ ಮಹಿಳಾ ಸಾಹಿತ್ಯಕ್ಕೆ ಬುನಾದಿ ಹಾಕಿದವರು ವಚನಕಾರ್ತಿಯರು. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಬೆಳಕಿಗೆ ಬಂದ ನೂರಾರು ವಚನಕಾರ್ತಿಯರು ಇದ್ದರು. ಸದ್ಯಕ್ಕೆ ಲಭ್ಯವಿರುವುದು 35 ವಚನಕಾರ್ತಿಯರು. ಇವರ ಪ್ರಕಟಿತ ವಚನಗಳ ಸಂಖ್ಯೆ 1351 ಮಾತ್ರ. ಅಕ್ಕ ಮಹಾದೇವಿಯನ್ನು ಹೊರತುಪಡಿಸಿದರೆ, ವಿವಿಧ ಸ್ತರಗಳಿಂದ ಬಂದಂತಹ ವಚನಕಾರ್ತಿಯರನ್ನು ಗಮನಿಸಬಹುದು.

ಅವರೆಲ್ಲರೂ ಅಕ್ಕನ ಮಟ್ಟಕ್ಕೆ ಏರದಿದ್ದರೂ ತರತಮ ಭಾವವಿಲ್ಲದೆ ವ್ಯಕ್ತಪಡಿಸಿರುವ ಅನುಭವದ ಅಭಿವ್ಯಕ್ತಿಯು ಅಷ್ಟೇ ಮುಖ್ಯವಾಗುತ್ತದೆ. ಈಗಾಗಲೇ ಇರುವ ಸ್ಥಾಪಿತ ಮೌಲ್ಯ ವ್ಯವಸ್ಥೆಯನ್ನು ವಚನಕಾರ್ತಿಯರು ತಮ್ಮ ವಚನಗಳ ಮೂಲಕ ಪ್ರಶ್ನಿಸುತ್ತಾರೆ. ಜತೆಗೆ ಆತ್ಮಕ್ಕೆ ಲಿಂಗಭೇದವಿಲ್ಲ ಎಂದು ಹೇಳಿ, ಮೊದಲಿಗೆ ಸ್ತ್ರೀ ಸಮಾನತೆಯ ಬಗೆಗೆ ದನಿ ಎತ್ತಿರುತ್ತಾರೆ. 'ನಾನು ಪ್ರಭುವಿನ ಸಂತತಿಯವಳು, ನಾನು ಮಾದಾರ ಚೆನ್ನಯ್ಯನ ಮೊಮ್ಮಗಳು.'[1] ಎಂಬ ನೀಲಮ್ಮನ ವಚನದಲ್ಲಿ ವ್ಯಕ್ತಿತ್ವದ ಹುಡುಕಾಟ ಮತ್ತು ತನ್ನ ಅಸ್ತಿತ್ವವನ್ನು ಪುರುಷ ಸಮಾಜದಿಂದಾಚೆಗೆ ಗುರುತಿಸಿಕೊಳ್ಳುವಿಕೆ ಇದೆ.

ಮೇಲ್ವರ್ಗದಿಂದ ಬಂದ ವಚನಕಾರ್ತಿಯರಾದ ಅಕ್ಕ ಮಹಾದೇವಿಯಂಥವರು ಇಷ್ಟದೈವದಿಂದ ಗುರುತಿಸಿಕೊಂಡರೆ, ಕೆಳವರ್ಗದವರಾದ ಕದಿರೆ ರೆಮ್ಮವ್ವೆ, ಕೇತಲಾದೇವಿ, ಸೂಳೆ ಸಂಕವ್ವ, ಮುಂತಾದವರು ಇಷ್ಟದೈವಕ್ಕೆ ಬದ್ಧರಾಗಿ ಲಿಂಗ ಮತ್ತು ವೃತ್ತಿಯ ಜತೆಗೆ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ. ಈ ರೀತಿಯಾಗಿ ಗುರುತಿಸಿಕೊಳ್ಳುವಿಕೆಯೇ ಆತ್ಮ ಘನತೆಯ ವಿಚಾರವಾಗಿತ್ತು. ಶತಮಾನಗಳಿಂದ ಸಾಹಿತ್ಯ ರಚನೆ ಕೇವಲ ಪುರಷರ ಹಕ್ಕು ಎಂಬ ಸ್ಥಾಪಿತ ಕಲ್ಪನೆಯನ್ನು ಪ್ರಶ್ನಿಸಿದರು. ದೈಹಿಕ ವ್ಯತ್ಯಾಸಗಳನ್ನು ಮುಂದು ಮಾಡಿಕೊಂಡು ಹೆಣ್ಣು-ಗಂಡು ಎಂಬ ಭೇದವನ್ನು ಕಲ್ಪಿಸಿಕೊಂಡಿದ್ದ ಪುರುಷ ಸಮಾಜದ ಚಿಂತನೆಯನ್ನು ಒಪ್ಪಿಕೊಂಡಂತೆ ಕಂಡರು ಕೂಡ ಆತ್ಮಕ್ಕೆ ಭೇದವಿಲ್ಲ ಎಂಬ ಮಾನವೀಯ ಮೌಲ್ಯ ವಚನಕಾರ್ತಿಯರ ವಚನಗಳಲ್ಲಿ ಕಂಡುಬರುತ್ತದೆ.

ತಮ್ಮ ವೃತ್ತಿ, ಪರಿಸರ, ಅಚಾರ-ವಿಚಾರವನ್ನೇ ಅಭಿವ್ಯಕ್ತಿಯ ವಸ್ತುವಾಗಿಸಿಕೊಂಡ ವಚನಕಾರ್ತಿಯರು ಜಾತಿ ಭೇದ, ಲಿಂಗ ತಾರತಮ್ಯತೆಗಳನ್ನು ತೀಕ್ಷಣವಾಗಿ ಟೀಕಿಸುವುದಲ್ಲದೆ, ಸಂದರ್ಭಾನುಸಾರ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಪುರುಷ ಸಮಾಜ ನಿರ್ಮಿಸಿದ ಮಾಯೆ, ರಕ್ಕಸಿ, ದೇವತೆ ಎಂಬುವೆ ಸ್ತ್ರೀ ಮುಖಗಳು ಎಂಬುದನ್ನು ವಚನಕಾರ್ತಿಯರು ನಿರ್ಲಿಪ್ತವಾಗಿ ಕಂಡು ಅರಿವಿಗೆ ಬೇರೊಂದೊಡಲುಂಟೆ? ಎಂಬ ಲಿಂಗಭೇದದಿಂದಾಚೆಗಿನ ಸಮಾನತೆಯನ್ನು ಪ್ರತಿಪಾದಿಸಿದ್ದಾರೆ. ವರ್ಣ-ವರ್ಗ-ಜಾತಿ, ಸಮಾನತೆಗಳ ವಿರುದ್ಧ ದನಿ ಎತ್ತುವ ಹಾಗೂ ಸಮಾಜದಲ್ಲಿ ಜಡ್ಡುಗಟ್ಟಿದ ಓರೆ-ಕೋರೆಗಳನ್ನು ತಿದ್ದುವ ವಚನ ಚಳುವಳಿಯ ಸಂದರ್ಭದಲ್ಲಿ ಸ್ಫೂರ್ತಿದಾಯಕರಾದ ಸ್ತ್ರೀಯರು ತಮ್ಮನ್ನು ತಾವು ವಚನ ಚಳುವಳಿಯಲ್ಲಿ ಭಾಗವಹಿಸಿಕೊಳ್ಳುತ್ತಾರೆ.

ಹೀಗೆ ಭಾಗವಹಿಸುವ ಹಂತದಲ್ಲಿಯೇ ತಮ್ಮನ್ನು ಕಾಯಕದ ಜತೆ ಜತೆಯಲ್ಲೇ

ಆಧ್ಯಾತ್ಮಿಕ ಅನುಭವ ಐಕ್ಯಗೊಳಿಸುತ್ತಾರೆ. 'ಭಕ್ತರ ಕುಲವನ್ನೆತ್ತಿ ನಿಂದಿಸುವಾತ ಭಕ್ತನೆ?'[2] ಎಂಬ ಕಾಳವ್ವನ ವಚನದಲ್ಲಿ ಕುಲ-ಜಾತಿಗಳನ್ನು ಮೀರಿ ನಿಲ್ಲುವ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಸಿದ್ಧಾಂತವನ್ನು ಒಪ್ಪಿ ಅದೇ ರೀತಿ ಮನುಷ್ಯ ಜಾತಿ ಬದುಕಬೇಕು ಎಂಬುದನ್ನು ಹೇಳುತ್ತದೆ. ಹೀಗೆ ಮೋಳಿಗೆ ಮಹಾದೇವಿಯಮ್ಮ, ಸತ್ಯಕ್ಕ, ಲಿಂಗಮ್ಮ, ಲಕ್ಕಮ್ಮ, ಅಕ್ಕನಾಗಮ್ಮ ಮೊದಲಾದ ವಚನಕಾರ್ತಿಯರು ಸಮಾಜದ ಅಂಕು-ಡೊಂಕುಗಳನ್ನು ವಿಮರ್ಶಿಸಿದ್ದಾರೆ.

ಬಸವಣ್ಣ ಮತ್ತು ಇತರರು ಸಾಮಾಜಿಕ ಸಮಾನತೆಯನ್ನು ಬಯಸಿದ್ದು ಜಾತಿ-ವರ್ಗ-ಆಚಾರಗಳ ವಿಷಯದಲ್ಲಿ ಮಾತ್ರ. ಸ್ತ್ರೀ ವಿಚಾರದಲ್ಲಿ ಆ ರೀತಿಯ ಆಸಕ್ತಿ ಇದ್ದಂತೆ ಕಂಡುಬರುವುದಿಲ್ಲ. ಆದರೂ ವಚನ ಚಳುವಳಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡ ವಚನಕಾರ್ತಿಯರನ್ನು ನಿರಾಸೆಗೊಳಿಸದೇ ಅವರನ್ನು ಉತ್ತೇಜಿಸಿರುವುದು ಕಂಡುಬರುತ್ತದೆ. ಈ ಎಲ್ಲ ಅಂಶಗಳನ್ನು ~~ವನ್ನ~~ ಈ ನಿಬಂಧದಲ್ಲಿ ಗುರುತಿಸುವ ಪ್ರಯತ್ನ ನನ್ನದಾಗಿದೆ.

ಅಡಿ ಟಿಪ್ಪಣಿ

1. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-298, ವಚನ-982(182)
2. ಅದೇ, ಪುಟ-227, ವಚನ-737(8)

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಧಾರ್ಮಿಕ ಹಾಗೂ ಸಾಮಾಜಿಕ ಪರಿವರ್ತನೆಯ ಪರ್ವಕಾಲವಾದ ಹನ್ನೆರಡನೇ ಶತಮಾನದಲ್ಲಿ ಶಿವಶರಣೆಯರು ಆತ್ಮವಿಶ್ವಾಸದಿಂದ ವೈಚಾರಿಕತೆ ಬೆಳೆಸಿಕೊಂಡು ಮುನ್ನಡೆದರು. ಅತ್ಯಾಧುನಿಕ ಕಂಪ್ಯೂಟರ್ ಯುಗದಲ್ಲಿದ್ದರೂ ಇನ್ನೂ ಸಹ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳು ಚಿಂತನಾಶೀಲರಾಗದಿರುವಾಗ, ಜಾಗತಿಕ ಮಟ್ಟದಲ್ಲಿ ಶರಣೆಯರ ವೈಚಾರಿಕತೆ, ಜೀವನ ಧೋರಣೆಗಳು ಪ್ರಗತಿಪರವಾಗಿವೆ. ಮಹಿಳೆಯರಲ್ಲಿ ಸ್ವತಂತ್ರ ಚಿಂತನೆ, ವೈಚಾರಿಕ, ವೈಜ್ಞಾನಿಕ ಮನೋಧರ್ಮವಿದ್ದರೆ, ಆಧುನಿಕತೆ ಮೈಗೂಡಿದಂತೆ.

ಆದ್ದರಿಂದ 12ನೇ ಶತಮಾನದ ಶಿವಶರಣೆಯರಲ್ಲಿ ಹುಸಿ ಧರ್ಮಾಚರಣೆ ವಿರುದ್ಧ ಹಳೆಯ ಸಂಪ್ರದಾಯ ಮೌಢ್ಯಗಳನ್ನು ಕುರಿತ ಚಿಂತನೆ, ಶೋಷಣೆಗಳ ಬಗ್ಗೆ ಸಿಡಿದು ನಿಂತ ದಿಟ್ಟತನ, ಧಾರ್ಮಿಕತೆಯಲ್ಲೂ ನಡೆಸಿದ ಸಾಧನೆ, ಪ್ರಗತಿಪರ ಚಿಂತನೆ –ಶರಣೆಯರು ಎಲ್ಲಾ ಕಾಲಕ್ಕೂ ಸ್ಫೂರ್ತಿ ನೀಡಬಹುದಾದ ವೈಚಾರಿಕತೆಯ ಮಹತ್ತರ ಕೊಡುಗೆಗಳಾಗಿವೆ. ಮೇಲು–ಕೀಳು ಎಂಬ ತಾರತಮ್ಯವನ್ನು ಬದಿಗಿರಿಸಿ ವ್ರತನಿಷ್ಠೆ, ಸತಿಪತಿ ಭಾವ, ಸಮಾಜಿಕ ವಿಡಂಬನೆ ಮಾಡಿರುವ ಶರಣೆಯರ ರೀತಿ ಗಮನಿಸಿದರೆ, ಅವರಲ್ಲಿನ ವೈಚಾರಿಕ ಮನೋಭಾವ ಎದ್ದು ಕಾಣುವುದು. ಲಭ್ಯವಿರುವ ವಚನಕಾರ್ತಿಯರ ವಚನಗಳು ಹಾಗೂ ಅವುಗಳ ಆಧಾರದ ಮೇಲೆ ಕೆಳಕಂಡಂತೆ ಅಧ್ಯಯನ ವಿಭಾಗ ಮಾಡಲಾಗಿದೆ.

ಅಧ್ಯಾಯ–1 ವಚನಕಾರ್ತಿಯರ ಹಿನ್ನೆಲೆ

ಅಧ್ಯಾಯ–2 ಕಾಯಕ ಮತ್ತು ಕಾಯಕತತ್ವ

ಅಧ್ಯಾಯ–3 ವಚನಕಾರ್ತಿಯರು ಮತ್ತು ಲಿಂಗ ರಾಜಕಾರಣ

ಅಧ್ಯಾಯ–4 ವಚನಕಾರ್ತಿಯರ ಸಾಮಾಜಿಕ ಚಿಂತನೆ

ವರ್ಣ ಜಾತಿ ಅಸಮಾನತೆಗಳ ವಿರುದ್ಧ ದನಿ ಎತ್ತುವ ಹಾಗೂ ಸಮಾಜದಲ್ಲಿ ಜಡ್ಡುಗಟ್ಟಿದ ಓರೆ–ಕೋರೆಗಳನ್ನು ತಿದ್ದುವ ವಚನ ಚಳುವಳಿ ಸಂದರ್ಭದಲ್ಲಿಯೇ ವಚನಕಾರ್ತಿಯರು ಹುಟ್ಟಿಕೊಂಡರು. 'ನಾನು ಪ್ರಭುವಿನ ಸಂತತಿಯವಳು, ನಾ ಮಾದರಚೆನ್ನಯ್ಯನ ಮೊಮ್ಮಗಳು'[1] ಎನ್ನುವ ನೀಲಮ್ಮನ ವಚನದಲ್ಲಿ ತನ್ನ ವ್ಯಕ್ತಿತ್ವದ ಹುಡುಕಾಟ, ಜತೆಗೆ ಶರಣ ಪರಂಪರೆ ಕಂಡುಬರುತ್ತದೆ. ಅಲ್ಲದೆ, ಪತಿ ಪರದೈವ ಆರಾಧಕನಾಗಿದ್ದರೂ ಸತಿ ಶಿವಭಕ್ತೆಯಾಗಿರುವ ನಿದರ್ಶನಗಳಿವೆ. ಗಜೇಶ ಮಸಣ್ಣಯ್ಯಗಳ ಪುಣ್ಯಸ್ತ್ರೀ –ಇಂಥವರ ವಚನಗಳು ಲಭ್ಯವಿದ್ದರೂ ಅವರ ಹೆಸರು ಅಜ್ಞಾತ. ಕೆಲವು ವಚನಕಾರ್ತಿಯರು ತಮ್ಮ ಹೆಸರನ್ನು 'ಪುಣ್ಯಸ್ತ್ರೀ' ಎಂಬ ವಿಶೇಷಣಾಂಕದಿಂದ ಗುರುತಿಸಿಕೊಂಡಿದ್ದಾರೆ.

ಅಲ್ಲದೆ, ಹೆಚ್ಚಾಗಿ ಕೆಳವರ್ಗದಿಂದ ಬಂದಿರುವ ವಚನಕಾರ್ತಿಯರು ತಾವು ಮಾಡುವ ವೃತ್ತಿಯ ಮೂಲಕವೇ ಅನುಭವದ ಅಭಿವ್ಯಕ್ತಿಗೆ ಮೂರ್ತರೂಪ ನೀಡಿದ್ದಾರೆ. 'ವ್ರತ ತಪ್ಪಲು ಸೈರಿಸಬಹುದು, ಕಾಯಕ ತಪ್ಪಲು ಎಂದೂ ಸೈರಿಸಬಾರದು'[2] ಎಂಬ ಕಾಳವ್ವೆಯ

ವಚನದಲ್ಲಿ ಕಾಯಕದ ಶ್ರೇಷ್ಠತೆ ತಿಳಿದು ಬರುತ್ತದೆ. 'ತೂಬರ ಕೊಳ್ಳಿಯಂತೆ ಉರಿವಾತ ಭಕ್ತನೆ, ಭಕ್ತರ ಕುಲವನ್ನೆತ್ತಿ ನಿಂದಿಸುವಾತ ಭಕ್ತನೆ'[3] ಎಂದು ಕಾಳವ್ವೆ ಶಿವಭಕ್ತರ ಡಾಂಬಿಕತೆಯನ್ನು ವಿಮರ್ಶಿಸುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ, ಭಕ್ತ ಹೇಗಿರಬೇಕು, ಹೇಗಿರಬಾರದು ಎಂಬ ಉಪದೇಶವನ್ನು ಮಾಡುತ್ತಾಳೆ.

ಹೀಗೆ ಮೋಳಿಗೆ ಮಹಾದೇವಿಯಮ್ಮ, ಸತ್ಯಕ್ಕ, ಲಿಂಗಮ್ಮ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ ಮೊದಲಾದ ವಚನಕಾರ್ತಿಯರು ಸಮಾಜದ ಅಂಕು ಡೊಂಕುಗಳನ್ನು ವಿಮರ್ಶಿಸಿದ್ದಾರೆ. 'ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?'[4] ಎಂಬ ಅಕ್ಕನ ನಿಲುವಿನಲ್ಲಿ ಸಮಾಜದ ನಿಯಮವನ್ನು ಧಿಕ್ಕರಿಸಿದಂತೆ ಕಂಡರೂ ಆ ಮೌಲ್ಯಗಳನ್ನು ಒಪ್ಪಿ ನಡೆಯುವುದು ಕಂಡುಬರುತ್ತದೆ. ತಮ್ಮ ತಮ್ಮ ವೃತ್ತಿ, ಪರಿಸರ, ಆಚಾರ, ವಿಚಾರವನ್ನೇ ಶರಣೆಯರು ಅಭಿವ್ಯಕ್ತಿಯ ವಸ್ತುವನ್ನಾಗಿಸಿಕೊಂಡರು. ಸಮಾಜದಲ್ಲಿ ಬೇರೂರಿದ್ದ ಅಸಮಾನತೆ, ಜಾತಿ-ಭೇದ, ಲಿಂಗ ತಾರತಮ್ಯತೆಗಳನ್ನು ತೀಕ್ಷ್ಣವಾಗಿ ಟೀಕಿಸಿರುವುದಲ್ಲದೆ, ಸಂದರ್ಭಾನುಸಾರ ಮಾರ್ಮಿಕವಾಗಿ ಚರ್ಚಿಸಿದ್ದಾರೆ.

ವಚನಕಾರರಂತೆಯೇ ಮಾರ್ಗ ಕಾವ್ಯದ ಮಾದರಿಗೆ ವಿದಾಯ ಹೇಳಿ ಸರಳ-ಸ್ವತಂತ್ರವಾದ ವಚನದ ಹಾದಿಯನ್ನು ಹಿಡಿದು ಅನುಭಾವ ಸಾಧನೆಗೆ ಹಾಗೂ ಆತ್ಮಜ್ಞಾನದ ಅರಿವಿನ ಸಂಪಾದನೆಗೆ ಸ್ತ್ರೀ-ಪುರುಷ ಭೇದವನ್ನು ನಿರಾಕರಿಸುತ್ತಾರೆ. ಲಿಂಗ ಸಮಾನತೆಯ ಧೋರಣೆ ಬಗೆಗೆ ಶರಣೆಯರು ಬಹು ಪ್ರಾಮುಖ್ಯತೆಯನ್ನು ಕೊಟ್ಟಂತೆ ಕಾಣಿಸುತ್ತದೆ. ಗೊಗ್ಗವ್ವೆ ತನ್ನ ವಚನದಲ್ಲಿ

> 'ಮೊಲೆ ಮೂಡಿ ಬಂದಡೆ ಹೆಣ್ಣೆಂಬರು.
> ಮೀಸೆಕಾಸೆ ಬಂದೆಡೆ ಗಂಡೆಂಬರು
> ಈ ಉಭಯದ ಜ್ಞಾನ
> ಹೆಣ್ಣೊ ಗಂಡೋ ನಾಸ್ತಿನಾಥ'[5]

ಎಂದು ಜ್ಞಾನದ ಅವಸ್ಥೆಯನ್ನಷ್ಟೇ ಲಕ್ಷಿಸುತ್ತಾಳೆ ಹೊರತು, ದೈಹಿಕ ವ್ಯತ್ಯಾಸಗಳನ್ನು ಅಲ್ಲ. ಸತಿಪತಿ ಭಾವ ಮುಖ್ಯವಾದ ಕಾಲಘಟ್ಟದಲ್ಲಿ ಮದುವೆಯಾಗದೆ ವಿರಕ್ತಿ ಮಾರ್ಗದ ಮೂಲಕ ಸತ್ಯಕ್ಕ, ಗೊಗ್ಗವ್ವೆ, ಬೊಂತಾದೇವಿ ಅವರು ಶ್ರೇಷ್ಠ ಶಿವಭಕ್ತೆಯರಾಗಿ ಹೊರ ಹೊಮ್ಮಿದ್ದಾರೆ. ಇಲ್ಲೆಲ್ಲಿಯೂ ಸ್ತ್ರೀ ತನಗೆ ತಾನು ಪುರುಷನ ಮೌಲ್ಯಗಳನ್ನು ತನ್ನ ಮೇಲೆ ಆರೋಪಿಸಿಕೊಂಡಂತೆ ಕಾಣುವುದಿಲ್ಲ.

ಅಡಿ ಟಿಪ್ಪಣಿ

1. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-298, ವಚನ-982(182)
2. ಕಾಯಕ-ದಾಸೋಹ ಸಂ: ಮಾತೆ ಕಸ್ತೂರಿ ದೇವಿ, ಮುದ್ರಣ-ಜನವರಿ 2008, ಬಸವ ಮಂಟಪ, ಪುಟ-19
3. ಅದೇ, ಪುಟ-227, ವಚನ-737(8)
4. ಅದೇ,ಪುಟ-28,ವಚನ-77
5. ಅದೇ,ಪುಟ-247, ವಚನ-779(6)

ಅಧ್ಯಾಯ–1

ವಚನಕಾರ್ತಿಯರ ಹಿನ್ನೆಲೆ

ವಚನ ಚಳುವಳಿ ಎಂಬುದು ಏಕಕಾಲಕ್ಕೆ ಹೊಸ ಸಮಾಜೋ–ರಾಜಕೀಯ ಹಾಗೂ ಧಾರ್ಮಿಕ ಆಶಯಗಳ ಚಳುವಳಿ. ಈ ವೇದಿಕೆಯನ್ನು ಶಕ್ತವಾಗಿ ಬಳಸಿಕೊಂಡ ಶಿವಶರಣೆಯರು ವಚನಕಾರರಂತೆ ತಮ್ಮನ್ನು ತೊಡಗಿಸಿಕೊಳ್ಳದೇ ಇದ್ದರೂ ಪರೋಕ್ಷವಾಗಿ ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಹೀಗೆ ಚಳುವಳಿಗೆ ಇಳಿದ ನೂರಾರು ಶರಣೆಯರಲ್ಲಿ ಹಲವರು ತಮ್ಮ ಅನುಭವಗಳನ್ನು ವಚನಗಳ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಈ ರೀತಿ ಅಭಿವ್ಯಕ್ತಿಪಡಿಸಿದ ವಚನಕಾರ್ತಿಯರ ಇನ್ನೂ ಹಲವು ವಚನಗಳು ಅಲಭ್ಯವಾಗಿವೆ.

ದೊರೆತಿರುವ ವಚನಕಾರ್ತಿಯರು ಹಾಗೂ ಅವರ ವಚನಗಳ ಪ್ರಮಾಣ ಕಡಿಮೆ ಎನಿಸಿದರೂ ಅವರ ವಚನಗಳಲ್ಲಿ ಬಹುಮುಖ ಪ್ರತಿಭೆಯನ್ನು ಗುರುತಿಸಬಹುದು. ಅಕ್ಕಮಹಾದೇವಿ ಹಾಗೂ ಅವಳ ವಚನಗಳಿಗೆ ಕನ್ನಡ ಸಾಹಿತ್ಯದಲ್ಲಿ ಸಿಕ್ಕ ಮನ್ನಣೆ ಇತರ ವಚನಕಾರ್ತಿಯರಿಗೆ ದೊರೆಯಲಿಲ್ಲ. ಇದು ನಿಜವಾದರೂ ಇತ್ತೀಚಿನ ದಿನಗಳಲ್ಲಿ ಅಧಿಕೃತ ವಚನಕಾರ್ತಿಯರ ಅಧ್ಯಯನ ನಡೆಯುತ್ತಿದೆ.

ಇದುವರೆಗೂ 35 ಮಂದಿ ವಚನಕಾರ್ತಿಯರನ್ನು ಗುರುತಿಸಿದ್ದಾರೆ. ಇವರು ರಚಿಸಿದ 1351 ವಚನಗಳು ಪ್ರಕಟಗೊಂಡಿವೆ. ಈ ಪೈಕಿ ಕೆಳವರ್ಗದ ವಚನಕಾರ್ತಿಯರೇ ಹೆಚ್ಚಾಗಿದ್ದಾರೆ. ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿ ಅಕ್ಕಮಹಾದೇವಿ ಎಂದು ರೂಢಿಯಲ್ಲಿದ್ದರೂ ಆದ್ಯ ವಚನಕಾರ್ತಿ ದುಗ್ಗಳೆ. ಏಕೆಂದರೆ, ಕಾಲದ ದೃಷ್ಟಿಯಿಂದ ನೋಡಿದಾಗ ಅಕ್ಕನಿಗಿಂತ ಮೊದಲಿಗಳು. ಅಲ್ಲದೆ, ಆದ್ಯ ವಚನಕಾರ ಜೇಡರ ದಾಸಿಮಯ್ಯನ ಸತಿ. ಇದುವರೆಗೂ ಲಭ್ಯವಿರುವ ಒಟ್ಟು ವಚನಕಾರ್ತಿಯರೆಂದರೆ:

1. ಅಕ್ಕಮಹಾದೇವಿ
2. ಅಕ್ಕಮ್ಮ
3. ಅಮುಗೆ ರಾಯಮ್ಮ
4. ಆಯ್ದಕ್ಕಿ ಲಕ್ಕಮ್ಮ
5. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
6. ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ
7. ಕದಿರ ಕಾಯಕದ ಕಾಳವ್ವೆ
8. ಕದಿರ ರೆಮ್ಮವ್ವೆ
9. ಕನ್ನಡಿ ಕಾಯಕದ ರೇಮಮ್ಮ
10. ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
11. ಕಾಲಕಣ್ಣಿಯ ಕಾಮಮ್ಮ
12. ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ
13. ಕೊಟ್ಟಣದ ಸೋಮಮ್ಮ
14. ಗಂಗಾಬಿಂಕೆ
15. ಗಜೇಶ ಮಸಣ್ಣಯ್ಯಗಳ ಪುಣ್ಯಸ್ತ್ರೀ
16. ಗುಂಡಯ್ಯಗಳ ಪುಣ್ಯಸ್ತ್ರೀಕೇತಲದೇವಿ

17. ಗೊಗ್ಗವ್ವೆ
18. ದಸರಯ್ಯಗಳಪುಣ್ಯಸ್ತ್ರೀ ವೀರಮ್ಮ
19. ದುಗ್ಗಳೆ
20. ನಾಗಲಾಂಬಿಕೆ
21. ನೀಲಮ್ಮ
22. ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ
23. ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
24. ಬೊಂತಾದೇವಿ
25. ಮುಕ್ತಾಯಕ್ಕ
26. ಮೋಳಿಗೆಯ ಮಹಾದೇವಿ
27. ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ
28. ರೇವಣ್ಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ
29. ಸತ್ಯಕ್ಕ
30. ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
31. ಸೂಳೆ ಸಂಕವ್ವೆ
32. ಹಡದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ
33. ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ
34. ಕುರಂಗೇಶ್ವರಲಿಂಗ
35. ಮಸಣಯ್ಯಪ್ರಿಯ ಮಾರೇಶ್ವರ

ಅಕ್ಕಮಹಾದೇವಿ

ವಚನ ಸಾಹಿತ್ಯ ಎಂದಾಕ್ಷಣ ಪುರುಷರಲ್ಲಿ ಮೊದಲು ನೆನಪಾಗುವ ಹೆಸರು ಬಸವಣ್ಣನದು, ಸ್ತ್ರೀಯರಲ್ಲಿ ಮೊದಲು ನೆನಪಾಗುವ ಹೆಸರು ಅಕ್ಕಮಹಾದೇವಿಯದು. ಶರಣರ ಚರಿತ್ರೆಗೆ ಸಂಬಂಧಪಟ್ಟಂತೆ ಅನೇಕ ಅಸ್ಪಷ್ಟತೆಗಳು ಅಲ್ಲಲ್ಲಿ ಉಳಿದುಕೊಂಡಿದ್ದು, ಇದಕ್ಕೆ ಅಕ್ಕಮಹಾದೇವಿ ಹೊರತಾಗಿಲ್ಲ[1]. ಆದರೆ, ಅಕ್ಕನ ಜೀವನದ ಬಗೆಗೆ ತಿಳಿದುಕೊಳ್ಳಲು ಅಕ್ಕನನ್ನು ಕುರಿತು ರಚಿತವಾಗಿರುವ ಕಾವ್ಯಗಳು ಸಹಾಯಕವಾಗುತ್ತವೆ. ಅಂದರೆ, ಹರಿಹರನಿಂದ ಹಿಡಿದು ರಾಚಕವಿಯವರೆಗೆ ರಚಿತವಾಗಿರುವ ಸ್ವತಂತ್ರ ಕಾವ್ಯಗಳು ಅಕ್ಕನ ಜೀವನ ಚರಿತ್ರೆಗಳನ್ನು ತಿಳಿಸುವಂಥವುಗಳೇ ಆಗಿವೆ. ತೆಲುಗು ಸಾಹಿತ್ಯದಲ್ಲಿ ಅಕ್ಕನ ಪ್ರಸ್ತಾಪವು ಪಾಲ್ಕುರಿಕೆ ಸೋಮನಾಥ ಕವಿಯ 'ಪಂಡಿತಾರಾಧ್ಯ ಚರಿತ್ರೆ'ಯಲ್ಲಿ ಕಂಡುಬರುತ್ತದೆ. ಕವಿ ಬಾಲಪಾಂಪಾಂಬಾ ರಚಿಸಿರುವ ಅಕ್ಕಮಹಾದೇವಿ ಬೋಧೋಲ್ಲಾಸವು ಅಕ್ಕನನ್ನು ಕುರಿತ ಸ್ವತಂತ್ರ ತೆಲುಗು ಕಾವ್ಯ[2].

ಈ ಕಾವ್ಯಗಳು ಒದಗಿಸುವ ಆಧಾರಗಳ ಮೇಲೆ ಅಕ್ಕನ ಹುಟ್ಟೂರು ಉಡುತಡಿ. ಇಂದಿನ ಉಡುಗಣಿಯೊಂದಿಗೆ ವಿದ್ವಾಂಸರು ಸಮೀಕರಿಸುತ್ತಾರೆ. ಬೇರೆ ಗ್ರಾಮಗಳ ಉಲ್ಲೇಖ ಒಂದೆರಡು ಕಡೆ ಬಂದರೂ ಅವು ಉಪೇಕ್ಷೆಗೆ ಯೋಗ್ಯವಾದವುಗಳೆಂದೇ ಹೇಳಬಹುದು. ಮಹಾದೇವಿ ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ ಎಂದು ಕಾವ್ಯಗಳು ಹೇಳುತ್ತಲಿದ್ದರೂ ಇವು ಆ ಕಾಲದ ಆ ಪರಿಸರದ ಆ ವ್ಯಕ್ತಿನಾಮಗಳಾಗಿ ತೋರುವುದಿಲ್ಲವಾದ್ದರಿಂದ ಇವುಗಳನ್ನು ಕಲ್ಪಿತ ಹೆಸರುಗಳೆಂದೇ ಇಟ್ಟುಕೊಳ್ಳಬಹುದೇನೋ. ಮಹಾದೇವಿಯ ಜೀವನದ

ಮುಖ್ಯ ಘಟನೆಯೆಂದರೆ, ರಾಜನಾದ ಕೌಶಿಕನ ವ್ಯಾಮೋಹಕ್ಕೆ ಆಕೆ ಗುರಿಯಾದದ್ದು. ಈ ಕೌಶಿಕ ಯಾರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಬಗೆಯ ಹೆಸರು ಅಂದು ಪ್ರಚಾರದಲ್ಲಿ ಇರಲಿಲ್ಲವಾಗಿ ಇದನ್ನು ನಾವು ಕಲ್ಪಿತ ನಾಮವೆಂದು ಇಟ್ಟುಕೊಳ್ಳಬಹುದಾದರೂ ಇಂಥ ಒಂದು ಘಟನೆ ಅವಳ ಜೀವನದಲ್ಲಿ ಸಂಭವಿಸಿದುದು ಸತ್ಯವೆಂದು ತೋರುತ್ತದೆ.

ಅಕ್ಕಮಹಾದೇವಿ ಕೇಶಾಂಬರಿಯಾಗಿ ಅರಮನೆಯಿಂದ ಹೊರಬಿದ್ದಳು ಎಂದು ಕವಿಗಳು ಬರೆದಿರುವುದನ್ನು ಮುಂದಿನವರು ತಲೆಗೂದಲಿನಿಂದಲೇ ಮೈ ಮುಚ್ಚಿಕೊಂಡಳೆಂದು ಭಾವಿಸುತ್ತಾ ಬಂದಂತೆ ಕಾಣಿಸುತ್ತದೆ. ಇಲ್ಲಿ ಕೇಶಾಂಬರವೆಂದರೆ, ಕೂದಲಿನ ಬಟ್ಟೆ(ಕಂಬಳಿ) ಎಂದೇ ಅರ್ಥವಿದೆ ಎಂದು ಇತ್ತೀಚಿನ ವಿದ್ವಾಂಸರು ಹೇಳುತ್ತಿರುವುದು ಸರಿ ಎನಿಸುತ್ತದೆ. ಉಡುತಡಿ ತ್ಯಜಿಸಿದ ಅಕ್ಕ, ಕಲ್ಯಾಣಕ್ಕೆ ಹೋಗಿ ಶರಣರನ್ನು ಭೇಟಿಯಾದಳೆನ್ನುವುದು ಪ್ರಾಚೀನ ಕಾವ್ಯಗಳು ಹಾಗೂ ಶೂನ್ಯ ಸಂಪಾದನೆಗಳು ಏಕ ರೂಪವಾಗಿ ನಿರೂಪಿಸಿದಂತೆ ಕಾಣಿಸುತ್ತದೆ. ಇದಕ್ಕೆ ಉದಾಹರಣೆಗಳೆಂಬಂತೆ, ಅಕ್ಕ ಅನುಭವ ಮಂಟಪಕ್ಕೆ ಬಂದು ಹಲವು ವಚನಕಾರರ ಜತೆ ಬೆರೆತಿದ್ದಳೆಂಬುದು ಅವಳ ಕೆಲವೊಂದು ವಚನಗಳು ತಿಳಿಸುತ್ತವೆ[3] .

"ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ
ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ
ಅಜಗಣ್ಣನ ಐಕ್ಯಸ್ಥಳ, ನಿಜಗುಣನ ಆರೂಢಸ್ಥಲ
ಸಿದ್ಧರಾಮಯ್ಯನ ಸಮಾಧಿ ಸ್ಥಲ
ಇಂತಿವರ ಕರುಳ ಪ್ರಸಾದ ಎನಗಾಯ್ತು ಚೆನ್ನಮಲ್ಲಿಕಾರ್ಜುನಯ್ಯಾ[4]"

ಎಂದು ವಚನಕಾರರನ್ನು ನೆನಪಿಸಿಕೊಳ್ಳುವಾಗ ಈಕೆ ಅನುಭವ ಮಂಟಪಕ್ಕೆ ಬಂದಿದ್ದಳೆಂಬುದು ಸಾಬೀತಾಗುತ್ತದೆ. ಇಲ್ಲಿಗೆ ಬಂದ ಅಕ್ಕ, ಅವಳೇ ಹೇಳುವಂತೆ 'ನಾಮದಲ್ಲಿ ಹೆಂಗಸೆಂಬ ಹೆಸರಾದಡೆಯೂ ಭಾವಿಸಲು ಗಂಡು ರೂಪು' ಎಂಬಂತೆ ವ್ಯಕ್ತಿತ್ವವನ್ನು ರೂಪಿಸಿಕೊಂಡಳು. ಮುಂದೆ ಕಲ್ಯಾಣವನ್ನು ಬಿಟ್ಟು ಕದಳಿಗೆ ಹೋದ ಅವಳ ಜೀವನದ ವಿವರಗಳು ಅಷ್ಟಾಗಿ ತಿಳಿದು ಬಂದಿಲ್ಲ.

ಅಕ್ಕಮಹಾದೇವಿ ಒಬ್ಬ ಶ್ರೇಷ್ಠ ವಚನಕಾರ್ತಿ; ಶ್ರೇಷ್ಠ ಕವಯಿತ್ರಿ. ಈಗ ಅವಳ ಒಟ್ಟು 434 ವಚನಗಳು ಲಭ್ಯವಿವೆ. ಆಕೆಯ ಬರವಣಿಗೆ ಭಾವಗೀತಾತ್ಮಕವಾದದ್ದು. ಶರಣಸತಿ ಲಿಂಗಪತಿ ಎಂಬ ಭಾವವನ್ನು ಸ್ಥಾಯಿಯಾಗಿ ಹಿಡಿದು ಬರೆದ ವಚನಗಳಲ್ಲಿ ಒಂದು ಬಗೆಯ ಔನ್ನತ್ಯವಿದೆ. ಯೋಗಾಂಗ ತ್ರಿವಿಧಿ, ಸ್ವರವಚನ, ಸೃಷ್ಟಿಯ ವಚನ, ಮಂತ್ರ ಗೋಪ್ಯಗಳೆಂಬ ಲಘು ಕೃತಿಗಳನ್ನು ಬರೆದಿದ್ದರೂ ಅಕ್ಕನ ಅಂತರಂಗ ದರ್ಶನವಾಗುವುದು ಆಕೆಯ ವಚನಗಳಲ್ಲೇ.

ಅಕ್ಕಮ್ಮ

ಈಕೆಯ ಹೆಸರೊಂದನ್ನು ಬಿಟ್ಟರೆ ಬದುಕಿನ ಬಗೆಗೆ ಯಾವುದೇ ಪುರಾವೆಗಳು ದೊರೆತಿಲ್ಲ. ಆದರೆ, ಈಕೆಯ 154 ವಚನಗಳು ದೊರೆತಿದ್ದು, ಅವು ಶೀಲ, ವ್ರತ, ನೇಮ, ಆಚಾರದ ಬಗ್ಗೆ ತಿಳಿಸುತ್ತವೆ. 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬುದು ಈಕೆಯ ವಚನಗಳ ಅಂಕಿತ. ಕೇತಯ್ಯ ಮತ್ತು ಅಕ್ಕಮ್ಮನ ನಡುವೆ ಸಂಬಂಧವಿರಬಹುದೆ

ಎಂಬ ಪ್ರಶ್ನೆ ಎತ್ತಿದ್ದರಾದರು ಸಾಬೀತು ಪಡಿಸುವ ಆಧಾರಗಳಿಲ್ಲ.

ಅಮುಗೆ ರಾಯಮ್ಮ

'ಅಮುಗೇಶ್ವರಲಿಂಗ' ಅಂಕಿತದಲ್ಲಿ ಮೂರು ಮಂದಿ ವಚನಕಾರ್ತಿಯರ ವಚನಗಳು ದೊರೆತಿದ್ದು, ಸಂದೇಹಕ್ಕೆ ಎಡೆಮಾಡಿಕೊಟ್ಟಿದೆ. 'ಅಮುಗೆ ದೇವಯ್ಯಗಳ ಪುಣ್ಯಸ್ತ್ರೀ ವಚನ', 'ಅಮುಗೆ ರಾಯಮ್ಮನ ವಚನ' ಹಾಗೂ 'ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮನ ವಚನ' ಶೀರ್ಷಿಕೆಗಳ ಕೆಳಗೆ 'ಅಮುಗೇಶ್ವರಲಿಂಗ ಅಂಕಿತದ ವಚನಗಳು ದೊರಕುತ್ತವೆ[5]. ಈಕೆ ಬಸವಯುಗದ ವಚನಕಾರ್ತಿ ಎಂದು ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ಶಾಂತ ಇಮ್ರಾಪುರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವಚನಕಾರ ಅಮುಗೆ ದೇವಯ್ಯ ರಾಯಮ್ಮನ ಪತಿ.

ಅಮುಗೆ ದೇವಯ್ಯನಿಗೆ ಸಂಬಂಧಿಸಿದಂತೆ ವೀರಶೈವ ಕಾವ್ಯ ಪುರಾಣಗಳಲ್ಲಿ ಪವಾಡಾತ್ಮಕ ಕಥೆ ಬರುತ್ತದೆ. ಅದರ ಪ್ರಕಾರ ಇವರ ಮೂಲ ಸ್ಥಳ ಸೊನ್ನಲಾಪುರ. ಈ ದಂಪತಿಗಳು ನೇಯ್ಗೆಯ ಕಾಯಕದ ಲಿಂಗ ಭಕ್ತರು. ಸೊನ್ನಲಾಪುರದಲ್ಲಿ ವಾಸಿಸುತ್ತಿದ್ದ ಈ ದಂಪತಿಗಳು ಲಿಂಗವಿಲ್ಲದ ಭವಿ ಸೇವೆಯ ಮಾಡಲಾಗದು ಎನ್ನುವ ವ್ರತನಿಷ್ಠೆಯನ್ನು ಕೈಗೊಂಡಿರುತ್ತಾರೆ[6]. ಒಂದು ದಿನ ಸಿದ್ಧರಾಮಯ್ಯ ಕಪಿಲಸಿದ್ಧ ಮಲ್ಲಿನಾಥನ ಹಬ್ಬಕ್ಕೆಂದು ಊರವರಿಗೆಲ್ಲ ಕೊಟ್ಟಣ ಹಾಕಿಸಿ ಭತ್ತ ಕುಟ್ಟಲು ಹೇಳಿದ. ಅದನ್ನು ನಿರಾಕರಿಸಿದ ಏಕಲಿಂಗ ನಿಷ್ಠೆಯುಳ್ಳ ಅಮುಗೆ ದೇವಯ್ಯ ದಂಪತಿಗಳು 'ಲಿಂಗವಿಲ್ಲದ ಭವಿಯ ಸೇವೆಯ ಮಾಡಲಾರೆವು' ಎಂದು ಕಲ್ಯಾಣದತ್ತ ಸಾಗುತ್ತಾರೆ.

ಕಲ್ಯಾಣದ ಅನುಭವ ಮಂಟಪದ ಸದಸ್ಯರಾಗಿ ಅನುಭಾವಗೋಷ್ಠಿಯಲ್ಲಿ ಪಾಲ್ಗೊಳ್ಳುತ್ತಾರೆ. ಕಲ್ಯಾಣ ಕ್ರಾಂತಿಯ ನಂತರ 'ಪುಳಜೆ' ಎಂಬ ಗ್ರಾಮಕ್ಕೆ ಬಂದು ಅಲ್ಲಿಯೇ ಐಕ್ಯರಾಗುತ್ತಾರೆ. ಈಗ ಅಮುಗೆ ರಾಯಮ್ಮನ 116 ವಚನಗಳು ದೊರೆತಿದ್ದು, ಅಕ್ಕಮ್ಮನಂತೆ ಆಚಾರಶೀಲಳಾದ ಈಕೆಯ ವಚನಗಳ ವಸ್ತುವು ಆಚಾರ ಪ್ರಧಾನವಾಗಿದ್ದು, ಸಮಾಜದ ವಿಮರ್ಶೆ ಅಕ್ಕಮ್ಮನಿಗಿಂತಲೂ ಹೆಚ್ಚು ತೀಕ್ಷ್ಣವಾಗಿ ಅಷ್ಟೇ ಕಟುವಾಗಿ ನಡೆದಿದೆ. 'ಕುಂಜರನ ವೇಷವ ತೊಟ್ಟು ಹಂದಿಯಂತೆ ತಿರುಗುವ ಅಜ್ಞಾನಿಗಳನೇನೆಂಬೆನಯ್ಯ?' ಎಂದು ಅಜ್ಞಾನಿಗಳನ್ನು ಕುರಿತು ಪ್ರಶ್ನಿಸಿ 'ಕತ್ತಲೆಯ ಮನೆಯ ಸಕ್ಕರೆಯ ಸವಿಯಂತಿರಬೇಕು ಎಂದು ಜ್ಞಾನಿಯಾದವನನ್ನು ಕುರಿತು ನುಡಿಯುತ್ತಾಳೆ.[7]

ಆಯ್ದಕ್ಕಿ ಲಕ್ಕಮ್ಮ

ಆಯ್ದಕ್ಕಿ ಮಾರಯ್ಯನ ಹೆಂಡಿತಿ ಆಯ್ದಕ್ಕಿ ಲಕ್ಕಮ್ಮ. ಶರಣರ ಕಾಯಕ ತತ್ವವನ್ನೇ ಜೀವನದ ಬಹುಮುಖ್ಯ ಮೌಲ್ಯವನ್ನಾಗಿಸಿಕೊಂಡ ದಂಪತಿಗಳಿವರು. ಹೆಸರೇ ಸೂಚಿಸುವಂತೆ ಇವರ ಕಾಯಕ ಅಕ್ಕಿಯನ್ನು ಆಯುವುದು. ಮೂಲತಃ ಇವರು ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕ ಅಮರೇಶ್ವರ ಗ್ರಾಮದವರು. 'ಮಾರಯ್ಯಪ್ರಿಯ ಅಮರೇಶ್ವರಲಿಂಗ' ಎಂಬುದು ಈಕೆಯ ಅಂಕಿತ. ಇಲ್ಲಿಯವರೆಗೆ ಈಕೆಯ 25 ವಚನಗಳು ಲಭ್ಯವಾಗಿವೆ.[8]

ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ', ಸಿದ್ಧನಂಜೇಶನ 'ಗುರುರಾಜ ಚಾರಿತ್ರ',

'ಭೈರವೇಶ್ವರ ಕಾವ್ಯ'ದಲ್ಲಿ ಈ ದಂಪತಿಗಳ ಕಾಯಕ ನಿಷ್ಠೆ ಮತ್ತು ಜಂಗಮ ಭಕ್ತಿಯನ್ನು ಕೊಂಡಾಡಲಾಗಿದೆ.[9] ಬಸವಣ್ಣನ ಕೀರ್ತಿವಾರ್ತೆ ಕೇಳಿ ಕಲ್ಯಾಣಕ್ಕೆ ಬಂದು ಅಲ್ಲಿ ಮಹಾದೇವಿಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ಜಂಗಮ ದಾಸೋಹ ಮಾಡುವ ಕಾಯಕವನ್ನು ಕೈಗೊಳ್ಳುತ್ತಾರೆ. ಹೀಗೆ ಇವರನ್ನು ಪರೀಕ್ಷಿಸಲು ಬಸವಣ್ಣ ಒಂದು ದಿನ ಎಂದಿಗಿಂತ ಹೆಚ್ಚು ಅಕ್ಕಿಯನ್ನು ಅಂಗಳದಲ್ಲಿ ಚೆಲ್ಲಿಸುತ್ತಾನೆ. ಮಾರಯ್ಯ ಅದನ್ನೆಲ್ಲಾ ಸಂತೋಷದಿಂದ ಆಯ್ದು ತಂದು ಹೆಂಡತಿಯ ಕೈಯಲ್ಲಿ ಕೊಡುತ್ತಾನೆ.

ಅದನ್ನು ಕಂಡು ಆಕೆ ಖುಷಿ ಪಡುವ ಬದಲು ಕೋಪಿಸಿಕೊಂಡು 'ಒಮ್ಮನವ ಮೀರಿ ಹಿಮ್ಮನದಲಿ ತಂದಿರಿ ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೋ' ಎಂದು ಪತಿಯ ಕಾಯಕ ನಿಷ್ಠೆಯನ್ನು ಅನುಮಾನಿಸಿ ಹೆಚ್ಚಿನ ಅಕ್ಕಿಯನ್ನು ಮರಳಿ ಸುರಿದು ಬರುವಂತೆ ಸೂಚಿಸುತ್ತಾಳೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಕಾಳವ್ವೆ ಏಕೈಕ ದಲಿತ ವಚನಕಾರ್ತಿ. ಪ್ರಮುಖ ಶೂದ್ರ ವಚನಕಾರನಾದ ಉರಿಲಿಂಗಪೆದ್ದಿಗಳ ಸತಿ. ಈಕೆಯ ಜೀವನಕ್ಕೆ ಸಂಬಂಧಿಸಿದ ಯಾವ ವಿಷಯವೂ ದೊರಕುವುದಿಲ್ಲ.[10] ಈಕೆಯ 12 ವಚನಗಳು ಸಿಕ್ಕಿದ್ದು 'ಉರಿಲಿಂಗಪೆದ್ದಿಗಳರಸ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಈಕೆಯ ವಚನಾಂಕಿತ ದಲಿತ ಸಂವೇದನೆಯ ಮೇಲೆ ಬೆಳಕು ಬೀರುವಂತೆ ಇದೆ.

ಕಾಳವ್ವೆಯ 12 ವಚನಗಳು ಆಕೆಯ ವ್ಯಕ್ತಿತ್ವನ್ನು ಪರಿಚಯಿಸುವ ಆಕರ ಸಾಮಗ್ರಿ, ಉರಿಲಿಂಗಪೆದ್ದಿಗಳ ಜೀವನ ವೃತ್ತಾಂತವನ್ನು ನಿರೂಪಿಸುವ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ'ದ ಕಥಾನಕದ ಪ್ರಕಾರ ಕಳ್ಳನಾಗಿದ್ದ ಶೂದ್ರ ಕುಲದ ಪೆದ್ದಣ್ಣನೇ ಗುರು ಸೇವೆ, ಶ್ರದ್ಧಾಭಕ್ತಿಯಿಂದ ಗುರುಲಿಂಗ ದೇವರಿಂದ ಲಿಂಗ ದೀಕ್ಷೆ ಪಡೆದು ಉರಿಲಿಂಗ ಪೆದ್ದಿಗಳಾಗಿ ಆಚಾರ್ಯ ಪೀಠಕ್ಕೆ ಪಟ್ಟಾಭಿಷಕ್ತರಾಗುತ್ತಾರೆ.

ಉರಿಲಿಂಗ ಪೆದ್ದಿಗಳ ಈ ವೃತ್ತಾಂತದಲ್ಲಿ ಕಾಳವ್ವೆಯ ಪ್ರಸ್ತಾಪ ಬರದಿರುವುದರಿಂದ ಉರಿಲಿಂಗ ಪೆದ್ದಿಗಳ ಮೂಲಕವೇ ಕಾಳವ್ವೆಯ ಜೀವಿತ ಕಾಲವನ್ನು ನಿರ್ಣಯಿಸಬೇಕಾಗುತ್ತದೆ. ಉರಿಲಿಂಗ ಪೆದ್ದಿಗಳು ಬಸವಣ್ಣನ ಸಮಕಾಲೀನ ವಚನಕಾರರು. ಹಾಗಾಗಿ ಈಕೆಯೂ ಕೂಡ ಬಸವಣ್ಣನ ಕಾಲಘಟ್ಟದವಳೆಂದು ತಿಳಿದು ಬರುತ್ತದೆ.[11]

ಎಡೆಮಠದನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

ಕಾಳವ್ವೆಯಂತೆ ಈಕೆಯ ಜೀವನದ ವೈಯಕ್ತಿಕ ವಿವರಗಳು ತಿಳಿದಿಲ್ಲ. ಮಸಣಮ್ಮನು ಎಡೆಮಠದ ನಾಗಿದೇವನ ಹೆಂಡತಿ. 'ನಿಜಗುಣೇಶ್ವರಲಿಂಗ' ಈಕೆಯ ವಚನ ಮುದ್ರಿಕೆ ಎಂದು ಫ.ಗು.ಹಳಕಟ್ಟಿಯವರು ಗುರುತಿಸಿದ್ದಾರೆ. ಈಕೆಯ ಏಕೈಕ ವಚನ ಮಾತ್ರ ದೊರೆತಿದೆ. ಪತಿಯೊಂದಿಗೆ ಕಾಂಚೀನಗರದಿಂದ ಕರ್ನಾಟಕಕ್ಕೆ ಬಂದಳೆಂದು ಹಳಕಟ್ಟಿ ಅಭಿಪ್ರಾಯಪಡುತ್ತಾರೆ.[12]

ಕದಿರೆ ಕಾಯಕದ ಕಾಳವ್ವೆ

ನೇಯ್ಗೆ ವೃತ್ತಿಯ ಕಾಳವ್ವೆ ಕಾಲ ಸುಮಾರು 1160. ಈಕೆಯ ಹೆಸರಿನ ಹಿಂದಿರುವ 'ಕದಿರ' ಎಂಬ ವಿಶೇಷಣ ಇರುವುದರಿಂದ ರಾಟೆಯ ಮೂಲಕ ನೂಲು ತೆಗೆಯುವ ವೃತ್ತಿ ಮಾಡುತ್ತಿದ್ದಳೆಂದು ಗುರುತಿಸಲಾಗಿದೆ. 'ಗುಮ್ಮೇಶ್ವರ' ಎಂಬ ಅಂಕಿದಲ್ಲಿ ಈಕೆಯ ಒಂದು ವಚನ ಸಿಕ್ಕಿದೆ.[13]

ಕದಿರ ರೆಮ್ಮವ್ವೆ

ರೆಬ್ಬವ್ವೆ, ರೆಮ್ಮವ್ವೆ ನಾಮಾಂತರಗಳಿಂದ ಗುರುತಿಸಲಾಗಿರುವ ರೆಮ್ಮವ್ವೆ ವಚನಕಾರ್ತಿ. ಕವಿಚರಿತೆಕಾರರು ಊಹಿಸಿರುವಂತೆ ಈಕೆಯ ಕಾಲ 1160.[14] ಹರಿಹರ ಕವಿಯು 'ಲಿಂಗಾರ್ಚನೆಯ ರಗಳೆ'ಯಲ್ಲಿ "ಅಮ್ಮವ್ವ, ರೆಮ್ಮವ್ವೆ, ಕದಿರ ರೆಮ್ಮವ್ವೆಯಂ" ಎಂದು ಸ್ತುತಿಸಿದ್ದಾನೆ. ಜತೆಗೆ ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ ಇತ್ಯಾದಿ 12ನೇ ಶತಮಾನದ ಶರಣರ ವಚನಗಳ ಸ್ಥಳಕಟ್ಟಿನ ಪ್ರಾಚೀನ ವಚನ ಸಂಕಲನಗಳಲ್ಲಿ ಕದಿರ ರೆಮ್ಮವ್ವೆಯ ವಚನಗಳು ಸಿಗುವುದರಿಂದ ಈಕೆ ಬಸವಣ್ಣನ ಸಮಕಾಲೀನ ವಚನಕಾರ್ತಿ ಎಂದು ಕವಿಚರಿತೆಕಾರರ ಅಭಿಪ್ರಾಯವನ್ನು ವಿದ್ವಾಂಸರು ಅನುಮೋದಿಸಿದ್ದಾರೆ.[15]

ಈಕೆಯ ಹೆಸರಿನೊಂದಿಗಿರುವ 'ಕದಿರ' ವಿಶೇಷಣದಿಂದಾಗಿ ಕವಿಚರಿತೆಕಾರರು 'ಈಕೆ ಕದಿರೆ ರೆಮ್ಮಯ್ಯನ ಅನುಬಂಧಿನಿ' ಎಂದು ನಿರ್ಣಯಿಸಿದ್ದಾರೆ. ಆದರೆ, ರೆಮ್ಮವ್ವೆಯ ಸಂದರ್ಭದಲ್ಲಿ 'ಕದಿರ' ವೃತ್ತಿ ವಾಚಕ ನೂಲುವ ಕಾಯಕ ವಿಶೇಷಣವಾಗಿ ಬಳಕೆಯಾದರೆ, ರೆಮ್ಮಯ್ಯನ ವಿಶೇಷಣ 'ಕದಿರ' ಸ್ಥಳವಾಚಕ ಪದವಾಗಿದೆ. 'ಕದಿರ' ಶಿವಮೊಗ್ಗ ಜಿಲ್ಲೆಯ ಒಂದು ಊರು.[16]

ರೆಮ್ಮಯ್ಯನವರನ್ನು ಪ್ರಸ್ತಾಪಿಸುವ ಕಾವ್ಯಗಳಲ್ಲಿ ರೆಮ್ಮವ್ವೆಯ ಪ್ರಸ್ತಾಪವಿಲ್ಲದಿರುವುದು ಮತ್ತು ಇವರಿಬ್ಬರ ದಾಂಪತ್ಯ ಸಂಬಂಧವನ್ನು ಪೋಷಿಸುವ ಉಲ್ಲೇಖಗಳು ದೊರೆಯದಿರುವುದರಿಂದ ರೆಮ್ಮವ್ವೆಯು, ಕದಿರ ರೆಮ್ಮಯ್ಯನವರ ಪತ್ನಿ ಎನ್ನುವ ಕವಿಚರಿತೆಕಾರರ ಅಭಿಪ್ರಾಯ ಊಹೆ ಮಾತ್ರವಾಗಿ ಉಳಿಯುತ್ತದೆ.[17] ಕಾಯಕದ ಪರಿಭಾಷೆಯ ಮೂಲಕ ವ್ರತನಿಷ್ಠೆಯನ್ನು ಎತ್ತಿಹಿಡಿದಿರುವುದು ವಚನಗಳ ವಿಶೇಷವಾಗಿದೆ. ಈಕೆಯ ವಚನಗಳ ಅಂಕಿತ 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ'. ಈಕೆಯ ನಾಲ್ಕು ವಚನಗಳು ದೊರೆತಿದ್ದು, ನಾಲ್ಕರಲ್ಲಿ ಮೂರು ಬೆಡಗಿನ ವಚನಗಳಾಗಿದ್ದು, ಒಂದು ಸರಳ ವಚನವೆನಿಸಿದೆ. ಬೆಡಗಿನ ವಚನಗಳಿಗೆ ಸಿಂಗಳದ ಸಿದ್ಧ ಬಸವರಾಜ ಟೀಕೆಯನ್ನು ಬರೆದಿದ್ದಾನೆ.[18]

ಕನ್ನಡಿ ಕಾಯಕದ ರೇವಮ್ಮ

ಈಕೆಗೆ ರೆಮ್ಮವ್ವ, ರೆಮ್ಮವ್ವೆ ಎಂಬ ಹೆಸರುಗಳು ಉಂಟು ಈಕೆಯನ್ನು ಕುರಿತಂತೆ ಚಾರಿತ್ರಿಕ ವಿವರಗಳು ತಿಳಿದು ಬಂದಿಲ್ಲವಾದರೂ ಹೆಸರಿನ ಹಿಂದೆ ಸೇರಿದ ವಿಶೇಷಣದಿಂದ ಈಕೆ ಕ್ಷೌರಿಕ ಜಾತಿಗೆ ಸೇರಿದವಳೆಂದು ತಿಳಿಯುತ್ತದೆ. 'ಕನ್ನಡಿ ಕಾಯಕದ ಅಮ್ಮಿದೇವಯ್ಯ' ಎಂಬ ಹೆಸರಿನ ಒಬ್ಬ ವಚನಕಾರನು ಇದ್ದು; ಇವರಿಬ್ಬರ ಹೆಸರಿನೊಂದಿಗಿರುವ ಸಮಾನ ವಿಶೇಷಣವನ್ನು ಗಮನಿಸಿದರೆ, ಇವರಿಬ್ಬರಲ್ಲಿ ಸಂಬಂಧದ ಸಾಧ್ಯತೆ ಇದೆ ಎನಿಸಿದರೂ

ಅಧಿಕೃತ ದಾಖಲೆಗಳು ದೊರೆತಿಲ್ಲ. 'ಕನ್ನಡಿ ಕಾಯಕ' ಎಂದರೆ 'ಕ್ಷೌರಿಕ ವೃತ್ತಿ' ಎಂದು ತಿಳಿಯಲು ಅಮ್ಮಿದೇವಯ್ಯನ ವಚನಗಳಲ್ಲಿ ಈ ವೃತ್ತಿಗೆ ಸಂಬಂಧಿಸಿದ ಕತ್ತಿ, ಕತ್ತರಿ, ಕನ್ನಡಿ ಮೊದಲಾದ ವಸ್ತುಗಳು ಬಳಕೆಯಾಗಿರುವುದು ಮತ್ತು ರೇವಮ್ಮನು ತನ್ನ ವಚನದಲ್ಲಿ ಕನ್ನಡಿ ಉಲ್ಲೇಖ ಮಾಡಿರುವುದು ಕಾರಣವಾಗಿದೆ.[19]

ಶಿಕ್ಷಣ, ಸಾಮಾಜಿಕ ಮನ್ನಣೆ ಮತ್ತು ಧಾರ್ಮಿಕ ಪ್ರಪಂಚದಿಂದ ಬಹು ದೂರವೇ ಉಳಿದಿದ್ದ ಕೆಳ ಜಾತಿ ವರ್ಗಗಳಲ್ಲಿ ಶರಣರು ಮೂಡಿಸಿದ ಸಮಾನತೆ, ಸ್ವಾವಲಂಬನೆ, ವೃತ್ತಿ ಗೌರವದ ಎಚ್ಚರದಿಂದಾಗಿ ಅಸ್ಪೃಶ್ಯರೆಂದು ದೂರ ಉಳಿದಿದ್ದ ಅಸಂಖ್ಯ ಜನ ಶರಣಧರ್ಮ ಅನುಯಾಯಿಗಳಾದರು. ಕ್ಷೌರಿಕ ವೃತ್ತಿಗಂಟಿದ ಮೈಲಿಗೆ ಭಾವನೆಯನ್ನು ತೊಡೆದು ಹಾಕಿ ಬಸವಣ್ಣನಿಂದ ಮನ್ನಣೆಯನ್ನು ಪಡೆಯುತ್ತಾಳೆ. ಈಕೆಯ ಕಾಲ ಸುಮಾರು 1160 ಇರಬೇಕು ಎಂದು ಕವಿಚರಿತೆಕಾರರು ಊಹಿಸಿದ್ದಾರೆ. "ಸದ್ಗುರು ಸಂಗ ನಿರಂಗ ಲಿಂಗ" ಎಂಬುದು ವಚನಗಳ ಅಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದ್ದು, ಅದರಲ್ಲಿ 'ಕೈಯಲ್ಲಿ ಕನ್ನಡಿ ಇರಲು ತನ್ನ ತಾ ನೋಡಬಾರದೆ? ಲಿಂಗಜಂಗಮ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?' ಎಂದು ತನ್ನ ವ್ರತನಿಷ್ಠೆಯನ್ನು ಮೆರಯುತ್ತಾಳೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

ಕವಿಚರಿತೆಕಾರರು ಹೇಳುವಂತೆ ರೇಚವ್ವೆಯ ಕಾಲ ಕ್ರಿ.ಶ. ಸುಮಾರು 1160. ಈಕೆ ಕಾಟ ಕೂಟಯ್ಯಗಳ ಹೆಂಡತಿ ಎನ್ನುವುದನ್ನು ಬಿಟ್ಟರೆ, ಹೆಚ್ಚಿನ ವಿವರಗಳು ಲಭ್ಯವಿಲ್ಲ. ಸಿದ್ಧನಂಜೇಶನ ಗುರುರಾಜಚಾರಿತ್ರದಲ್ಲಿ ಬರುವ ಈಕೆ ಹೆಸರಿನ ಉಲ್ಲೇಖ ಒಂದು ಬಿಟ್ಟರೆ, ಮತ್ಯಾವ ಸಂಗತಿಗಳು ದೊರಕುವುದಿಲ್ಲ.[20]

ಕಾಟಕೂಟ ಎಂಬುದು ವಚನಕಾರ ವೀರಗೊಲ್ಲಾಳನ ಮೂಲ ಹೆಸರೆಂದು, ಅವನು ಕುರಿಕಾಯುವ ವೃತ್ತಿಯವನೆಂದು ಪ್ರಾಚೀನ ಕಾವ್ಯಗಳಿಂದ ತಿಳಿದುಬರುತ್ತದೆ. ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಗೋಲಗೇರಿ ಗ್ರಾಮದ ಶಿವಭಕ್ತ. 'ವೀರಬೀರೇಶ್ವರ ಲಿಂಗ' ಅಂಕಿತದಲ್ಲಿ ವಚನ ರಚಿಸಿರುವ ಈತ ಕುರುಬ ಕುಲದವನೆಂಬುವ ಅಭಿಪ್ರಾಯವಿದೆ. ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆಯೂ ವಾಸ್ತವವಾಗಿ ವಚನಕಾರ ವೀರಗೊಲ್ಲಾಳನ ಪತ್ನಿ ಎಂದು ಡಾ.ಎಂ.ಚಿದಾನಂದಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. "ನಿಜಶಾಂತೇಶ್ವರಾ" ಎಂಬ ಅಂಕಿತ ಹೊಂದಿರುವ ಈಕೆಯ ಒಂದು ವಚನ ಸಿಕ್ಕಿದೆ.[21]

ಕಾಲಕಣ್ಣಿಯ ಕಾಮಮ್ಮ

ಈಕೆಯ ಜೀವನ ಸಂಗತಿಗಳೇನು ಲಭ್ಯವಿಲ್ಲ. ಕವಿಚರಿತೆಕಾರರು ಈಕೆಯ ಕಾಲ ಸುಮಾರು 1500 ಎಂದಿದ್ದಾರೆ. 'ಸಕಲ ಪುರಾತನರ ವಚನಗಳು' ಕಟ್ಟುಗಳಲ್ಲಿ ಬಸವಾದಿ ಶರಣರ ಸಮಕಾಲೀನ ಶರಣೆಯರ ಜತೆಗೆ ಈಕೆಯ ವಚನವೂ ಸೇರಿಕೊಂಡಿರುವುದರಿಂದ, ಇವಳು ಅದೇ ಕಾಲದವಳಿರುವ ಸಂಭವವಿದೆ. ಈಕೆಯ ಹೆಸರಿನ ಹಿಂದೆ ಸೇರಿದ ಕಾಲಕಣ್ಣಿ ಎಂಬುದು ವೃತ್ತಿ ಸೂಚಕ ವಿಶೇಷಣವಾಗಿರಬೇಕು. 'ಕಣ್ಣಿ' ಎಂದರೆ ದನಕರುಗಳನ್ನು ಕಟ್ಟುವ ಒಂದು ಹಗ್ಗ ವಿಶೇಷ. ಇಂಥ ಹಗ್ಗವನ್ನು ಹೊಸೆದು ಮಾರುವ ಕಾಯಕ ಇವಳದಾಗಿರಬೇಕು. ಹಿಂದೆ ಕುಂಚಿ ಕೊರವರು ಈ ಕಾಯಕವನ್ನು ಮಾಡುತ್ತಿದ್ದುದನ್ನು,

ಇಂದಿಗೂ ಕೊರವರು ಇದನ್ನು ಮುಂದುವರೆಸಿಕೊಂಡು ನಡೆದಿರುವುದನ್ನು ಗಮನಿಸಿದರೆ ಈಕೆ ಕೊರವ ಜಾತಿಗೆ ಸೇರಿದವಳಾಗಿರಬೇಕು ಎಂದು ಊಹಿಸಲು ಅವಕಾಶವಿದೆ.

'ನಿರ್ಭೀತ ನಿಜಲಿಂಗ' ಎಂಬ ಅಂಕಿತದಲ್ಲಿ ಈಕೆಯ ಒಂದು ವಚನ ಮಾತ್ರ ದೊರೆತಿದೆ. ಅದು ಆಕೆಯ ವ್ಯಕ್ತಿತ್ವನ್ನು ಸಾರ್ಥಕವಾಗಿ ಪ್ರತಿಮಿಸಿದೆ.[22]

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

'ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ'ನ ವಚನ ಸಿಕ್ಕಿದ್ದು, 'ಅಜಗೇಶ್ವರಲಿಂಗ' ಎಂಬ ಅಂಕಿತವನ್ನು ಹೊಂದಿದೆ. ಇದು 'ಸಕಲ ಪುರಾತನರ ವಚನಗಳ' ಕಟ್ಟುಗಳಲ್ಲಿ ದೊರೆತಿದೆ. 'ಶಿವತತ್ವಚಿಂತಾಮಣಿ', 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ' ಮುಂತಾದ ವೀರಶೈವ ಕಾವ್ಯಗಳಲ್ಲಿ ಕೊಂಡೆಮಂಚಣ್ಣ ಯಾರೆಂಬುದರ ಮತ್ತು ಆತ ಬಿಜ್ಜಳನ ಆಸ್ಥಾನದ ಮಂತ್ರಿ, ಗುಪ್ತಭಕ್ತ ಎಂದು ಚಿತ್ರಿಸಿವೆಯೇ ಹೊರತು, ಆತನ ಪತ್ನಿಯಾದ ಲಕ್ಷ್ಮಮ್ಮನ ಬಗೆಗೆ ಅಂಥ ಉಲ್ಲೇಖಗಳು ದೊರೆತಿಲ್ಲ. ಆದರೆ, ಹೆಸರಿನ ಮುಂದೆ ಇರುವ ಉಲ್ಲೇಖದಿಂದಾಗಿ ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ.[23]

ಈಕೆಯ ಒಂದು ವಚನ ಮಾತ್ರ ಲಭ್ಯವಿದೆ.

"ಆಯುಷ್ಯ ತೀರಲು ಮರಣ;
ವ್ರತ ತಪ್ಪಲು ಶರೀರ ಕಡೆ.
ಮೇಲು ವ್ರತವೆಂಬ ತೂತರಮೆಚ್ಚ
ನಮ್ಮ ಅಜಗೇಶ್ವರಲಿಂಗ"[24]

ಎಂದು ಹೇಳುವಲ್ಲಿ ವ್ರತಭಂಗವನ್ನು ಸಾವಿಗೆ ಸಮಾನವಾಗಿ ಭಾವಿಸುವ ವ್ರತನಿಷ್ಠೆ ಈ ವಚನದಲ್ಲಿ ತಿಳಿಸುತ್ತಾಳೆ.

ಕೊಟ್ಟಣದ ಸೋಮಮ್ಮ

'ನಿರ್ಲಜ್ಜೇಶ್ವರ' ಎಂಬ ಅಂಕಿತವನ್ನು ಹೊಂದಿರುವ ಈಕೆಯ ಒಂದು ವಚನ ಮಾತ್ರ ದೊರೆತಿದ್ದು, ಕವಿಚರಿತೆಕಾರರು ಈಕೆಯ ಕಾಲವನ್ನು ಸುಮಾರು 1160 ಎಂದು ಗುರುತಿಸಿದ್ದಾರೆ. ಈಕೆಯ ಜೀವನ ವಿವರಗಳು ತಿಳಿದು ಬಂದಿಲ್ಲ. ಇವಳು ಕಾಯಕ ಜೀವಿಯಾಗಿ ಬಸವಾದಿ ಶರಣರ ಮಧ್ಯೆ ಬಾಳಿ ತನ್ನ ಜೀವನ ಸಾರ್ಥಕ ಪಡಿಸಿಕೊಂಡಿರಬೇಕು. ಇವಳ ಕಾಯಕ ಕೊಟ್ಟಣ ಕುಟ್ಟುವುದು. ಇದು ಈಕೆಯ ಹೆಸರಿಗೆ ಹತ್ತಿದ ವಿಶೇಷಣ ಮತ್ತು ವಚನಗಳಲ್ಲಿ ಬಳಸಿದ ದುಷ್ಟಾಂತಗಳಿಂದ ವ್ಯಕ್ತವಾಗುತ್ತದೆ.[25] 'ನಿರ್ಲಜ್ಜೇಶ್ವರ' ಅಂಕಿತದಲ್ಲಿ ಸೂಳೆ ಸಂಕವ್ವೆ ಕೂಡ ವಚನ ರಚಿಸಿದ್ದಾಳೆ. ಹೀಗೆ ಒಂದೇ ಅಂಕಿತದಲ್ಲಿ ಹಲವರು ವಚನ ರಚಿಸಿರುವುದು ವಚನ ಸಾಹಿತ್ಯದಲ್ಲಿ ಕಂಡುಬರುವ ಸಾಮಾನ್ಯ ಸಂಗತಿ.

ಬಸವಣ್ಣನ ಕಾಲದ ಶರಣ 'ನಿರ್ಲಜ್ಜ ಶಾಂತಯ್ಯ' ಅನೇಕ ಶಿಷ್ಯರನ್ನು ಹೊಂದಿದ್ದು, ಅವರಲ್ಲಿ ಸೋಮವ್ವೆಯೂ ಒಬ್ಬಳಾಗಿದ್ದಳೆಂದು ಫ.ಗು.ಹಳಕಟ್ಟಿಯವರು ತಿಳಿಸುತ್ತಾರೆ. ಈಕೆಯ ಹೆಸರಿಗೆ ಹತ್ತಿದ ವಿಶೇಷಣದಿಂದ ಗಮನಿಸುವುದೆಂದರೆ, ನಿತ್ಯ ಭಕ್ತರ ಮನೆಯ ಅಕ್ಕಿಯನ್ನು ಕುಟ್ಟುವುದು, ಅದರಿಂದ ಬಂದ ಧನದಿಂದ ಗುರುಲಿಂಗ ಜಂಗಮ ಸೇವೆಯನ್ನು ಮಾಡುವಲ್ಲಿ ನಿರತಳಾಗುತ್ತಿದ್ದಳು.[26]

ಗಂಗಾಂಬಿಕೆ

ಫ.ಗು.ಹಳಕಟ್ಟಿಯವರು ಗಂಗಾಂಬಿಕೆಯನ್ನು ಬಸವಣ್ಣನ ಎರಡನೇ ಹೆಂಡತಿ[27] ಎಂದು ಹೇಳಿದರೆ, ಶಿವಶರಣೆಯರ ವಚನ ಸಂಪುಟದಲ್ಲಿ ವೀರಣ್ಣ ರಾಜೂರ ಅವರು, ಬಸವಣ್ಣನವರ ಹಿರಿಯ ಪತ್ನಿ ಎಂದು ಹೇಳುತ್ತಾರೆ. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನದ ಉತ್ತರಾರ್ಧದಲ್ಲಿ ಕಲ್ಯಾಣವನ್ನಾಳಿದ ಕಳಚೂರಿ ಬಿಜ್ಜಳನ ಮಂತ್ರಿ ಬಲದೇವರ ಮಗಳು ಎಂದು, ಬಲದೇವ ಬಸವಣ್ಣನವರ ಸೋದರ ಮಾವ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[28]

ಬಸವಣ್ಣನವರ ಚರಿತ್ರೆಯನ್ನು ನಿರೂಪಿಸಿರುವ ಹರಿಹರನ ಬಸವದೇವರ ರಗಳೆ, ಭೀಮಕವಿಯ ಬಸವ ಪುರಾಣ, ಸಿಂಗಿರಾಜನ ಸಿಂಗಿರಾಜ ಪುರಾಣ. ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ, ಷಡಕ್ಷರದೇವನ ಬಸವರಾಜ ವಿಜಯ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಮುಖಬೋಳು ಸಿದ್ಧಲಿಂಗನ ಷಟ್‌ಸ್ಥಲ ತಿಲಕ, ಚೆನ್ನಪ್ಪ ಕವಿಯ ಶರಣಲೀಲಾಮೃತ ಮೊದಲಾದ ಕೃತಿಗಳಲ್ಲಿ ಈಕೆ ಬಸವಣ್ಣನ ಮೊದಲ ಪತ್ನಿ ಎಂದು ಸ್ಪಷ್ಟವಾಗಿ ಉಲ್ಲೇಖವಾಗಿರುವುದರಿಂದ ಬಸವಣ್ಣನವರ ಹಿರಿಯ ಪತ್ನಿ ಎಂಬುದನ್ನು ನಂಬಬಹುದಾಗಿದೆ ಎಂದು ಹೇಳಿದ್ದಾರೆ.

'ಗಂಗಾಪ್ರಿಯ ಕೂಡಲಸಂಗ' ಎಂಬ ಅಂಕಿತವನ್ನೊಳಗೊಂಡ ಈಕೆಯ ಒಂಬತ್ತು ವಚನಗಳು ದೊರೆತಿವೆ. ಅಲ್ಲದೆ, ಗಂಗಾಂಬಿಕೆಯ ಸಮಾಧಿ ಹುಬ್ಬಳ್ಳಿ ಸಮೀಪ ಮಲಪ್ರಭಾ ನದಿ ಎಡದಂಡೆಯ ಮೇಲಿದ್ದು; ಇಂದಿಗೂ ಸ್ಮಾರಕವಾಗಿ ಉಳಿದು ಬಂದಿದ್ದು. 'ಗಂಗಮ್ಮನ ಗುಡಿ' ಎಂದು ಜನ ಕರೆಯುತ್ತಾರೆ.[29]

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

ಈಕೆಯ ಹೆಸರು ತಿಳಿದಿಲ್ಲ. ಗಜೇಶ ಮಸಣಯ್ಯನ ಪತ್ನಿ ಎಂಬುದು ಹಸ್ತಪ್ರತಿಗಳಲ್ಲಿ ವಚನಗಳ ಹಣೆಯ ಮೇಲೆ ಬರೆದ ಉಲ್ಲೇಖದಿಂದ ತಿಳಿದುಬರುತ್ತದೆ. 'ಮಸಣಯ್ಯ ಪ್ರಿಯ ಗಜೇಶ್ವರ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾಳೆ. ಬಸವಾದಿ ಶರಣರ ಸಮಕಾಲೀನ ವಚನಕಾರರೆಂದು ಊಹಿಸಿರುವ ಕವಿಚರಿತೆಕಾರರು ಈಕೆಯ ಕಾಲ ಕ್ರಿ.ಶ.ಸುಮಾರು 1160 ಎಂದಿದ್ದಾರೆ. ಈಕೆಯನ್ನು ಕುರಿತಂತೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಈಗ ಈಕೆಯ 10 ವಚನಗಳು ದೊರೆತಿವೆ. ಗಜೇಶ ಮಸಣಯ್ಯ ಸತಿಪತಿಭಾವದ ಶ್ರೇಷ್ಠ ವಚನಕಾರ. ಇವನ ಸ್ಥಳ ಅಕ್ಕಲಕೋಟೆ ತಾಲ್ಲೂಕಿನ ಕರಂಜಿಗೆ ಗ್ರಾಮ. ಹಾಗಾಗಿ ಈಕೆಯ ಊರು ಇದೇ ಇದ್ದಿರಬೇಕು.[30]

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

ಈಕೆ ಕುಂಭದ ಗತಿಗೆ ಶಿವನನ್ನೇ ಕುಣಿಯುವಂತೆ ಮಾಡಿದ ಕುಂಬರ ಗುಂಡಯ್ಯನ ಸತಿ. ಬೀದರ ಜಿಲ್ಲೆಯ ಭಲ್ಲುಕೆ(ಭಾಲ್ಕಿ) ಈಕೆಯ ಸ್ಥಳ. ಪತಿಯ ಜತೆ ಗಡಿಗೆ ಸಿದ್ಧಪಡಿಸುವ ಕಾಯಕದಲ್ಲಿ ತೊಡಗಿದ ಈಕೆ ಬಸವಾದಿ ಶರಣ, ಶರಣೆಯರ ಪ್ರಭಾವದಿಂದ ವಚನ ರಚನೆಗೂ ಕೈ ಹಾಕಿದ್ದಾಳೆ. ಈಕೆಯ ಜೀವಿತ ಕಾಲ ಬಸಣ್ಣನ ಸಮಕಾಲೀನಳೆಂದು ನಂಬಿರುವುದರಿಂದ ಕ್ರಿ.ಶ.ಸುಮಾರು 1160. ಕೇತಲದೇವಿಯ ಲಿಂಗಭಕ್ತಿ ವ್ರತನಿಷ್ಠೆಯನ್ನು

ಬಿಂಬಿಸುವ ಒಂದು ಕಥೆ "ಭುವನಕೋಶ"ದಲ್ಲಿದೆ.

ಲಿಂಗಕ್ಕೆ ನಿತ್ಯವೂ ಪಾವುಡ ಹಾಕುತ್ತಿದ್ದುದನ್ನು ವ್ರತವಾಗಿ ಪಾಲಿಸುಕೊಂಡು ಬರುತ್ತಿದ್ದ ಕೇತಲದೇವಿಗೆ ಒಂದು ದಿನ ಪಾವುಡೆ ದೊರೆಯುವುದಿಲ್ಲ. ಆಗ ತನ್ನ ಎದೆಯ ಚರ್ಮವನ್ನು ಲಿಂಗಕ್ಕೆ ಪಾವುಡೆಯಾಗಿ ಹೊದಿಸಿ ಶಿವನ ಮೆಚ್ಚಿಗೆ ಪಡೆದಳು ಎನ್ನುವುದು ಈ ಕಥೆಯ ವಿವರಣೆ. ಈಕೆಯ ವಚನಗಳಲ್ಲಿ ಮಡಕೆ ಮಾಡುವ ಪ್ರಸ್ತಾಪವಿದೆ.[31]

'ಹದ ಮಣ್ಣಲ್ಲದೆ, ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲನಾಗಿ, ಕುಂಬೇಶ್ವರ'.[32]

ಇಲ್ಲಿ ವ್ರತವನ್ನು ಕುರಿತು ತನ್ನ ಕಾಯಕದ ಪರಿಭಾಷೆಯಲ್ಲೇ ವಿವರಿಸುತ್ತಾಳೆ. ಈಕೆಯ ಎರಡು ವಚನಗಳು ದೊರೆತಿವೆ. ಕುಂಬೇಶ್ವರ ಅಥವಾ ಕುಂಬೇಶ್ವರಲಿಂಗ ಎಂಬುದು ವಚನಗಳ ಅಂಕಿತವಾಗಿದೆ.

ಗೊಗ್ಗವ್ವೆ

'ಧೂಪದ ಗೊಗ್ಗವ್ವೆ' ಎಂದೇ ಪ್ರಸಿದ್ಧಳಾಗಿರುವ ವಚನಕಾರ್ತಿ. ಗೊಗ್ಗವ್ವೆಯ ಹೆಸರನ್ನು 'ಶಿವಗಣ ಸಹಸ್ರನಾಮ'ದಲ್ಲಿ ಕವಿಸಿದ್ಧ ನಂಜೇಶ ಉಲ್ಲೇಖಿಸಿದ್ದಾನೆ. ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಮೊದಲಾದ ಕೃತಿಗಳಲ್ಲಿ ಈಕೆಯ ಉಲ್ಲೇಖವಿದೆ. ಇವುಗಳ ಪ್ರಕಾರ ಈಕೆಯ ಸ್ಥಳ ಕೇರಳ ದೇಶದ ಅಬಲೂರು. ಶಿವಭಕ್ತ ದಂಪತಿಗಳ ಉದರದಲ್ಲಿ ಜನಿಸಿದ ಈಕೆ, ಬಾಲ್ಯದಿಂದ ವೈರಾಗ್ಯ ತಾಳಿ ಶಿವಭಕ್ತಿಯನ್ನು ಮೈಗೂಡಿಸಿಕೊಂಡಿದ್ದಳು.[33]

ಪ್ರಾಪ್ತ ವಯಸ್ಸಿಗೆ ಬರಲು ತಂದೆ-ತಾಯಿಗಳು ಮದುವೆ ಮಾಡಬೇಕು ಎಂದು ವಿಚಾರಿಸಿದಾಗ ಮನೆಯಿಂದ ಓಡಿಹೋಗಿ ಶಿವ ದೇವಾಲಯದಲ್ಲಿ ಅಡಗಿ ಕುಳಿತುಕೊಳ್ಳುತ್ತಾಳೆ. ಮಗಳನ್ನು ಹುಡುಕಿಕೊಂಡು ಶಿವ ದೇವಾಲಯಕ್ಕೆ ಬಂದ ತಾಯಿ-ತಂದೆಯರು ಮಗಳನ್ನು ಕಾಣದೇ ನಿರಾಶರಾಗಿ, ಮಗಳು ಮನೆಗೆ ಮರಳುವಂತಾಗಲೆಂದು ಪ್ರಾರ್ಥನೆ ಸಲ್ಲಿಸಿ, ಹರಕೆ ಹೊತ್ತು ಮರಳುತ್ತಾರೆ. ಹೆತ್ತವರ ಇಚ್ಛೆಯಂತೆ ಗೊಗ್ಗವ್ವೆ ಮನೆಗೆ ಮರಳುತ್ತಾಳೆ. ಮಗಳ ಶಿವಭಕ್ತಿಯನ್ನು ಅರಿತ ತಾಯಿ-ತಂದೆಯರು ಆಕೆಯ ಇಚ್ಛೆಯಂತೆ ಶಿವಪೂಜೆ ಮಾಡಿಕೊಂಡಿರುವಂತೆ ತಿಳಿಸುತ್ತಾರೆ. ಆಗ ಗೊಗ್ಗವ್ವೆಯೂ "ಪೂಜೆಯ ನಾನರಿಯೆನು, ದೀಪವಂ ಪತ್ತಿಸಿ ಧೂಪವನ್ನಿಕ್ಕಿ ಬರುವೆನೆಂದು" ನಿತ್ಯ ಧೂಪದ ವ್ರತವನ್ನು ಕೈಗೊಳ್ಳುತ್ತಾಳೆ. ಒಮ್ಮೆ ಕೂಡುಗಲೂರ ದೊರೆ ಚೇರಮರಾಯ ಕೈಲಾಸದ ದಾರಿ ಹುಡುಕುತ್ತಾ ಹೊರಟಾಗ ಧೂಪದ ಹೊಗೆಯ ಮೂಲಕ ಕೈಲಾಸದ ದಾರಿ ತೋರಿಸುತ್ತಾಳೆ. ನಿಷ್ಠೆಯಿಂದ ಕಾಯಕ ಮಾಡುತ್ತಾ ತನ್ನಿಷ್ಟಲಿಂಗ ನಾಸ್ತಿನಾಥನಲ್ಲಿ ಐಕ್ಯಳಾಗುತ್ತಾಳೆ.[34]

'ನಾಸ್ತಿನಾಥ' ಅಂಕಿತದಲ್ಲಿ ಈಕೆಯ ಆರು ವಚನಗಳು ದೊರೆತಿವೆ. ಗೊಗ್ಗವ್ವೆಯ ಹೆಸರು ಉತ್ತರ ಕರ್ನಾಟಕದಲ್ಲಿ ಇನ್ನೂ ರೂಢಿಯಲ್ಲಿದೆ. ಸ್ತ್ರೀಯರ್ರ್ಯಾರದರು, ತಲೆಗೂದಲುಗಳನ್ನು ಬಾಚಿಕೊಳ್ಳದೇ ಅಸ್ತವ್ಯಸ್ತವಾಗಿ ಬಿಟ್ಟುಕೊಂಡು ಹೊಲಸು ಬಟ್ಟೆಯನ್ನು

ಹೊದ್ದುಕೊಂಡಿದ್ದರೆ, ಜನರು ಅವಳಿಗೆ ನೀನು 'ದೀಪದ ಗೊಗ್ಗವ್ವೆ'ಯಾಗಿದ್ದೀಯೇ ಎಂದು ಸಿಟ್ಟು ಮಾಡುವುದುಂಟು.[35]

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

ಗುರುಲಿಂಗ ಜಂಗಮ ಭಕ್ತಿ, ಪ್ರಸಾದ, ಪಾದೋದಕ ನಿಷ್ಠೆಯುಳ್ಳ ಆಚಾರ ಸಂಪನ್ನೆ ವೀರಮ್ಮ. ಕವಿಚರಿತೆಕಾರರು ಮತ್ತು ಡಾ. ಫ.ಗು.ಹಳಕಟ್ಟಿಯವರು ಗುರುತಿಸಿರುವಂತೆ, ವೀರಮ್ಮ ಹನ್ನೆರಡನೇ ಶತಮಾನದ ದಸರಯ್ಯನವರ ಪತ್ನಿ.[36] ಗುರುರಾಜ ಚಾರಿತ್ರದಲ್ಲಿ ಉಲ್ಲೇಖಗೊಂಡ ತೆರಕಣಾಂಬಿಯ ವೀರಮ್ಮ ಮತ್ತು ದೀಪದ ವೀರಮ್ಮರಿಂದ ಭಿನ್ನಳಾದ ಈಕೆಯ ಜೀವನದ ಬಗೆಗೆ ಹೆಚ್ಚಿಗೆ ತಿಳಿಯುವುದಿಲ್ಲ.

ಆದರೆ, ಈಕೆಯ ಕಾಲ ಕ್ರಿ.ಶ.1160 ಎಂದು ತಿಳಿಸುತ್ತಾರೆ.[37] ಫ.ಗು.ಹಳಕಟ್ಟಿಯವರು ವೀರಮ್ಮನ ಮೂರು ವಚನಗಳನ್ನು ನಮೂದಿಸಿದ್ದಾರೆ. ಆದರೆ, ಇಲ್ಲಿವರೆಗೆ ಈಕೆಯ ಐದು ವಚನಗಳು ದೊರೆತಿವೆ.[38] 'ಗುರುಶಾಂತೇಶ್ವರಾ' ಎಂಬುದು ಈಕೆಯ ವಚನಗಳ ಅಂಕಿತ. ಮನದ ಚಂಚಲತೆ, ಶರಣನ ನಿಲುವು, ವ್ರತನಿಷ್ಠೆ, ಪಾದೋದಕ, ಪ್ರಸಾದ ಮಹತ್ವ ಈಕೆಯ ವಚನಗಳ ವಸ್ತು.[39]

ದುಗ್ಗಳೆ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ನಮಗೆ ಮೊದಲ ಕವಯಿತ್ರಿಯಾಗಿ ಅಕ್ಕಮಹಾದೇವಿ ಕಂಡುಬರುತ್ತಾಳೆ. ಆದರೆ, ಮೊದಲ ವಚನಕಾರ್ತಿಯಾಗಿ ದುಗ್ಗಳೆ ಕಂಡುಬರುತ್ತಾಳೆ. ಈಕೆ ಆದ್ಯ ವಚನಕಾರನೆಂಬ ಖ್ಯಾತಿಗೆ ಕಾರಣವಾದ ಜೇಡರ ದಾಸಿಮಯ್ಯನ ಮಡದಿ. ಬಸವಣ್ಣನವರು ಅತ್ಯಂತ ಗೌರವಾದಾರಗಳಿಂದ ಸ್ಮರಿಸುವ ದಾಸಿಮಯ್ಯ–ದುಗ್ಗಳೆ ಬಸವಣ್ಣನವರ ಹಿರಿಯ ಸಮಕಾಲೀನರು. ಆದರ್ಶ ದಾಂಪತ್ಯಕ್ಕೆ ಮಾದರಿಯಾಗಿ ಶರಣರಿಂದ ಮನ್ನಣೆ ಪಡೆದಿದ್ದಾರೆ. 'ದೇವಾಂಗ ದಾಸಿಮಯ್ಯನ ಪುರಾಣ, ಹರಿಹರನ ರಗಳೆಗಳಲ್ಲಿ ಭೀಮಕವಿಯ ಬಸವಪುರಾಣ, ಚೆನ್ನಬಸವಪುರಾಣ'ದಲ್ಲಿ ಜೇಡರ ದಾಸಿಮಯ್ಯನವರ ಜೀವನ ಸಂಗತಿ ಪ್ರಸ್ತಾಪವಿದೆ.[40]

'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತಿನಂತೆ ಪತಿಯೊಂದಿಗೆ ಏಕವಾಗಿ ಬೆರತು ಹಿತವಾದ ಶಿವಭಕ್ತಿಯಲ್ಲಿ ನಿರತಳಾದ ಶಿವಶರಣೆ. ಈಕೆಯ ಕಾಯಕ ಬಟ್ಟೆ ನೇಯುವುದು. ಈ ಅನುರೂಪವಾದ ಪತಿ–ಪತ್ನಿಯರ ಕಾಯಕನಿಷ್ಠೆ, ವಸ್ತ್ರ ದಾನದ ವೈಶಿಷ್ಟ್ಯಗಳನ್ನು ಬಸವಣ್ಣ, ಕೋಲ ಶಾಂತಯ್ಯ, ಉಪ್ಪರಗುಡಿ ಸೋಮಿದೇವಯ್ಯ, ಸತ್ಯಕ್ಕ ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ.

ವೀರಶೈವ ಪುರಾಣಗಳಲ್ಲಿ ಈಕೆಯ ಕಥೆ ದಾಸಿಮಯ್ಯನ ಜತೆಯಲ್ಲಿ ಪ್ರಸಿದ್ಧವಾಗಿದೆ. ತನ್ನ ಮನಸ್ಸಿಗೆ ಒಪ್ಪುವ ತನ್ನ ಮನದಿಂಗಿತವನ್ನರಿತು ನಡೆಯುವ ಸತಿಯನ್ನು ಹುಡುಕಿ ದೇಶಾಂತರ ಸಾಗಿದ ದಾಸಿಮಯ್ಯನಿಗೆ ಮಳಲಕ್ಕಿಯಲ್ಲಿ ಪಾಯಸ ಮಾಡಿ ಅವನ ಪರೀಕ್ಷೆಯಲ್ಲಿ ಯಶ ಗಳಿಸಿ ಸತಿಯಾದ ಕಥೆ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಉಕ್ತವಾಗಿದೆ. ಈ ಕಥೆಗೆ ಪೂರಕವೆನ್ನುವಂತೆ ದುಗ್ಗಳೆಯ ಗುಣ, ಶೀಲ, ಸ್ವಭಾವವನ್ನು

ಬಣ್ಣಿಸುವ ದಾಸಿಮಯ್ಯನ ವಚನವೊಂದು ಹೀಗಿದೆ.[41]

ಬಂದುದನ್ನರಿದು ಬಳಸುವಳು,
ಬಂದುದ ಪರಿಣಾಮಿಸುವಳು.
ಬಂಧು ಬಳಗವ ಮರಸುವಳು,
ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ.[42]

ಈ ಮಾತುಗಳು ದಾಸಿಮಯ್ಯನ ವ್ಯಕ್ತಿತ್ವ ಬೆಳಗುವಲ್ಲಿ ದುಗ್ಗಳೆಯ ಪಾತ್ರ ಎಂಥ ಉನ್ನತವಾಗಿತ್ತು ಎಂಬುದನ್ನು ಪ್ರಕಟಿಸುತ್ತವೆ. ಜತೆಗೆ ದುಗ್ಗಳೆಯ ವಿವೇಚನಾಶೀಲ, ಸಂತೃಪ್ತ ವ್ಯಕ್ತಿತ್ವ ಕುರಿತು ಪತಿ ದಾಸಿಮಯ್ಯ ವ್ಯಕ್ತಪಡಿಸಿರುವ ಅನಿಸಿಕೆಯಾಗಿದೆ.

ನಾಗಲಾಂಬಿಕೆ

ನಾಗವ್ವೆ, ನಾಗಮ್ಮ, ನಾಗಲಾದೇವಿ, ನಾಗಾಂಬೆ, ನಾಗಾಯಿ, ಅಕ್ಕನಾಗಮ್ಮ, ನಾಗಲಾಂಬಿಕೆ ಇತ್ಯಾದಿ ನಾಮಾಂತರಗಳ ಮೂಲಕ ಪ್ರಾಚೀನ ವೀರಶೈವ ಕಾವ್ಯಗಳಲ್ಲಿ ಮತ್ತು ಸಮಕಾಲೀನ ಶರಣರ ವಚನಗಳಲ್ಲಿ ಪ್ರಸ್ತಾಪವಾಗಿರುವ ನಾಗಲಾಂಬಿಕೆ ಬಸವಣ್ಣನವರ ಕಿರಿಯ ಸಹೋದರಿ. “ನಾಗಲಾಂಬಿಕೆಯು ಬಸವೇಶ್ವರನ ಅಕ್ಕನು ತನ್ನ ಚೆನ್ನಬಸವೇಶ್ವರನ ತಾಯಿಯು” ಎನ್ನುವ ಉಲ್ಲೇಖವನ್ನು ಪ್ರಸ್ತಾಪಿಸುವ ಡಾ.ಫ.ಗು.ಹಳಕಟ್ಟಿಯವರ ಅಭಿಪ್ರಾಯವೇ ಮುಂದಿನ ಬಹುತೇಕ ಅಧ್ಯಯನಗಳಲ್ಲಿ ಪುನರುಕ್ತಗೊಂಡಿದೆ.

ಕಲ್ಯಾಣ ಶಿವಶರಣರ ಚಾರಿತ್ರಿಕ ವ್ಯಕ್ತಿತ್ವವನ್ನು ದಾಖಲಿಸಿದ ಮೊದಲ ಕವಿ ಹರಿಹರ, ಬಸವಣ್ಣನವರ ಜೀವನ ವೃತ್ತಾಂತ ಮತ್ತು ಭಕ್ತಿ ಸಾಧನೆಯನ್ನು ನಿರೂಪಿಸುವ ತನ್ನ ‘ಬಸವರಾಜದೇವರ ರಗಳೆ’ಯಲ್ಲಿ ನಾಗಲಾಂಬಿಕೆಯ ಪ್ರಸ್ತಾಪ ಮಾಡದಿರುವುದು ಸೋಜಿಗದ ಸಂಗತಿ. ಆದರೆ, ಇವಳನ್ನು ಪ್ರಸ್ತಾಪಿಸುವ ಪ್ರಥಮ ಕೃತಿಯಾದ ಭೀಮಕವಿಯ ಬಸವಪುರಾಣದಲ್ಲಿ ಇವಳು ಬಸವಣ್ಣನ ತಂಗಿಯೆಂದು ಸ್ಪಷ್ಟವಾಗಿಯೇ ತಿಳಿಸಲಾಗಿದೆ. ಬಸವಣ್ಣನವರು ಬಾಗೇವಾಡಿಯಿಂದ ಕೂಡಲ ಸಂಗಮಕ್ಕೆ ಹೊರಟ ಸಂದರ್ಭವನ್ನು ಚಿತ್ರಿಸುತ್ತಾ “ತನ್ನನುಜೆ ನಾಗಲಾದೇವಿಯು ನಿಜ ಸತಿಯು ಗಂಗಾದೇವಿಯುಂ ಸಹಿತ” ಸಂಗಮಕ್ಕೆ ತೆರಳಿದನೆಂದು ಹೇಳಲಾಗಿದೆ.

ಇದರಿಂದ ನಾಗಲಾಂಬಿಕೆ ಬಸವಣ್ಣನ ಅಕ್ಕನಲ್ಲ, ತಂಗಿಯೆಂದು ಸ್ಪಷ್ಟವಾಗುತ್ತದೆ. ಈ ನಾಗಲಾಂಬಿಕೆಗೆ ಗೌರವಸೂಚಿ ವಿಶೇಷಣವಾಗಿರುವ ಅಕ್ಕ ಎಂಬ ವಾಚ್ಯಾರ್ಥವನ್ನೆ ಸ್ವೀಕರಿಸಿ ಬಸವಣ್ಣನ ಅಕ್ಕ ಎಂದು ಚಿತ್ರಿಸಿದಂತೆ ಕಾಣುತ್ತದೆ.[43] ನಾಗಲಾಂಬಿಕೆಯ ಬಾಗೇವಾಡಿ ಜೀವನವಾಗಲಿ, ಕೂಡಲ ಸಂಗಮದ ಜೀವನವಾಗಲಿ ನಮಗೆ ಯಾವ ಕಾವ್ಯದಲ್ಲಿಯೂ ಸ್ಪಷ್ಟವಾಗಿ ಸಿಕ್ಕುವುದಿಲ್ಲ. ಅವಳ ಜೀವನದ ಮಹತ್ವದ ಚಟುವಟಿಕೆಗಳು ಕಲ್ಯಾಣದಲ್ಲಿ ಮಾತ್ರ ಕಂಡುಬರುತ್ತದೆ.

ಸಣ್ಣ-ಪುಟ್ಟ ಶರಣರನ್ನು ಕುರಿತು ರಗಳೆಯನ್ನು ಬರೆದಿರುವ, ಬರೆಯದಿದ್ದ ಪಕ್ಷದಲ್ಲಿ ಸಾಂದರ್ಭಿಕವಾಗಿ ಅವರನ್ನು ಸೂಚಿಸಿರುವ ಹರಿಹರ ಎಲ್ಲಿಯೂ ನಾಗಲಾಂಬಿಕೆಯನ್ನು ಅವಳ ಮಗನಾದ ಚೆನ್ನಬಸವಣ್ಣನನ್ನು ಸೂಚಿಸದಿರುವುದು ಆಶ್ಚರ್ಯದ ಸಂಗತಿಯಾಗಿದೆ.[44]

ನಾಗಲಾಂಬಿಕೆ ತನ್ನ ಪೂರ್ವಾರ್ಧ ಜೀವನದಲ್ಲಿ ಬಸವಣ್ಣನನ್ನು ರೂಪಿಸಿದರೆ, ಉತ್ತರಾರ್ಧದಲ್ಲಿ ಮಗನಾದ ಚೆನ್ನಬಸವಣ್ಣನನ್ನು ರೂಪಿಸಿದ್ದಾಳೆ. ಅನುಭವ ಮಂಟಪದಲ್ಲಿ ಅನನ್ಯ ಪಾತ್ರ ವಹಿಸಿದ ಈಕೆ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣ ಬಳಗದ ನೇತೃತ್ವ ವಹಿಸಿ ದಕ್ಷಿಣಕ್ಕೆ ಬಂದು ಉಳವಿಯ ಪರಿಸರದಲ್ಲಿ ಐಕ್ಯಳಾದಳೆಂದು ತಿಳಿದುಬರುತ್ತದೆ.[45]

ಅಕ್ಕನಾಗಮ್ಮ 'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಈಗ ಈಕೆಯ 14 ವಚನಗಳು ಲಭ್ಯವಿವೆ. ಇವುಗಳಲ್ಲಿ ಬಸವಣ್ಣನವರ ಸ್ತುತಿಪರವಾದುದ್ದೇ ಅಧಿಕ. ಆಗಾಗ ಮಡಿವಾಳ ಮಾಚಯ್ಯ, ರೇವಣ ಸಿದ್ಧಯ್ಯ, ಸಿದ್ಧರಾಮಯ್ಯ, ಅಕ್ಕಮಹಾದೇವಿ, ಗುರುಭಕ್ತಯ್ಯ, ಪ್ರಭುದೇವ, ಮರುಳ ಶಂಕರದೇವ, ಅನಿಮಿಷದೇವ, ಅಜಗಣ್ಣ, ಘಟಿವಾಳಯ್ಯ, ಮಗ ಚೆನ್ನಬಸವಣ್ಣ ಇವರ ಪ್ರಸ್ತಾಪ ಮಾಡಿದ್ದಾಳೆ. ಸರಳ ಭಾಷೆ, ನೇರ ನಿರೂಪಣೆ, ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ತನ್ನ ತೀವ್ರ ಭಾವಾನುಭವಗಳನ್ನು ವಚನವಾಗಿಸಿರುವುದು ಈಕೆಯ ಸಾಧನೆ.

ನೀಲಮ್ಮ

ನೀಲಮ್ಮ, ನೀಲಾಂಬಿಕೆ, ನೀಲಲೋಚನೆ–ಈ ಹೆಸರುಗಳಿಂದ ಪ್ರಸಿದ್ಧವಾದ ಈಕೆ ಬಸವಣ್ಣನ ಎರಡನೇ ಹೆಂಡತಿ. ಮೊದಲನೇ ಹೆಂಡತಿಯಾದ ಗಂಗಾಂಬಿಕೆ ಬಸವಣ್ಣನ ಸೋದರ ಮಾವನ ಮಗಳು ಎಂದು ಸ್ಪಷ್ಟವಾದರೆ, ನೀಲಾಂಬಿಕೆ ಯಾರ ಮಗಳೆಂಬ ವಿಷಯವಾಗಿ ಇವಳ ನಿಜನಾಮದ ವಿಷಯವಾಗಿ ಕಾವ್ಯಗಳು ಸಂದೇಹ ರೂಪದ ಅಭಿಪ್ರಾಯಗಳನ್ನು ನೀಡಿವೆ. ಹರಿಹರ ಮತ್ತು ಭೀಮಕವಿ, ಗಂಗಾಂಬಿಕೆಯೊಂದಿಗೆ 'ಮಾಯಿದೇವಿ' ಎಂಬ ಹೆಸರನ್ನು ಬಳಸಿರುವುದನ್ನು ನೋಡಿದರೆ, ಮಾಯಿದೇವಿಯ ಇನ್ನೊಂದು ಹೆಸರು ನೀಲಾಂಬಿಕೆ ಎಂದು ಊಹಿಸಬೇಕಾಗುತ್ತದೆ.

ಶರಣರನ್ನು ಕುರಿತು ಸಾಹಿತ್ಯ ಬರೆದ ಪ್ರಥಮ ಕವಿಯಾದ ಹರಿಹರ, ಬಸವಣ್ಣನು ಸಿದ್ಧರಸ ಮಂತ್ರಿಯ ಆಸ್ತಿಗೆ ವಾರಸುದಾರನೆಂದು ಹೇಳುವವನಾದರೂ ಈ ಮಾಯೀದೇವಿ ಯಾರ ಮಗಳೆಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಲಕ್ಕಣ್ಣ ದಂಡೇಶ ಇವಳನ್ನು ಬಿಜ್ಜಳನ ತಂಗಿಯೆಂದು ನೇರವಾಗಿ ಹೇಳಿದರೆ, ವೀರಶೈವಾಂಮೃತ ಮಹಾಪುರಾಣ, ಸಿದ್ಧರಸನ ಮಗಳೆಂದು ಬಾಯಿಬಿಟ್ಟು ಹೇಳುತ್ತದೆ. ಈ ಎರಡೂ ಅಭಿಪ್ರಾಯಗಳನ್ನು ಸಮೀಕರಿಸುವಂತೆ ಸಿಂಗಿರಾಜನು ನೀಲಲೋಚನೆ ಸಿದ್ಧರಸನ ಮಗಳು, ಬಿಜ್ಜಳನ ಸಾಕು ತಂಗಿ ಎಂದು ಸೂಚಿಸುತ್ತಾನೆ.

ಈ ಎಲ್ಲಾ ಹೇಳಿಕೆಗಳನ್ನು ಕಣ್ಣು ಮುಂದಿಟ್ಟುಕೊಂಡರೆ, ಇವಳು ಬಿಜ್ಜಳನ ತಂಗಿಯೇ ಆಗಿರುವ ಸಾಧ್ಯತೆಯ ಕಡೆ ಹೆಚ್ಚು ಒತ್ತು ಬೀಳುತ್ತದೆ. ಗಂಗಾಂಬಿಕೆಗೆ ಸಿದ್ಧರಸ ಹೆಸರಿನ ಮಗನಿದ್ದನೆಂದು, ನೀಲಾಂಬಿಕೆಗೆ ಬಾಲಸಂಗಯ್ಯ ಹೆಸರಿನ ಮಗನಿದ್ದನೆಂದು ತಿಳಿದುಬರುತ್ತದೆ. ಇವರಿಬ್ಬರು ಸಣ್ಣ ವಯಸ್ಸಿನಲ್ಲಿಯೇ ಮೃತರಾದರೆಂದು ಕಾವ್ಯಗಳು ಸೂಚಿಸುತ್ತವೆ. ಗಂಗಾಂಬಿಕೆ ತನ್ನ ಒಂದು ವಚನದಲ್ಲಿ 'ಅವಳ ಕಂದ ಬಾಲಸಂಗ' ಎಂದು ನುಡಿದಿದ್ದನ್ನು ಇಲ್ಲಿ ಸ್ಮರಿಸಬಹುದು. ಬಸವಣ್ಣನ ಬದುಕಿನ ಬಹು ದೊಡ್ಡ ಪಾತ್ರವಾಡಿದ ನೀಲಾಂಬಿಕೆ 'ಸಂಗಯ್ಯ' ಅಂಕಿತದಲ್ಲಿ ವಚನ, ಸ್ವರವಚನ, ಕಾಲಜ್ಞಾನಗಳನ್ನು ಬರೆದಿದ್ದಾಳೆ.

ಈಗ ಇನ್ನೂರ ಎಂಬತ್ತೆಂಟು ವಚನಗಳು ಲಭ್ಯವಾಗಿವೆ. ಸಾಮಾನ್ಯವಾಗಿ ಎಲ್ಲಾ ವಚನಗಳು ಬಸವಣ್ಣನ ಸ್ತುತಿ ಮತ್ತು ಆತನ ಅಗಲಿಕೆಯನ್ನು ಧ್ವನಿಸುತ್ತವೆ.[46] ನೀಲಾಂಬಿಕೆಯ ವಿವಾಹ, ಲಿಂಗಭಕ್ತಿ, ಜಂಗಮಸೇವೆಯ ವಿವರಗಳನ್ನು ಹೊರತುಪಡಿಸಿದರೆ, ನೀಲಾಂಬಿಕೆಯ ಜೀವನ ವೃತ್ತಾಂತದ ಇತರ ವಿವರಗಳು ಕಾವ್ಯಗಳಲ್ಲಿ ದೊರೆಯದಿದ್ದರೂ ನೀಲಾಂಬಿಕೆಯ ಅಂತ್ಯವನ್ನು ಕುರಿತು ವಿಭಿನ್ನ ಹೇಳಿಕೆಗಳು ಕಂಡುಬರುತ್ತವೆ. ಬಸವಣ್ಣ ಲಿಂಗೈಕ್ಯವಾದ ತರುವಾಯ ನೀಲಾಂಬಿಕೆ ಇಷ್ಟಲಿಂಗದಲ್ಲಿ ಬೆರತಳೆನ್ನುವುದು ಕೆಲವು ಕಾವ್ಯಗಳ ಹೇಳಿಕೆಯಾದರೆ, ಹಡದಪ್ಪಣ್ಣನೊಂದಿಗೆ ಕೂಡಲ ಸಂಗಮಕ್ಕೆ ಬರುವ ಮಾರ್ಗ ಮಧ್ಯದಲ್ಲಿ ಕೃಷ್ಣಾ ನದಿ ತೀರದಲ್ಲಿ ಲಿಂಗೈಕ್ಯವಾದಳೆನ್ನುವುದು ಪರಂಪರೆಯ ನಂಬಿಕೆ.[47]

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ

ಈಕೆಯ ಹೆಸರಿನ ಹಿಂದೆ ಇರುವ ವಿಶೇಷಣದಿಂದ ಬತ್ತಲೇಶ್ವರನ ಪುಣ್ಯಸ್ತ್ರೀ ಇರಬೇಕು ಎಂದು ತಿಳಿದುಬರುತ್ತದೆ. ವೀರಶೈವ ಕಾವ್ಯಗಳಲ್ಲಿ ಸದ್ಯ ಮೂರು ಜನ ಗುಡ್ಡವ್ವೆ ಶರಣೆಯರ ಉಲ್ಲೇಖ ಬರುತ್ತದೆ. ವರದಾನಿ ಗುಡ್ಡವೆ, ನಾವದಿಗೆಯ ಗುಡ್ಡವೆ ಮತ್ತು ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ. ನಾವದಾನಿ ಗುಡ್ಡವೆ ಮತ್ತು ವರದಾನಿ ಗುಡ್ಡವ್ವೆ ಒಂದೇ ಆಗಿದ್ದು, ಈಕೆ ಬಸವ ಪೂರ್ವ ಯುಗದಲ್ಲಿ ಇದ್ದಳೆಂದು ತಿಳಿದುಬರುತ್ತದೆ. ಇಲ್ಲಿಯವರೆಗೆ ಗುಡ್ಡವೆಯ ಒಂದು ವಚನ ಮಾತ್ರ ದೊರೆತಿದೆ. ಈಕೆಯ ವಚನಗಳ ಅಂಕಿತ 'ನಿಂಬೇಶ್ವರ'. ಈಕೆಯ ಕಾಲವನ್ನು 1420ರಲ್ಲಿ ಇದ್ದಳೆಂದು ಕವಿಚರಿತೆಕಾರರು, ಡಾ.ಎಲ್.ಬಸವರಾಜು ಮೊದಲಾದವರು ತಿಳಿಸಿದ್ದಾರೆ. ಬತ್ತಲೇಶ್ವರ ಈಗ ತಿಳಿದಮಟ್ಟಿಗೆ ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದಾನೆ.[48]

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಕಾಳವ್ವೆಯ ಹೆಸರಿನ ನಾಲ್ಕು ಜನ ವಚನಕಾರ್ತಿಯರಲ್ಲಿ ಪ್ರಸ್ತುತ ಕಾಳವ್ವೆ ಬಡಿಗತನದ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ. ಈಕೆಯ ಹೆಸರಿನ ಹಿಂದಿರುವ ವಿಶೇಷಣ ಇದನ್ನು ಸೂಚಿಸುತ್ತದೆ. ಹೆಸರು, ಇಟ್ಟುಕೊಂಡ ಅಂಕಿತ, ವಚನದಲ್ಲಿ ಬಳಸಿದ ಪರಿಭಾಷೆ ಎಲ್ಲವೂ ಈಕೆ ಬಡಿಗ ಜಾತಿಗೆ ಸೇರಿದವಳೆಂದು ಸ್ಪಷ್ಟಪಡಿಸುತ್ತವೆ. ಈಕೆಯ ಪತಿ ಬಸವಯ್ಯ ಅಥವಾ ಬಸವಪ್ಪಯ್ಯ. ಈತನು ಕೂಡ ವಚನಕಾರನಾಗಿದ್ದು, 'ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ' ಎಂಬ ಅಂಕಿತದಲ್ಲಿ ವಚನ ರಚಿಸಿದ್ದಾನೆ.

ಈತನ ಕಾಲವನ್ನು ಸುಮಾರು 1160 ಎಂದು ಊಹಿಸಲಾಗಿದೆ. ಇದೇ ಕಾಳವ್ವೆಯ ಕಾಲವೂ ಆಗಿದೆ. ಕಾಳವ್ವೆಯ ಎರಡು ವಚನಗಳು ದೊರೆತಿವೆ. 'ಕರ್ಮಹರ ಕಾಳೇಶ್ವರ' ಅವುಗಳ ಅಂಕಿತ. ಕಾಳೇಶ್ವರ ಈಕೆಯ ಇಷ್ಟದೈವ. ಚಿಕ್ಕ ಚೊಕ್ಕ ನುಡಿಗಳಲ್ಲಿ ಸರಳ ಅಷ್ಟೇ ಸುಂದರವಾಗಿ ರಚಿತವಾದ ಅವುಗಳಲ್ಲಿ ಕಾಯಕ, ವ್ರತ ಮತ್ತು ನುಡಿಯ ಮಹತಿಯನ್ನು ಎತ್ತಿ ಹೇಳಲಾಗಿದೆ.[49]

ಬೊಂತಾದೇವಿ

ಬೊಂತಾದೇವಿಯು ಕಾಶ್ಮೀರ ದೇಶದಲ್ಲಿಯ ಮಾಂಡವ್ಯಪುರವೆಂಬ ಪಟ್ಟಣದಲ್ಲಿ

ರಾಜ್ಯವಾಳುತ್ತಿದ್ದ ಅರಸನ ಮಗಳು. ಈಕೆಯ ಮೂಲ ಹೆಸರು ನಿಜದೇವಿ.[50] ಬೊಂತಾದೇವಿಯ ವೈರಾಗ್ಯಭಕ್ತಿ ಅಕ್ಕಮಹಾದೇವಿಯಂತೆ ಉಜ್ವಲವಾದದ್ದು. ಬೊಂತಾದೇವಿಯ ಶಿವಭಕ್ತಿ ಮತ್ತು ವೈರಾಗ್ಯದ ತೀವ್ರತೆಯನ್ನು ಶಿವನು ನಾನಾ ರೀತಿಯಾಗಿ ಪರೀಕ್ಷಿಸಿದನೆನ್ನುವ ಕಾವ್ಯಗಳ ಹೇಳಿಕೆಗಳು ಭಕ್ತಿ ಸುಧೆಗಾಗಿ ಬೊಂತಾದೇವಿ ಎದುರಿಸಿದ ಪರೀಕ್ಷೆ ಪ್ರತಿರೋಧಗಳನ್ನು ಧ್ವನಿಸುವಂತಿವೆ.

ಬಸವಯುಗದ ಮಲ್ಲಿಕಾರ್ಜುನ ಪಂಡಿತಾರಾಧ್ಯರಿಂದ ಸಹಸ್ರ ಗಣನಾಮ ಮೊದಲ್ಗೊಂಡು 17ನೇ ಶತಮಾನದ ಶಾಂತಲಿಂಗ ದೇಶಿಕ ಕವಿಯವರೆಗಿನ ಹಲವಾರು ವೀರಶೈವ ಕವಿಗಳು ಬೊಂತಾದೇವಿಯನ್ನು ತಮ್ಮ ಕಾವ್ಯಗಳಲ್ಲಿ ಸ್ತುತಿಸಿದ್ದಾರೆ. ಪಾಲ್ಕುರಿಕೆ ಸೋಮನಾಥ ಕವಿಯು ತನ್ನ ತೆಲುಗು 'ಬಸವಪುರಾಣ'ದಲ್ಲಿ ಬೊಂತಾದೇವಿಯನ್ನು ಕಲ್ಯಾಣಪುರದ ಭಕ್ತರ ಮಾಲಿಕೆಯಲ್ಲಿ ಸ್ಮರಿಸಿದ್ದಾರೆ.[51] ಈಕೆಯ ಐದು ವಚನಗಳು ದೊರೆತಿದ್ದು, ಅಂಕಿತ 'ಬಿಡಾಡಿ'. ಇದು ಯಾವ ಬಂಧನಕ್ಕೂ ಒಳಗಾಗದ ಬಯಲು ರೂಪಿ ಶಿವನನ್ನು ಸಂಕೇತಿಸುತ್ತದೆ.[52]

ಕಲ್ಯಾಣ ಕ್ರಾಂತಿಯ ನಂತರ ಮಹಾದೇವಿ ಅಕ್ಕನು ಶ್ರೀಶೈಲಕ್ಕೆ ಹೊರಡಲು ಸನ್ನದ್ಧಳಾದಳು. ಅವಳು ಹೋಗುವುದನ್ನು ನೋಡಿ, ಶಿವಶರಣರು ಮಹಾದೇವಿಯಕ್ಕನಂಥ ವೀರಭಕ್ತೆಯರು ಕಲ್ಯಾಣದಲ್ಲುಂಟೆ? ಎಂದು ದುಃಖಿಸುವಾಗ ಅಲ್ಲಮ ಪ್ರಭು ಇದನ್ನು ತಿಳಿದು ಬೊಂತಾದೇವಿಯನ್ನು ತೋರಿಸಿ ಯಾವ ಸಮಯದಲ್ಲಿಯೂ ಕಲ್ಯಾಣ ಪಟ್ಟಣವನ್ನು ಬಿಟ್ಟು ಹೋಗುವವಳಲ್ಲ. ಅವಳು ಇಲ್ಲಿಯೇ ಇರುವವಳು ಎಂದು ತಾನು ಕೂಡ ಮಹಾದೇವಿಯಕ್ಕನೊಡನೆ ಶ್ರೀಶೈಲಕ್ಕೆ ಹೊರಡುತ್ತಾನೆ.[53]

ಬೊಂತಾದೇವಿಯು ಕಡೆಯವರೆಗೂ ಕಲ್ಯಾಣ ಪಟ್ಟಣದಲ್ಲಿಯೇ ಉಳಿದು ಅಲ್ಲಿಯೇ ಅವಳು ತನ್ನ ಲಿಂಗದಲ್ಲಿ ಅಡಗಿದಳು. ಸೋಮನಾಥಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಮೊದಲಾದ ಕಾವ್ಯಗಳಲ್ಲಿ ಬರುವ ಬೊಂತಾದೇವಿಯ ವೀರವೈರಾಗ್ಯ ಗುಪ್ತಭಕ್ತಿಗಳನ್ನು ಪ್ರಕಟಿಸುತ್ತದೆ. ಈಕೆಯ ವಚನಗಳಲ್ಲಿಯೂ ಈ ಆಶಯ ವ್ಯಕ್ತವಾಗಿದೆ.[54]

ಮುಕ್ತಾಯಕ್ಕ

ಪ್ರಕರ ವೈಚಾರಿಕತೆ ತಾತ್ವಿಕ ಪರಿಜ್ಞಾನ, ಸೈದ್ಧಾಂತಿಕ ವಿಶ್ಲೇಷಣೆ, ಸ್ವತಂತ್ರ ಮನೋಧರ್ಮ ಇತ್ಯಾದಿ ವಿಶಿಷ್ಟತೆಯುಳ್ಳ, ಉನ್ನತ ತತ್ವಜ್ಞಾನಿ ಮುಕ್ತಾಯಕ್ಕ.[55] 'ಅಜಗಣ್ಣ', ಅಜಗಣ್ಣ ತಂದೆ ಎಂಬ ಮುದ್ರಿಕೆಗಳಿಂದ 35 ವಚನಗಳನ್ನು ಬರೆದ ಮುಕ್ತಾಯಕ್ಕನ ಅನುಭಾವಿಕ ನೆಲೆ ಶಿವಶರಣೆಯರಲ್ಲಿ ಎದ್ದು ಕಾಣುವಂತಹದ್ದು. ಇವಳ ಚರಿತ್ರೆಯ ಅಂಶಗಳು ಕೆಲ ಮಟ್ಟಿಗೆ ಕಂಡುಬರುವುದು ಶೂನ್ಯ ಸಂಪಾದನೆ ಮತ್ತು ಆ ಪರಂಪರೆಗೆ ಸೇರಿದ ಕೆಲವು ಕೃತಿಗಳಲ್ಲಿ.

ಇವಳ ತವರೂರು ಲಕ್ಕುಂಡಿ. ಗಂಡನೂರು ಮೊಸಳೆ ಕಲ್ಲು(ಮಸರಕಲ್ಲು) ಎಂದು ಕಾವ್ಯಗಳು ತಿಳಿಸುತ್ತವೆ. ಇವಳ ಸೋದರನಾದ ಅಜಗಣ್ಣ ವಚನಮುದ್ರಿಕೆ 'ಮಹಾಘನ ಸೋಮೇಶ್ವರ' ಇದು ಇತ್ತೀಚೆಗೆ ತಿಳಿದುಬಂದಿದ್ದು. ಈ ಹೆಸರಿನ ದೇವಾಲಯ

ಲಕ್ಕುಂಡಿಯಲ್ಲಿರುವುದು ವಿಶೇಷ. ಈಗಾಗಿ ಮುಕ್ತಾಯಕ್ಕನ ತವರೂರು ಲಕ್ಕುಂಡಿ ಎಂದು ಈಗ ಸ್ಪಷ್ಟವಾಗಿದೆ.

ಅಜಗಣ್ಣ ಮತ್ತು ಮುಕ್ತಾಯಕ್ಕ ಅಣ್ಣ–ತಂಗಿಯಾಗಿದ್ದು, ಇವರಿಬ್ಬರು ವಚನ ರಚಿಸಿದ್ದಾರೆ. ಅಣ್ಣನನ್ನೇ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕ ಆ ಹೆಸರನ್ನೇ ತನ್ನ ಮುದ್ರಿಕೆಯಾಗಿ ಇಟ್ಟುಕೊಂಡದ್ದು ಸಹಜವಾಗಿದೆ. ಗುಪ್ತಭಕ್ತನಾಗಿದ್ದ ಅಜಗಣ್ಣ ಅಮಳೋಕ್ಯದಲ್ಲಿ (ಅಜಗಣ್ಣ ಬಾಯಲ್ಲಿ) ಲಿಂಗ ಧರಿಸುತ್ತಲಿದ್ದ ಶರಣ. ಒಮ್ಮೆ ಆಟವಾಡುತ್ತಲಿದ್ದ ಮಕ್ಕಳು ಆ ಲಿಂಗವನ್ನು ಕೊಡೆಂದು ಒತ್ತಾಯಿಸಲಾಗಿ ಅದನ್ನು ನುಂಗಿ ಲಿಂಗೈಕ್ಯನಾದನೆಂದು ಕೆಲವು ಕೃತಿಗಳು, ಬಾಗಿಲು ತಲೆಗೆ ಬಡಿಯಲಾಗಿ ಲಿಂಗೈಕ್ಯನಾದನೆಂದು ಮತ್ತೆ ಕೆಲವು ಕೃತಿಗಳು ಹೇಳುತ್ತವೆ.

ಅದೇನೆ ಇದ್ದರು ಈತ ಲಿಂಗೈಕ್ಯನಾದ ಪ್ರಸಂಗದಲ್ಲಿ ಮುಕ್ತಾಯಕ್ಕ ವ್ಯಕ್ತಪಡಿಸಿದಂಥವುಗಳು ವಚನಗಳು. ಅಣ್ಣನ ಶವವನ್ನು ತೊಡೆಯ ಮೇಲಿಟ್ಟುಕೊಂಡು ದುಃಖಿಸುತ್ತಿದ್ದ ಮುಕ್ತಾಯಕ್ಕನನ್ನು ಸಂಧಿಸಿದ ಅಲ್ಲಮ ಪ್ರಭು, ಜೀವನದ ನಿತ್ಯಾನಿತ್ಯತೆ ಅನುಭಾವಿಯ ನಿಲುವು ಮೊದಲಾದವುಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಹಾಕುತ್ತಾನೆ. ಅದಕ್ಕೆ ಅಷ್ಟೇ ಎತ್ತರದ ಉತ್ತರಗಳನ್ನು ಕೊಡುತ್ತಾಳೆ ಮುಕ್ತಾಯಕ್ಕ. ಬಹುಶಃ ವಚನಕಾರ್ತಿಯರಲ್ಲಿಯೇ ಇಷ್ಟು ಎತ್ತರದ ಅನುಭಾವಿಕ ನಿಲುವಿನಲ್ಲಿ ನಿಂತು ಮಹಾಜ್ಞಾನಿಯಾದ ಅಲ್ಲಮನನ್ನು ಎದುರಿಸಿದವರು ಮತ್ತೊಬ್ಬರಿಲ್ಲ.[56]

ಮೋಳಿಗೆ ಮಹಾದೇವಿ

ಮೋಳಿಗೆ ಮಾರಯ್ಯ–ಮೋಳಿಗೆ ಮಹಾದೇವಿ ಶಿವಶರಣ ಸಮುದಾಯದಲ್ಲೇ ಅಪರೂಪದ ದಂಪತಿಗಳು, ಅಪರೂಪದ ಸಾಹಿತ್ಯ ಸಂಗಾತಿಗಳು.[57] ಚಿಂತನಾಶೀಲತೆ, ಅಭಿವ್ಯಕ್ತಿಯ ಸುಭಗತೆ, ಕಾಯಕನಿಷ್ಠೆ, ತತ್ವಜ್ಞಾನ, ಸ್ವಂತಿಕೆ ಮುಂತಾದ ಗುಣ ವಿಶೇಷಗಳಿಂದ ಗಮನ ಸೆಳೆಯುವ ವಿಚಾರಶೀಲ ವಚನಕಾರ್ತಿ ಮಹಾದೇವಮ್ಮ. ಬಸವಯುಗದ ಹಿರಿಯ ಶರಣ ಮೋಳಿಗೆ ಮಾರಯ್ಯನ ಪತ್ನಿ. ದಂಪತಿಗಳ ಭಕ್ತಿ, ಸಾಧನೆಯ ರೋಚಕ ತಿರುವುಗಳನ್ನು, ಅವರ ಅನ್ಯೋನ್ಯ ದಾಂಪತ್ಯದ ನಿದರ್ಶನವನ್ನು ವೀರಶೈವ ಕಾವ್ಯಗಳು ಚಿತ್ರಿಸುತ್ತವೆ.[58]

ವೀರಶೈವ ಕಾವ್ಯಗಳ ಪ್ರಕಾರ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದ ಮಹಾದೇವ ಭೂಪಾಲ–ಗಂಗಾದೇವಿ, ಇವರು ಕಟ್ಟಿಗೆ ಮಾರುವ ಕಾಯಕವನ್ನು ಕೈಗೊಂಡಿದ್ದರೆಂದು ತಿಳಿದುಬರುತ್ತದೆ. ಇದಕ್ಕೆ ಐತಿಹಾಸಿಕ ಆಧಾರಗಳು ಸಿಗುತ್ತಿಲ್ಲವಾದರೂ ಅವರ ವಚನಗಳಲ್ಲಿ ರಾಜ ವ್ಯಕ್ತಿತ್ವದ ಗಾಂಭೀರ್ಯ ಕಂಡುಬರುತ್ತದೆ, ಬಸವ ಪುರಾಣ, ಶೂನ್ಯ ಸಂಪಾದನೆ, ಮೊದಲಾದ ಕೃತಿಗಳಲ್ಲಿ ಇವರ ಜೀವನಕ್ಕೆ ಸಂಬಂಧಿಸಿದ ಕೆಲವು ವಿವರಗಳು ದೊರಕುತ್ತವೆ.

ಕಲ್ಯಾಣ ಕ್ರಾಂತಿಯಿಂದಾಗಿ ಶರಣರೆಲ್ಲ ಚದುರಿ ಹೋಗಿ ಅಲ್ಲಲ್ಲೇ ಐಕ್ಯರಾಗಲು ಮಾರಯ್ಯನಿಗೂ ಕೈಲಾಸಕ್ಕೆ ಹೋಗಬೇಕು ಎಂಬ ಇಚ್ಛೆ ಉಂಟಾಗುತ್ತದೆ. ಆಗ ಜ್ಞಾನಿಯಾದ ಮಹಾದೇವಿ, 'ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈ ಕೂಲಿ', 'ಕಾಯವೇ ಕೈಲಾಸವೆಂದ ಮೇಲೆ ಮತ್ತೆ ಬೇರೆ ಕೈಲಾಸವುಂಟೆ' ಎಂದು ಪ್ರಶ್ನಿಸಿ ಮಾರಯ್ಯನ ಕಣ್ಣು ತೆರೆಸುತ್ತಾಳೆ.

ಸದ್ಯ ಈಕೆಯ 70 ವಚನಗಳು ದೊರೆತಿವೆ. 'ಎನ್ನಯ್ಯಪ್ರಿಯ ನಿಃಕಳಂಕ ಮಲ್ಲಿಕಾರ್ಜುನ' ಎಂಬುದು ಅಂಕಿತ. ಎಲ್ಲಾ ವಚನಗಳು ತಾತ್ವಿಕವಾಗಿವೆ. ಪತಿಗೆ ಸತ್ಯದ ನಿಲುವನ್ನು ತೋರಿಸುವಲ್ಲಿ ನುಡಿದ ನುಡಿಗಳೇ ಅವುಗಳಲ್ಲಿ ಅಧಿಕ. ವಚನ ರಚನೆಯಲ್ಲಿ ತನ್ನ ತೀವ್ರವಾದ ಆಧ್ಯಾತ್ಮ ಪ್ರಜ್ಞೆಯಿಂದಾಗಿ ಮೋಳಿಗೆ ಮಹಾದೇವಿ ಇತರೆ ಶರಣರಿಗಿಂತ ಭಿನ್ನಳಾಗಿ ತೋರುತ್ತಾಳೆ.[59]

ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

ರಾಯಮ್ಮ ರಾಯಸದ ಮಂಚಣ್ಣನ ಪತ್ನಿ. ಈ ಸತಿ–ಪತಿಗಳಿಬ್ಬರೂ ವಚನಕಾರರಿದ್ದಾರೆ. ರಾಯಸದ ಮಂಚಣ್ಣ, ಬಸಣ್ಣನವರ ಪತ್ರ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ. ಈಕೆಯ ಒಂದು ವಚನ ಮಾತ್ರ ದೊರೆತಿದ್ದು, 'ಅಮುಗೇಶ್ವರಲಿಂಗ' ಎಂಬ ಅಂಕಿತವನ್ನು ಹೊಂದಿದೆ. ರಾಯಮ್ಮನು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳನ್ನು ಆಲಿಸುತ್ತಾ ಶಿವಶರಣೆ ಎಂದು ಹೆಸರಾದಳು ಎನ್ನುವ ಡಾ. ಫ.ಗು.ಹಳಕಟ್ಟಿಯವರು ರಾಯಮ್ಮನ ಮೂರು ವಚನಗಳನ್ನು ಮಾತ್ರ ದಾಖಲಿಸಿದ್ದಾರೆ.

ಆದರೆ, ಅವರು ದೊರಕಿಸಿರುವ ಮೂರು ವಚನಗಳಲ್ಲಿ ಪ್ರಸ್ತುತ ಒಂದು ವಚನ ಮಾತ್ರ ರಾಯಮ್ಮನ ವಚನವಾಗಿದ್ದು, ಉಳಿದೆರಡು ವಚನಗಳು ಅಮುಗೆ ರಾಯಮ್ಮನ ವನಚಗಳೆಂದು ತಿಳಿದುಬಂದಿದೆ. ಇವರಿಬ್ಬರ ವಚನಗಳ ಅಂಕಿತ 'ಅಮುಗೇಶ್ವರಲಿಂಗ' ಆಗಿರುವುದರಿಂದ ಮೊದಮೊದಲು ಇವರಿಬ್ಬರ ಬಗೆಗೆ ಗೊಂದಲಗಳಿದ್ದರೂ ಪ್ರಸ್ತುತ ಈ ಗೊಂದಲ ನಿವಾರಣೆಯಾಗಿದೆ.[60]

ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ

ಈಕೆ ಬಸವಣ್ಣನವರ ಸಮಕಾಲೀನನೆನಿಸಿದ ರೇವಣಸಿದ್ಧಯ್ಯಗಳ ಪತ್ನಿ. ರೇಕಮ್ಮನ ಒಂದು ವಚನ ಮಾತ್ರ ದೊರೆತಿದ್ದು, 'ಶ್ರೀ ಗುರುಸಿದ್ಧೇಶ್ವರ' ಎಂಬ ಅಂಕಿತವಿದೆ. ಇದರಲ್ಲಿ ಬಾಹ್ಯಲಿಂಗ, ಆಚಾರಭ್ರಷ್ಟ. ವ್ರತ ತಪ್ಪುಕ, ಗುರು ಲಿಂಗ ಜಂಗಮವನ್ನು ಕೊಂದವ, ಪಾದೋದಕ ಪ್ರಸಾದ ಧೂಷಕ, ವಿಭೂತಿ ರುದ್ರಾಕ್ಷಿ ನಿಂದಕರನ್ನು ಕಂಡರೆ ಶಕ್ತಿ ಇದ್ದರೆ ಸಂಹಾರ ಮಾಡಲು ಶಕ್ತಿ ಇಲ್ಲದಿದ್ದರೆ ಕಣ್ಣು ಕಿವಿ ಮುಚ್ಚಿಕೊಂಡು ಶಿವಮಂತ್ರ ಜಪಿಸಲು, ಅದೂ ಆಗದಿದ್ದರೆ, ಆಸ್ಥಳವನ್ನೇ ಬಿಟ್ಟು ಹೋಗಲು ತಿಳಿಸುತ್ತಾಳೆ. ಧರ್ಮ ವಿರೋಧಿಗಳನ್ನು ಸಂಹಾರ ಮಾಡಬೇಕು. ಅವರ ಗಣಾಚಾರ ನಿಷ್ಠೆ ಗಟ್ಟಿ ಧ್ವನಿಯಲ್ಲಿ ವ್ಯಕ್ತವಾಗಿದೆ.[61]

ರೇಕಮ್ಮನ ಉತ್ಕಟ ಶಿವಭಕ್ತಿಯನ್ನು ಪ್ರತಿನಿಧಿಸುವ ಕಥೆ 'ಸೋಮೇಶ್ವರ ಪುರಾಣ', 'ಪ್ರಭುದೇವರ ಪುರಾಣ' ಮತ್ತು 'ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ'ದಲ್ಲಿ ದೊರೆಯುತ್ತದೆ. ಮಧ್ಯದಲ್ಲಿ ಕೆಂಪು ಸೇವಂತಿಗೆಯುಳ್ಳ ದಂಡೆಯನ್ನು ಕಟ್ಟಿ ನಿತ್ಯವೂ ಶಿವಲಿಂಗಕ್ಕೆ ಅರ್ಪಿಸುವ ರೇಕಮ್ಮನ ವ್ರತ. ನಿತ್ಯದ ಹೂವಿನ ದಂಡೆಗೆ ಒಂದು ದಿನ ಭಂಗ ಬರುತ್ತದೆ. ಮಧ್ಯದಲ್ಲಿ ಇರಿಸಬೇಕಾದ ಕೆಂಪಿನ ಸೇವಂತಿಗೆ ಸಿಗದಿದ್ದಾಗ ತನ್ನ ದೇಹದ ಮಾಂಸವನ್ನೇ ದಂಡೆಯ ಮಧ್ಯದಲ್ಲಿಟ್ಟು ಮಾಲೆ ಕಟ್ಟಿ ಇಷ್ಟಲಿಂಗಕ್ಕಿತ್ತು "ಲಿಂಗಪ್ರಾಣಿ ಜಂಗಮಪ್ರಾಣಿ" ಎನಿಸಿದಳು ರೇಕಮ್ಮ. ನಂಜುಂಡಕವಿ ರೇಕಮ್ಮನನ್ನು ಕರವೀರ ರೇಕವ್ವೆ ಎಂದು ಸ್ತುತಿಸಿದ್ದಾನೆ.[62]

ಸತ್ಯಕ್ಕ

ಸತ್ಯಕ್ಕ ಏಕ ದೇವತಾನಿಷ್ಠೆಯ ನಿಬ್ಬೆರಗಿನಲ್ಲಿ ಬದುಕಿದ ಸತ್ಯ ಶರಣೆ. ಈಕೆಯ ನಿಷ್ಠಾಭಕ್ತಿಯ ಕಥೆ, ಶಿಷ್ಟ ಮತ್ತು ಜನಪದ ಸಾಹಿತ್ಯಗಳೆರಡರಲ್ಲೂ ಪ್ರಸಿದ್ಧವಾಗಿದೆ. ಆದಯ್ಯ ತನ್ನ ಎರಡು ವಚನಗಳಲ್ಲಿ ಈಕೆಯ ಯುಕ್ತಿಯನ್ನು ಕೊಂಡಾಡಿದರೆ, ಹರಿಹರ ತನ್ನ ಲಿಂಗಾರ್ಚನೆಯ ರಗಳೆಯಲ್ಲಿ ಈಕೆಯ ಸ್ತುತಿ ಮಾಡಿದ್ದಾನೆ. ಸತ್ಯಕ್ಕನ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಹಿರೇಜಂಬೂರು. ಶಿವಭಕ್ತರ ಮನೆಯ ಅಂಗಳದ ಕಸಗುಡಿಸುತ್ತಾ ಶಿವಭಕ್ತಿಯನ್ನು ಆಚರಿಸುವುದು ಇವಳ ಕಾಯಕವಾಗಿತ್ತು.[63] ಕವಿಚರಿತೆಕಾರರು ಸತ್ಯಕ್ಕ ಕ್ರಿ.ಶ.ಸುಮಾರು 1160ರಲ್ಲಿ ಜೀವಿಸಿದ್ದಳೆಂದು ಅಭಿಪ್ರಾಯಪಡುತ್ತಾರೆ.[64]

ಇವಳ ಇಷ್ಟದೈವ 'ಶಂಭುಕೇಶ್ವರ'. ಜಂಬೂರಿನ ಹೊರವಲಯದಲ್ಲಿ ಇವಳ ಇಷ್ಟದೈವ ಶಂಭುಕೇಶ್ವರ ದೇವಾಲಯವಿದ್ದು, ಅದನ್ನು ಜಕ್ಕೇಶ್ವರಗುಡಿ ಎಂದು ಜನರು ಕರೆಯುತ್ತಾರೆ. ಶಿವ ಪಾರಮ್ಯ, ಸದ್ಭಕ್ತರ ಮಹಿಮೆ, ಸತಿಪತಿ ಭಾವ, ಸದಾಚಾರದಲ್ಲಿ ನಡೆಯುವ ಗುರು, ಶಿಷ್ಯ, ಜಂಗಮರ ಗುಣಲಕ್ಷಣಗಳ ವರ್ಣನೆ, ಡಾಂಬಿಕ ಗುರು, ಶಿಷ್ಯ, ಜಂಗಮರ ಮತ್ತು ಭವಿಗಳ ಟೀಕೆ, ಸ್ತ್ರೀ–ಪುರುಷರ ಸಮಾನತೆ –ಇವು ಸತ್ಯಕ್ಕನ ವಚನಗಳಲ್ಲಿ ಅಳವಟ್ಟ ಮುಖ್ಯ ವಿಚಾರಗಳು.[65]

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ.

ಸಿದ್ಧಬುದ್ಧಯ್ಯ ಮತ್ತು ಕಾಳವ್ವೆ ಈ ದಂಪತಿಗಳಿಬ್ಬರ ಬಗೆಗೂ ಏನೊಂದು ಸಂಗತಿ ತಿಳಿದಿಲ್ಲ. ಬಸವಾದಿ ಶರಣರ ಮಧ್ಯೆ ಕಾಯಕ ಜೀವಿಗಳಾಗಿ ಬದುಕಿದ ಸಾಮಾನ್ಯ ವರ್ಗಕ್ಕೆ ಸೇರಿದ ಶರಣರೆಂದು ತೋರುತ್ತದೆ. ಪ್ರಸ್ತುತ ಕಾಳವ್ವೆ ಭೀಮೇಶ್ವರ ಅಂಕಿತದಲ್ಲಿ ವಚನ ರಚಿಸಿದ್ದಾಳೆ. ಲಭ್ಯವಿರುವ ಕಾಳವ್ವೆಯ ಒಂದು ವಚನ. ವ್ರತಭ್ರಷ್ಟ ಮತ್ತು ಲಿಂಗಬಾಹ್ಯರನ್ನು ಟೀಕಿಸಿ ಅವರನ್ನು ಕಂಡರೆ ಸತ್ತ ನಾಯಿ, ಕಾಗೆಗಳನ್ನು ಕಂಡಂತೆ ಭಾವಿಸಬೇಕು ಎನ್ನುತ್ತಾಳೆ.[66]

ಸೂಳೆ ಸಂಕವ್ವೆ

ಸೂಳೆ ಸಂಕವ್ವೆಯ ವಿಚಾರವಾಗಿ ಏನೊಂದು ವಿವರಗಳು ದೊರೆತಿಲ್ಲ. ಬಸವಣ್ಣನವರ ಸಮಕಾಲೀನ ವಚನಕಾರ್ತಿ. 'ನಿರ್ಲಜ್ಜೇಶ್ವರ' ಅಂಕಿತದಲ್ಲಿ ಸಂಕವ್ವೆ ರಚಿಸಿದ ಒಂದು ವಚನ ದೊರೆತಿದ್ದು, ಆಕೆಯ ಪ್ರಾಮಾಣಿಕ, ನಿರ್ಭೀತ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ. ಆಕೆಯ ಹೆಸರಿನೊಂದಿಗೆ ಇರುವ ವೃತ್ತಿ ಸೂಚಕ ವಿಶೇಷಣವೂ ಆಕೆಯ ಸಾಮಾಜಿಕ ಹಿನ್ನೆಲೆಯ ಸೂಚನೆ ನೀಡುತ್ತದೆ. ಮೊದಲು ವೇಶ್ಯಾ ವೃತ್ತಿಯನ್ನು ಮಾಡುತ್ತಿದ್ದು, ನಂತರ ಶರಣರ ಚಳುವಳಿಯ ಪ್ರಭಾವಕ್ಕೊಳಗಾಗಿ ಸಾತ್ವಿಕ ಬದುಕಿನತ್ತ ಸಾಗಿ ಬಂದಿರಬೇಕೆಂದು ತಿಳಿದುಬರುತ್ತದೆ. ಇವಳೊಬ್ಬ ಸ್ವಾಭಿಮಾನವನ್ನು ಬೆಳೆಸಿಕೊಂಡು ಬದುಕಿದ ದಿಟ್ಟ ಮಹಿಳೆ. ವ್ರತಭ್ರಷ್ಟರ ಟೀಕೆ ಈಕೆಯ ವಚನಗಳಲ್ಲಿ ಕಂಡುಬರುತ್ತದೆ.[67]

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

ಲಿಂಗಮ್ಮ ದಲಿತ ವಚನಕಾರ್ತಿ. ಈಕೆ ಬಸವಣ್ಣನ ಆಪ್ತರಲ್ಲಿ ಅತಿ ಮುಖ್ಯರೆನಿಸಿದ

ಹಡಪದ ಅಪ್ಪಣ್ಣನ ಸತಿ. ಗುರುರಾಜ ಚರಿತೆಯಲ್ಲಿ ಬರುವ 'ಚಾರುಗುರು ಭಕ್ತಿಲಿಂಗಮ್ಮ' ಎಂಬ ಹೇಳಿಕೆಯನ್ನು ಬಿಟ್ಟರೆ, ಮತ್ಯಾವ ವೀರಶೈವ ಕಾವ್ಯಗಳಲ್ಲಿಯೂ ಕಂಡುಬರುವುದಿಲ್ಲ. ಸ್ವರಚಿತ ವಚನಗಳಿಂದ ಈಕೆಯ ಗುರು ಚೆನ್ನಮಲ್ಲೇಶ ಎಂದು ತಿಳಿಯುತ್ತದೆ. 'ಅಪ್ಪಣ್ಣಪ್ರಿಯ ಚೆನ್ನಬಸವೇಶ್ವರಲಿಂಗ' ಎಂಬುದು ಲಿಂಗಮ್ಮನ ವಚನಾಂಕಿತ. ದೊರೆತಿರುವ ವಚನಗಳು 114. ಕನಿಷ್ಠ ಜಾತಿಯಲ್ಲಿ ಹುಟ್ಟಿದರೂ ಲಿಂಗಜಾತಿಯ ಸೂತಕಗಳನ್ನು ಕಳೆದುಕೊಂಡು ಆಧ್ಯಾತ್ಮ ಸಾಧಕಳಾಗಿ ಬೆಳೆದ ವಿಚಾರಜೀವಿ.

'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎನ್ನುವ ಶರಣ ದಾಂಪತ್ಯದ ಸೂತ್ರ ಲಿಂಗಮ್ಮನ ಸಮರಸ ದಾಂಪತ್ಯದ ಸೂತ್ರವಾಗಿದೆ. ಮನದ ಚಂಚಲತೆ, ಘನವಸ್ತುವನ್ನು ಕಾಣಲು ಆ ಮನವನ್ನು ನಿಗ್ರಹಿಸಬೇಕಾದ ವಿಧಾನ, ಗುರು ಲಿಂಗ ಜಂಗಮ ಭಕ್ತಿ, ಶರಣರ ನಡೆನುಡಿ ಬೋಧೆ, ಆಚಾರನಿಷ್ಠೆ, ಯೋಗವಿಚಾರ –ಇವು ಲಿಂಗಮ್ಮನ ವಚನಗಳಲ್ಲಿ ಕಂಡುಬರುವ ಮುಖ್ಯ ವಿಷಯಗಳು.[68]

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

ಹಾದರ ಎಂಬುದು ಹರದ ಆಗಿರಬೇಕು ಎಂದು ಕೆಲವರ ಊಹೆ. ಈ ಊಹೆಗಳು ಏನೇ ಇದ್ದರೂ ಗಂಗಮ್ಮ ಹಾದರ ಕಾಯಕದ ಮಾರಯ್ಯನ ಸತಿ. ಈಕೆಯ ವಚನಗಳ ಅಂಕಿತ 'ಗಂಗೇಶ್ವರ' ಕರ್ನಾಟಕ ಕವಿಚರಿತೆಕಾರರು ಬಸವ ಸಮಕಾಲೀನ ವಚನಕಾರರೆಂದು ಗುರುತಿಸಿರುವ ವಚನಗಳು ಸಿಕ್ಕಿಲ್ಲದ, ವಚನಕಾರರ ಪಟ್ಟಿಯಲ್ಲಿ ಗಂಗೇಶ್ವರಲಿಂಗ ಅಂಕಿತದ ಗಂಗಮ್ಮನ ಪ್ರಸ್ತಾಪ ಮಾಡಿದ್ದಾರೆ.

ಪ್ರಸ್ತುತ ಈಕೆಯ ಒಂದು ವಚನ ಮಾತ್ರ ದೊರೆತಿದೆ. ಸೂಳೆ ಸಂಕವ್ವೆಯಂತೆ ಈಕೆಯೂ ಮೊದಲು ವೇಶ್ಯಾವೃತ್ತಿಯಿಂದ ಜೀವನ ಸಾಗಿಸುತ್ತಿದ್ದು, ಬಸವಾದಿಗಳ ಪ್ರಭಾವದಿಂದ ಶರಣಜೀವನ ಸ್ವೀಕರಿಸಿರಬೇಕು. 'ಆವ ಕಾಯಕ ಮಾಡಿದಡೂ ಒಂದೇ ಕಾಯಕವಯ್ಯ ಎಂಬ ಅವಳ ಮಾತಿನಲ್ಲಿ ತಾನೂ ಕೀಳು ಕುಲದಿಂದ ಬಂದವಳೆಂಬ ಧ್ವನಿ ಇದ್ದಂತಿದೆ. ಈಕೆಯ ವಚನದಲ್ಲಿ ಕಾಯಕ ಸಮಾನತೆ ವ್ರತನಿಷ್ಠೆ ಇವೆ ಮುಖ್ಯ ಆಶಯಗಳಾಗಿವೆ.[69]

ವಚನಕಾರ್ತಿಯರ ಹಿನ್ನೆಲೆಯನ್ನು ಗಮನಿಸಿದಾಗ ಕೆಳವರ್ಗದಿಂದ ಬಂದ ವಚನಕಾರ್ತಿಯರ ಸಂಖ್ಯೆಯೆ ಅಧಿಕವಾಗಿದೆ. ಕೆಳವರ್ಗದಿಂದ ಬಂದ ವಚನಕಾರ್ತಿಯರು ತಮ್ಮನ್ನು ತಾವು ದುಡಿಮೆಯಿಂದ ಗುರುತಿಸಿಕೊಂಡು ಶರಣರ ತತ್ವಗಳ ಪ್ರಭಾವಕ್ಕೆ ಒಳಗಾಗಿ ದುಡಿಮೆಯನ್ನು ಕಾಯಕದ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. 'ಕಾಯಕ'ದಿಂದಲೇ ಮುಕ್ತಿ, ದೈವ ಸಾಕ್ಷಾತ್ಕಾರ ಎಂದುಕೊಂಡು ಹಾಗೆಯೆ ಬದುಕಿದವರು ಈ ಶರಣೆಯರು. ಲಭ್ಯವಿರುವ 35 ವಚನಕಾರ್ತಿಯರನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

ಮೊದಲನೆಯದಾಗಿ ಶರಣರ ಹಿತನುಡಿಗಳ ಆಚೆಗೆ ತಮ್ಮನ್ನು ಗುರುತಿಸಿಕೊಳ್ಳಲಾಗದೆ ಶರಣೆಯರಾಗುವುದಕ್ಕಿಂತ ಹೆಚ್ಚಾಗಿ ಶರಣರಾಗಿಯೇ ಗುರುತಿಸಿಕೊಂಡವರು. ನಾಗಲಾಂಬಿಕೆ, ಮುಕ್ತಾಯಕ್ಕ, ನೀಲಮ್ಮ, ಗಂಗಾಂಬಿಕೆ –ಈ ವರ್ಗಕ್ಕೆ ಸೇರುವ ಶರಣೆಯರು. ಎರಡನೆಯದಾಗಿ 'ಕಾಯಕವೆ ಕೈಲಾಸ' ಎಂದು ಪತಿಯರ ಜತೆ ಶರಣೆಯರಾಗಿ ಪರಿವರ್ತನೆ ಹೊಂದಿದವರು.

ಕೊಟ್ಟಣದ ಸೋಮಮ್ಮ, ಕನ್ನಡಿ ಕಾಯಕದ ರೇಮಮ್ಮ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಕದಿರೆ ರೆಮ್ಮವ್ವೆ, ಕದಿರ ಕಾಯಕದ ಕಾಳವ್ವೆ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ದುಗ್ಗಳೆ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ –ಇವರೆಲ್ಲರನ್ನು ಗುರುತಿಸಿಬಹುದು.

ಮೂರನೆಯದಾಗಿ ಶರಣರ ಜತೆಯೇ ತಮ್ಮದೆ ಆದ ಶರಣೆಯರ ಹಾದಿಯನ್ನು ಹಿಡಿದವರು. ಇದರಲ್ಲಿ ಅಕ್ಕಮಹಾದೇವಿ, ಗೊಗ್ಗವ್ವೆ, ಬೊಂತಾದೇವಿಯರನ್ನು ಗುರುತಿಸಬಹುದು. 'ಆನೆ ನಡೆದದ್ದೇ ದಾರಿ' ಎನ್ನುವ ರೀತಿ ಬದುಕು ಸಾಗಿಸಿದವಳು ಅಕ್ಕಮಹಾದೇವಿ ಮಾತ್ರ ಎನಿಸುತ್ತದೆ. ಈಕೆಗೆ ಕಾಯಕದ ಹಂಗಿಲ್ಲ, ಜೀವನದ ಜಂಜಡವಿಲ್ಲ, ಲೌಕಿಕದ ಸಮಸ್ಯೆಗಳು ಮುಖ್ಯವಾಗಲಿಲ್ಲ. ಹಾಗಾಗಿ ಅಕ್ಕ ಕಂಡದ್ದು, ಕಾಣಲಿಕ್ಕೆ ತವಕಿಸಿದ್ದು, ಕೇವಲ ಚೆನ್ನಮಲ್ಲಿಕಾರ್ಜುನಿಗಾಗಿ ಮಾತ್ರ.

ಗೊಗ್ಗವ್ವೆ, ಬೊಂತಾದೇವಿಯರು ಅಕ್ಕನ ರೀತಿಯೇ ಇಷ್ಟದೈವದಲ್ಲಿಯೇ ಸಾಕ್ಷಾತ್ಕಾರ ಕಂಡವರಾದರೂ ಕೂಡ ಅಕ್ಕನ ಮಾರ್ಗವೇ ಬೇರೆ, ಇವರ ಮಾರ್ಗವೇ ಬೇರೆ. ಗೊಗ್ಗವ್ವೆ, ಬೊಂತಾದೇವಿಯರು, ಅಕ್ಕನ ಮಟ್ಟಕ್ಕೆ ಏರದಿದ್ದರೂ ತಮ್ಮ ಅಸ್ತಿತ್ವವನ್ನು ಅಕ್ಕನ ರೀತಿಯಲ್ಲಿಯೇ ಗುರುತಿಸಿಕೊಳ್ಳಲು ಹೊರಟವರು. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿಯಲ್ಲಿ ಎ.ಕೆ.ಎರಾಮಾನುಜನ್‌ರವರು ಮಹಿಳಾ ಸಂತರ ಬದುಕನ್ನು ಐದು ಹಂತಗಳಲ್ಲಿ ಗುರುತಿಸುತ್ತಾರೆ.

1. ಚಿಕ್ಕ ಪ್ರಾಯದಲ್ಲೇ ದೇವರಿಗೆ ಅರ್ಪಿಸಿಕೊಳ್ಳುವುದು.
2. ಮದುವೆಯನ್ನು ನಿರಾಕರಿಸುವುದು.
3. ಸಾಮಾಜಿಕ ಕಟ್ಟುಕಟ್ಟಲೆಗಳನ್ನು ವಿರೋಧಿಸುವುದು.
4. ದೀಕ್ಷೆ.
5. ದೇವರನ್ನು ಮದುವೆಯಾಗುವುದು.[70]

ಈ ಐದು ಹಂತಗಳನ್ನು ಶರಣೆಯರಿಗೆ ಹೋಲಿಸಿಕೊಂಡರೆ, ಮಹಿಳಾ ಸಂತರಾಗಿ ಗೊಗ್ಗವ್ವೆ, ಬೊಂತಾದೇವಿ, ಅಕ್ಕಮಹಾದೇವಿಯನ್ನು ಗುರುತಿಸಬಹುದು. ಅಕ್ಕಮಹಾದೇವಿ ಸಾಮಾಜಿಕ ಕಟ್ಟುಕಟ್ಟಲೆಯನ್ನು ವಿರೋಧಿಸಿದವಳು. ಅಂದರೆ ಕೇವಲ ಗಂಡಸರ ಕಾಮಚೇಷ್ಟೆಗಳನ್ನು ಖಂಡಿಸುವ ಜತೆಗೆ ಭೋಗವಸ್ತು ಎಂದು ತಿಳಿದು ಬಂದವರಿಗೆ ಪಾಠ ಕಲಿಸುತ್ತಾಳೆ. ಹಾಗಾಗಿ ತನ್ನ ಮೈಮೇಲಿನ ಬಟ್ಟೆಯನ್ನು ಬಿಚ್ಚಿ ಎಸೆದು ಬೆತ್ತಲೆ ತಿರುಗಾಡುತ್ತಾಳೆ. ಸಮಾಜದಲ್ಲಿ ಸ್ತ್ರೀ–ಪುರುಷರ ನಡುವಿನ ವಿಭಿನ್ನ ಬಟ್ಟೆಗಳು ಸೂಚಿಸುವ ವ್ಯತ್ಯಾಸವನ್ನು ಪರಿಶುದ್ಧತೆ ಎಂದು ತಿಳಿದಿದ್ದ ಕಲ್ಪನೆಯನ್ನು ಮೀರುತ್ತಾಳೆ.

ಇಲ್ಲಿ ಅಕ್ಕ–ಕರಿಕಾಲಮ್ಮೆಯ ನಡಾವಳಿಗಳು ಸ್ವಲ್ಪ ವ್ಯತ್ಯಾಸವಾದರೂ ಒಂದೇ ರೀತಿ ಕಂಡುಬರುತ್ತದೆ. ಕರಿಕಾಲಮ್ಮೆ ಕಾಮಾತುರನಾದವನ ಮುಂದೆ ಪ್ರೇತವಾಗಿ ಬದಲಾಗುತ್ತಾಳೆ. ಆದರೆ, ಅಕ್ಕಮಹಾದೇವಿ, ರಾಕ್ಷಸಿ, ಮಾಯೆ, ದೇವತೆ ಇವುಗಳಲ್ಲಿ ಯಾವುದೂ ಆಗದೇ ಕೇವಲ ಹೆಣ್ಣಾಗಿಯೇ ಉಳಿದು ಕರಿಕಾಲಮ್ಮೆಗಿಂತ ಶ್ರೇಷ್ಠ ಸಂತಳಾಗಿ ನಿಲ್ಲುತ್ತಾಳೆ. ಹೀಗೆ ಸಾಮಾಜಿಕ ಕಟ್ಟುಕಟ್ಟಲೆಗಳನ್ನು ಮೀರಿ ನಿಂತರೂ ಕೂಡ ದೀಕ್ಷೆಯ ವಿಷಯದಲ್ಲಿ

ಅಲ್ಲಮನಿಂದಲೇ ಅಕ್ಕ ದೀಕ್ಷೆಯನ್ನು ಪಡೆದುಕೊಳ್ಳಬೇಕಾಯಿತು. ಅಕ್ಕನಷ್ಟೇ ಅಲ್ಲ, ಬೊಂತಾದೇವಿಯೂ ಕೂಡ ಅಲ್ಲಮನಿಂದ ಆದೇಶಿತಳಾಗಿಯೆ ಅಲ್ಲಮ-ಅಕ್ಕ ಕಲ್ಯಾಣವನ್ನು ತೊರೆದ ನಂತರವೂ ಉಳಿಯುತ್ತಾಳೆ. ಮಹಿಳಾ ಸಂತರಾದರು ಕೂಡ ಪುರುಷನಿಂದಲೇ ನಿರ್ದೇಶಿಸಲ್ಪಟ್ಟಿರುವುದು ಕಂಡುಬರುತ್ತದೆ.

ಚಿಕ್ಕ ಪ್ರಾಯದಲ್ಲಿ ದೇವರಿಗೆ ಅರ್ಪಿಸಿಕೊಳ್ಳುವುದರಲ್ಲಿ ಗೊಗ್ಗವ್ವೆ ಪ್ರಮುಖಳಾಗಿ ಕಾಣುತ್ತಾಳೆ. ಮದುವೆಯನ್ನು ನಿರಾಕರಿಸಿ ಶಂಭುಕೇಶ್ವರಿಗೆ ಧೂಪವನ್ನಿಕ್ಕುತ್ತಲೇ ದೈವ ಸಾಕ್ಷಾತ್ಕಾರ ಪಡೆಯುತ್ತಾಳೆ. ಗೊಗ್ಗವ್ವೆ ಅಕ್ಕನಿಗಿಂತ ವಿಶಿಷ್ಠವಾಗಿ ಭಿನ್ನವಾಗಿ ಕಂಡುಬರುವುದು ಇಲ್ಲಿಯೇ ಅಕ್ಕ ಇಹದ ಗಂಡನಲ್ಲದಿದ್ದರೂ ಪರದ ಗಂಡನನ್ನು ಒಪ್ಪಿ ಬದುಕಿದವಳು. ಆದರೆ, ಗೊಗ್ಗವ್ವೆ ಪತಿಯನ್ನು ಹಾಗೂ ಮದುವೆಯನ್ನು ನಿರಾಕರಿಸಿ ಬದುಕಿದವಳು. ಶಿವನೆ ನಾನಾ ವೇಶದಲ್ಲಿ ಬಂದರೂ ಕೂಡಲೊಲ್ಲದವಳು. ಅಕ್ಕಮಹಾದೇವಿ ಇಹದ ಗಂಡನ ಜತೆಗಿನ ಮದುವೆ ಹಾಗೂ ಕಾಮತೃಷೆಯನ್ನು ನಿರಾಕರಿಸಿದರೂ ಪರದ ಗಂಡನಲ್ಲಿ ಐಕ್ಯವಾಗುವ ಬಗ್ಗೆ 'ಚಿಕ್ಕ ಚಿಕ್ಕ ಸುಲಿಪಲಿ ಗೊರವನ ಕಂಡೆ' ಎನ್ನುವಾಗ ಚೆನ್ನಮಲ್ಲಿಕಾರ್ಜುನನ ಕಾಲ್ಪನಿಕ ಚಿತ್ರಣವೊಂದನ್ನು ತನ್ನ ಮನಸ್ಸಿನಲ್ಲಿ ಮೂಡಿಸಿಕೊಂಡು ಅಲೌಕಿಕ ಪತಿಯ ಜತೆಗಿನ ಮದುವೆ ಕನಸ್ಸು ಕಾಣುತ್ತಾಳೆ. ಆದರೆ, ಗೊಗ್ಗವ್ವೆ ಇದಕ್ಕಿಂತ ಭಿನ್ನವಾಗಿ ಕಂಡುಬರುತ್ತಾಳೆ. ಬಹುಶಃ ಗೊಗ್ಗವ್ವೆ ಮೋಕ್ಷದ ದಾರಿಯೊಂದನ್ನಷ್ಟೆ ಬಯಸಿದ್ದಳೆಂದು ಕಾಣಿಸುತ್ತದೆ.

ಅಕ್ಕಮಹಾದೇವಿಯ ಮಾಡುವ ಚೆನ್ನಮಲ್ಲಿಕಾರ್ಜುನನಿಗಾಗಿ ಹಂಬಲಿಸುವ ವರ್ತನೆ ರಾಧಾಳಿಗಿಂತ, ಮೀರಾಳಿಗಿಂತ ಭಿನ್ನವಾಗೇನೂ ಇಲ್ಲ. ಮೀರಾ ತನ್ನ ಗಂಡ ಸತ್ತ ನಂತರ ಸತಿ ಹೋಗುವುದನ್ನು ವಿರೋಧಿಸುತ್ತಾಳೆ. ಇಹದ ಗಂಡದ ಮೇಲಿನ ಪ್ರೀತಿಯನ್ನು ಪರದ ಗಂಡನಾದ ಮಾಧವನ ಮೇಲೆ ಇರಿಸಿ ಸಂತಳಾಗುತ್ತಾಳೆ. ಆದರೆ, ಅಕ್ಕನ ಚಿತ್ತವೆಲ್ಲವೂ ಚೆನ್ನಮಲ್ಲಿಕಾರ್ಜುನನ ಮೇಲೆಯೆ. ಅದು ಕೌಶಿಕನ ಜತೆಗಿದ್ದಾಗಲೂ ಹೌದು; ಕೌಶಿಕನನ್ನು ತೊರೆದು ಬಂದ ನಂತರವೂ ಹೌದು.

ಪತಿ ಶರಣನಾದ ಮೇಲೆ ಸತಿ, ಪತಿಯ ಮಾರ್ಗವನ್ನೇ ಹಿಡಿದು ಶರಣೆಯರಾದ ವಚನಕಾರ್ತಿಯರು, ಅಕ್ಕನಂತಹ ಬದುಕಿಗಿಂತ ಬೇರೆಯಾಗಿ ನಿಲ್ಲುತ್ತಾರೆ. ಇಂಥವರಲ್ಲಿ ಹೆಚ್ಚಾಗಿ ಶರಣ ಸಮುದಾಯದ ಕಾಯಕನಿಷ್ಠೆ, ವ್ರತನಿಷ್ಠೆ, ಆಚಾರನಿಷ್ಠೆಗಳೆ ಕಂಡುಬರುತ್ತವೆ. ಅಲ್ಲದೆ, ತಾವು ಕೆಳವರ್ಗದಿಂದ ಬಂದು ಶರಣರಾದ ನಂತರ ಮತ್ತೊಂದು ಭವಿ-ಭಕ್ತ ವರ್ಗವನ್ನು ನಿರ್ಮಿಸಲು ಮುಂದಾಗುತ್ತಾರೆ. ಇಲ್ಲಿ ಶರಣರ ತತ್ವಗಳನ್ನು ಕಾಪಾಡಿಕೊಳ್ಳುವ ಅಚ್ಚುಕಟ್ಟಿನ ಗೃಹಿಣಿಯರಾಗಿ, ಪತಿವ್ರತೆಯರಾಗಿ ಕಂಡುಬರುತ್ತಾರೆ.

ಅಡಿ ಟಿಪ್ಪಣಿಗಳು

1. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-33
2. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ-2006, ಪುಟ-61
3. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001,

ಪುಟ–34–35
4. ಅದೇ, ಪುಟ–88, ವಚನ–297
5. ಅದೇ, ಪುಟ–38,
6. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ,ಮುದ್ರಣ–2006, ಪುಟ–136
7. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–40–41
8. ಅದೇ, ಪುಟ–43
9. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ,ಮುದ್ರಣ–2006, ಪುಟ–104
10. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–44
11. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–105
12. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ: ಸಂಪುಟ–11: ಚರಿತ್ರ ಸಾಹಿತ್ಯ:2, ಸಂ: ಡಾ. ಎಂ.ಎಸ್.ಮದಭಾವಿ, ಮುದ್ರಣ–2007, ಪುಟ–244
13. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–45
14. ಅದೇ, ಪುಟ–46
15. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–140
16. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–46
17. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–140
18. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–46
19. ಅದೇ, ಪುಟ–47
20. ಅದೇ, ಪುಟ–47–48
21. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–150–151
22. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–48
23. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–151
24. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–237, ವಚನ–751(1)
25. ಅದೇ, ಪುಟ–50

26. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–143
27. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ: ಸಂಪುಟ–11: ಚರಿತ್ರ ಸಾಹಿತ್ಯ:2, ಸಂ:ಡಾ. ಎಂ.ಎಸ್.ಮದಭಾವಿ, ಮುದ್ರಣ–2007, ಪುಟ–223
28. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–106–107
29. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–50–51
30. ಅದೇ, ಪುಟ–52
31. ಅದೇ, ಪುಟ–53
32. ಅದೇ, ಪುಟ–245, ವಚನ–772(1)
33. ಅದೇ, ಪುಟ–53–54
34. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–91–92
35. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ: ಸಂಪುಟ–11: ಚರಿತ್ರ ಸಾಹಿತ್ಯ:2, ಸಂ:ಡಾ.ಎಂ.ಎಸ್. ಮದಭಾವಿ, ಮುದ್ರಣ–2007, ಪುಟ–151
36. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–154–155
37. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–55
38. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–155
39. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–55
40. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–109
41. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–55–56
42. ಅದೇ, ಪುಟ–56
43. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–110–111
44. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–57
45. ಅದೇ, ಪುಟ–58
46. ಅದೇ, ಪುಟ–59–60
47. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–115
48. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–60

49. ಅದೇ, ಪುಟ–61
50. ಅದೇ, ಪುಟ–61
51. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–63
52. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–62
53. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–94
54. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–62
55. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–120
56. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–62–63
57. ಅದೇ, ಪುಟ–63–64
58. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–126
59. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–64–65
60. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–65
61. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–65–66
62. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–150
63. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–66
64. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–95
65. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–67
66. ಅದೇ, ಪುಟ–68
67. ಅದೇ, ಪುಟ–68
68. ಅದೇ, ಪುಟ–69–71
69. ಅದೇ, ಪುಟ–71–72
70. ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್ ತರೀಕೆರೆ, ಮುದ್ರಣ–2005, ಪುಟ–144–146

ಅಧ್ಯಾಯ–2

ಕಾಯಕ ಮತ್ತು ಕಾಯಕತತ್ವ

ಹನ್ನೆರಡನೇ ಶತಮಾನದ ವಚನಕಾರರು ಮತ್ತು ವಚನಕಾರ್ತಿಯರು ತಮ್ಮನ್ನು ತಾವು ಬಹುಮುಖ್ಯವಾಗಿ ಗುರ್ತಿಸಿಕೊಂಡದ್ದು, ಕಾಯಕ ಹಾಗೂ ಕಾಯಕ ನಿಷ್ಠೆಯಿಂದಲೇ. ಇಲ್ಲಿಯವರೆಗೆ ದೊರೆತಿರುವ 35 ವಚನಕಾರ್ತಿಯರಲ್ಲಿ ಅಕ್ಕನಂತಹ ವಚನಕಾರ್ತಿಯರನ್ನ– ಮೇಲ್ವರ್ಗದಿಂದ ಬಂದತಹ ವಚನಕಾರ್ತಿಯರನ್ನ– ಹೊರತುಪಡಿಸಿದರೆ, ಉಳಿದವರೆಲ್ಲ ಕೆಳವರ್ಗದಿಂದ ಬಂದಂತಹವರುಗಳೇ ಆಗಿದ್ದು, ಅವರು ತಮ್ಮ ಜಾತಿ ಮತ್ತು ವೃತ್ತಿಯ ಮೂಲಕವೇ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

ಈ ರೀತಿ ಗುರುತಿಸಿಕೊಳ್ಳುವಿಕೆಯಿಂದ ಕೆಳವರ್ಗದ ವಚನಕಾರ್ತಿಯರಿಗೆ ಸಾಮಾಜಿಕ ಸ್ಥಾನ–ಮಾನ ದೊರೆಯಿತು. ಕಾಯಕದ ಮೂಲಕವೇ ತಮ್ಮ ವೃತ್ತಿಯ ಘನತೆಯನ್ನು ಹಾಗೂ ಆತ್ಮ ಘನತೆಯನ್ನು ಪಡೆದುಕೊಂಡರು. ಮೇಲ್ವರ್ಗದ ವಚನಕಾರ್ತಿಯರು ತಮ್ಮ ಇಷ್ಟಲಿಂಗ(ದೈವ)ದ ಅಂಕಿತವನ್ನು ಇಟ್ಟುಕೊಂಡರೆ ಕೆಳವರ್ಗದಿಂದ ಬಂದಂತಹ ವಚನಕಾರ್ತಿಯರು ತಮ್ಮ ಕಾಯಕವನ್ನೇ ದೈವನ್ನಾಗಿಸಿ ಅಂಕಿತವನ್ನಿಟ್ಟುಕೊಳ್ಳುವಂಥ ದಿಟ್ಟ ಹೆಜ್ಜೆಯನ್ನು ಇಡುತ್ತಾರೆ.

ಕಾಯಕನಿಷ್ಠೆಗೆ ಬದ್ಧನಾದ ಶರಣನಿಗೆ ಸತಿಯಾದವಳು ನೆರವಾದ ನಿದರ್ಶನಗಳಿವೆ. ಆದರೆ, ಶರಣೆಯರ ಪತಿಯರು ಶರಣೆಯರ ಕಾಯಕ ನಿಷ್ಠೆಗೆ ಬದ್ಧರಾಗಿದ್ದರೆ? ಎಂಬ ಪ್ರಶ್ನೆ ಕಾಡುತ್ತದೆ. ದುಗ್ಗಳೆಯಂಥವಳು ಜೇಡರ ದಾಸಿಮಯ್ಯನ ಮನಸ್ಸನ್ನು ಅರಿತು ನಡೆದಳು ಎಂಬುದನ್ನು; ಆತನ ನೇಯ್ಗೆ ಕಾಯಕಕ್ಕೆ ನೆರವಾದಳೆಂದು ಗುರುತಿಸಲಾಗುತ್ತದೆ. ದುಗ್ಗಳೆ, ಜೇಡರ ದಾಸಿಮಯ್ಯನ ವ್ಯಕ್ತಿತ್ವ ರೂಪಿಸುವಲ್ಲಿ ಸಹಾಯಕಳಾದಷ್ಟು ದಾಸಿಮಯ್ಯ ದುಗ್ಗಳೆಯ ವ್ಯಕ್ತಿತ್ವವನ್ನು ರೂಪಿಸುವಂತಹ ಪ್ರಯತ್ನವೇನನ್ನು ಕೂಡ ಮಾಡಿದಂತೆ ತೋರುವುದಿಲ್ಲ. ದಾಸಿಮಯ್ಯ ತನ್ನ ವಚನವೊಂದರಲ್ಲಿ ದುಗ್ಗಳೆಯನ್ನು ಕುರಿತು

> "ಬಂದುದನರಿದು ಬಳಸುವಳು,
> ಬಂದುದ ಪರಿಣಾಮಿಸುವಳು
> ಬಂದು ಬಳಗವ ಮರಸುವಳು
> ದುಗ್ಗಳೆಯ ತಂದು ಬದುಕಿದೆನು ರಾಮನಾಥ".[1]

ಎಂದು ಹೇಳಿರುವಲ್ಲಿ ದಾಸಿಮಯ್ಯನ ವ್ಯಕ್ತಿತ್ವ ಬೆಳಗುವಲ್ಲಿ ದುಗ್ಗಳೆಯ ಪಾತ್ರ ಎಂತಹ ಉನ್ನತವಾಗಿತ್ತು ಎಂಬುದನ್ನು ಪ್ರಕಟಿಸುತ್ತದೆ. ಇಲ್ಲಿಯೂ ಕೂಡ ಸಾಂಪ್ರದಾಯಿಕ ಚಿಂತನಾ ಕ್ರಮವಾದ ಅನುಕೂಲೆಯಾದ ಪರಮ ಪತಿವ್ರತೆ ಸತಿಯ ನಿರೀಕ್ಷೆ ವಚನಕಾರರಲ್ಲಿ ಕಂಡುಬಂದಂತೆ ಕಾಣಿಸುವುದು. ದುಗ್ಗಳೆಯಂತಹ ಅನುಕೂಲ ಸತಿ ಹಾಗೂ ಅಕ್ಕ ಮಹಾದೇವಿಯಂತಹ ಸಂಪ್ರದಾಯ ಮನೋಭಾವ ಒಪ್ಪಿಕೊಂಡವರನ್ನು ಹೊರತುಪಡಿಸಿದರೆ, ಕೆಳವರ್ಗದಿಂಧ ಬಂದಂತಹ ವಚನಕಾರ್ತಿಯರೆಲ್ಲರೂ ಕೂಡ ತಮ್ಮನ್ನು ಕಾಯಕದಿಂದಲೇ ಗುರುತಿಸಿಕೊಂಡಿದ್ದಾರೆ.

ದುಗ್ಗಳೆಗಿಂತ ಹೆಚ್ಚಾಗಿ ಆಯ್ದಕ್ಕಿ ಲಕ್ಕಮ್ಮ ವಿಚಾರ ಸತಿಯಾಗಿ ದಾಂಪತ್ಯದ ಅರ್ಥವನ್ನು ವಿಸ್ತರಿಸಿದ್ದಾಳೆ. ಶರಣರು ರೂಪಿಸಿದಂತಹ ಕಾಯಕ ಮತ್ತು ದಾಸೋಹ ತತ್ವಗಳನ್ನು ತನ್ನ ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದವರು. ಇದರ ಜತೆಗೆ ತನ್ನ ಕಾಯಕದಿಂದಲೇ ಮನುಷ್ಯ ಘನತೆ ಹಾಗೂ ವೃತ್ತಿ ಘನತೆ ಹೆಚ್ಚಿಸಿಕೊಂಡವಳು.

ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಆಯ್ದಕ್ಕಿ ಮಾರಯ್ಯನ ಜತೆ ಮಹಾಮನೆಯಲ್ಲಿ ಬಿದ್ದಿರುವ ಅಕ್ಕಿಯನ್ನು ಆಯ್ದು ಜಂಗಮ ದಾಸೋಹ ಮಾಡುವ ಕಾಯಕವನ್ನು ಕೈಗೊಳ್ಳುತ್ತಾಳೆ. ಇವಳ ಕಾಯಕ ನಿಷ್ಠೆ ಪರೀಕ್ಷಿಸಲು ಬಸವಣ್ಣ, ಒಂದು ದಿನ ಹೆಚ್ಚು ಅಕ್ಕಿ ಅಂಗಳದಲ್ಲಿ ಚೆಲ್ಲಿಸುತ್ತಾನೆ. ಮಾರಯ್ಯ ಅವನ್ನೆಲ್ಲಾ ಸಂತೋಷದಿಂದ ಆಯ್ದು ತಂದು ಹೆಂಡತಿಯ ಕೈಯಲ್ಲಿ ಕೊಡುತ್ತಾನೆ. ಅದನ್ನು ಕಂಡು ಸಂತೋಷ ಪಡುವ ಬದಲು ಕೋಪಗೊಂಡು "ಆಸೆಯೆಂಬುದು ಅರಸಿಂಗಲ್ಲದೆ ಶಿವ ಭಕ್ತರಿಗುಂಟೆ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಬ್ಬ" ಎಂದು ಹೇಳುವುದರ ಜತೆಗೆ "ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೊ?" ಎಂದು ಪ್ರಶ್ನಿಸುತ್ತಾಳೆ.

ಹೀಗೆ ಪ್ರಶ್ನಿಸುವಾಗ ಕಾಯಕದ ಮೇಲಿರುವ ನಿಷ್ಠೆ. ಜತೆಗೆ ಆಸೆಬುರುಕ ಗಂಡನನ್ನು ಕಂಡು ಸತ್ಯವಂಥರನ್ನು ಪರೀಕ್ಷಿಸಲು ಎದುರಾಗುವ ಕಷ್ಟಗಳನ್ನು ಚಿತ್ತ ಶುದ್ಧದಿಂದಲೇ ಎದುರಿಸಬೇಕು ಎಂದು ಧೈರ್ಯ ತುಂಬುತ್ತಾಳೆ. ಹಾಗೆಯೇ ಇವರ ಮನ ಪರೀಕ್ಷಿಸಲು ಬಯಸಿದ ಬಸವಣ್ಣನಿಗೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರನ್ನು ಕರೆದುಕೊಂಡು ತಮ್ಮ ಮನೆಗೆ ಊಟಕ್ಕೆ ಬರಬೇಕು ಎಂದು ಆಹ್ವಾನಿಸುತ್ತಾಳೆ. ಬಂದ ಜಂಗಮರಿಗೆಲ್ಲ ಭಕ್ತಿಯಿಂದ ಅಡುಗೆ ಬಡಿಸಿ ತೃಪ್ತಿಪಡಿಸುತ್ತಾಳೆ. 'ಕಾಯಕದ ಮಹಿಮೆ ಅರಿವಾಯಿತು' ಎಂದು ಅಲ್ಲಮ ಕೊಂಡಾಡಿದರೆ, 'ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು' ಎಂದು ಬಸವಣ್ಣ ಉದ್ಗಾರ ತೆಗೆಯುತ್ತಾನೆ.[2]

ಸತಿಯಿಂದ ಕಾಯಕದ ಮಹಿಮೆ ಅರಿತ ಮಾರಯ್ಯ ತನ್ನ ಸಂಕುಚಿತ ನಿಲುವಿಗೆ ನಾಚಿದಾಗ ಆತನನ್ನು ಸಂತೈಸುತ್ತಾಳೆ. ಕೂಟಕ್ಕೆ ಸತಿಪತಿ ಎಂಬ ಭಿನ್ನತೆ ಇದ್ದರೂ "ಅರಿವಿಂಗೆ ಬೇರೊಂದೊಡಲುಂಟೆ?" ಎಂದು ಮಾರಯ್ಯನ ಕಳವಳವನ್ನು ಪರಿಹರಿಸುತ್ತಾಳೆ. ಗಂಡ ಕಾಯಕ ಮರೆತು ಅನುಭಾವ ಗೋಷ್ಠಿಯಲ್ಲಿ ಮೈಮರೆತಾಗ 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ' ಎಂದು ಎಚ್ಚರಿಸಿ ಸಮಯ ಪ್ರಜ್ಞೆಯನ್ನು ಮಿಡಿಯುತ್ತಾಳೆ. ಕಾಯಕದ ಬಗೆಗೆ ಮಾರಯ್ಯ ನಿರ್ಲಕ್ಷ್ಯ ತೋರಿದಾಗ 'ಆಯ್ದಿಹೆನೆಂಬ ಕಾಯಕದ ಅರಿಕೆ ಹಿಂಗಿತೆ? ನಾ ಮಾಡಿಹೆನೆಂಬ ತವಕ ಹಿಂಗಿತೆ?' ಎಂದು ಮಾರಯ್ಯನ ಆಂತರ್ಯದ ಒಳತೋಟಿಯನ್ನೇ ಪ್ರಶ್ನಿಸುತ್ತಾಳೆ.

ಶರಣರ 'ಕಾಯಕ' ತತ್ವಕ್ಕೆ ಜೀವಂತ ನಿದರ್ಶನವಾಗಿ ಬದುಕಿದವಳು ಲಕ್ಕಮ್ಮ. ಗುರುವಾದರೂ, ಲಿಂಗವಾದರೂ, ಜಂಗಮವಾದರೂ ಕಾಯಕದಿಂದಲೇ ಮುಕ್ತಿ. ಕಾಯಕದಲ್ಲಿ ಮೇಲು-ಕೀಳಿಲ್ಲ. ಸತ್ಯ ಶುದ್ಧಿಯಿಂದ ಕಾಯಕ ಮಾಡಿದರೆ, ಲಿಂಗಕ್ಕೆ ಅರ್ಪಿತ ಎನ್ನುವ ಮನೋಭಾವದ ಜೊತೆಗೆ ದುಡಿಮೆಗೆ ದೈವತ್ವದ ನೆಲೆ ಜೋಡಿಸಿ ಶೋಷಕ ಸಂಸ್ಕೃತಿಗೆ ಪ್ರತಿಯಾಗಿ ದುಡಿಮೆಯ ಸಂಸ್ಕೃತಿಯನ್ನು ಎತ್ತಿಹಿಡಿದಳು.[3]

'ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು, ಲಿಂಗ ಪೂಜೆಯಾದದ್ದು ಮರೆಯಬೇಕು, ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು,

ಕಾಯಕವೇ ಕೈಲಾಸವಾದ ಕಾರಣ ಅಮಳೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು'. ಮೇಲಿನ ನುಲಿಯಚಂದಯ್ಯನ ವಚನದಲ್ಲಿ ಕಾಯಕದ ಬಗೆಗಿನ ನಿಷ್ಠೆ, ಗುರು-ಲಿಂಗ-ಜಂಗಮರಿಗಿಂತ ಹೆಚ್ಚು ಎನ್ನುವ ಮನೋಭಾವ ಕಂಡುಬರುತ್ತದೆ. 'ಅಮಳೇಶ್ವರ ಲಿಂಗವಾಯಿತ್ತಾದಡು ಕಾಯಕದೊಳಗು'. ಎಂಬುದು ಬಹಳ ಸ್ವಾರಸ್ಯವಾಗಿಯೂ ಮುಖ್ಯವಾಗಿಯೂ ಇದೆ. ಸಾಕ್ಷಾತ್ ಶಿವನೇ ಆದರೂ ಕಾಯಕ ಮಾಡಬೇಕು ಎಂಬುದನ್ನು ತಿಳಿಸಿದರೆ, ಆಯ್ದಕ್ಕಿ ಲಕ್ಕಮ್ಮ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗುರು-ಜಂಗಮರೂ ಕೂಡ ಕಾಯಕದಿಂದಲೇ ಮುಕ್ತಿ ಪಡೆಯಬೇಕು ಎಂಬುದನ್ನು ಪ್ರತಿಪಾದಿಸುತ್ತಾಳೆ.

ಕೊಟ್ಟಣದ ಸೋಮಮ್ಮ ತನ್ನ ಒಂದು ವಚನದಲ್ಲಿ ಆಕೆ 'ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ'. ಎಂದು ತನ್ನ ವೃತ್ತಿ ಪ್ರತಿಮೆ ಬಳಸಿಕೊಂಡಿರುವುದನ್ನು ಕಾಣಬಹುದು. ಇಲ್ಲಿ ತನ್ನ ಕಾಯಕವನ್ನು ಬಳಸಿಕೊಂಡಿರುವುದು ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಹಾಗೂ ತನ್ನ ಆತ್ಮಘನತೆ ಹೆಚ್ಚಿಸಿಕೊಳ್ಳಲು ಬಳಸಿಕೊಂಡಿದ್ದಾಳೆ. ಕೇವಲ ಭತ್ತ ಕುಟ್ಟುವ ಕೆಲಸದಲ್ಲೂ ಏಕಾಗ್ರತೆ ಹಾಗೂ ಹದವರಿತು ಕುಟ್ಟಿದಾಗ ಮಾತ್ರ ಅಕ್ಕಿ ಪಡೆಯಲು ಸಾಧ್ಯ. ಹದಬಿಟ್ಟು ಕುಟ್ಟಿದರೆ, ಅಕ್ಕಿ ಬದಲಾಗಿ ನುಚ್ಚಾಗಿ ಮಾಡಿದ ಕೆಲಸ ವ್ಯರ್ಥವಾಗುವುದು. ಇದೇ ರೀತಿ ಕಾಯಕವನ್ನು ನಿಷ್ಠೆ ಮತ್ತು ನೇಮದಿಂದ ಮಾಡಿದರೆ ಸದ್ಗತಿ ಪಡೆಯಲು ಸಾಧ್ಯ. ಇಲ್ಲದಿದ್ದರೆ, ಭತ್ತ ಕುಟ್ಟಿ ನುಚ್ಚು ಪಡೆದಂತೆ ಕಾಯಕ ವ್ಯರ್ಥವಾಗಿ ಶಿವನಿಗೆ ಅರ್ಪಣೆಯಾಗುವುದಿಲ್ಲ ಎನ್ನುವಂತೆ ಕಾಯಕ ತತ್ವದ ಮಹತ್ವ ಪ್ರತಿಪಾದಿಸಿದ್ದಾಳೆ.

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

> 'ಹದಮಣ್ಣಲ್ಲದೆ ಮಡಕೆಯಾಗಲಾರದು.
> ವ್ರತ ಹೀನನ ಬೆರೆಯಲಾಗದು,
> ಬೆರೆದಡೆ ನರಕ ತಪ್ಪದು ನಾನೊಲ್ಲೆ ಬಲ್ಲೆನಾಗಿ,
> ಕುಂಬೇಶ್ವರಾ'.[4]

ಎಂಬ ವಚನದಲ್ಲಿ ಕೊಟ್ಟಣದ ಸೋಮಮ್ಮನ ರೀತಿಯಲ್ಲೇ ತನ್ನ ವೃತ್ತಿ ಪ್ರತಿಮೆಯನ್ನು ವಚನದಲ್ಲಿ ಬಳಸಿಕೊಂಡಿದ್ದಾಳೆ. ಇಲ್ಲಿ ಕಾಯಕದ ಜತೆಗೆ ವ್ರತದ ಮಹತ್ವ ಹಾಗೂ ವೃತ್ತಿ ಪ್ರಾವೀಣ್ಯತೆ ಹಾಗೂ ಕೌಶಲ್ಯದ ಮಹತ್ವವನ್ನು ಹೇಳಿದ್ದಾಳೆ. ಜತೆಗೆ ತನ್ನ ವಚನಗಳ ಅಂಕಿತವನ್ನೂ ಕೂಡ ವೃತ್ತಿಯ ಸಂಕೇತದ ಮೂಲಕ ಗುರುತಿಸಿಕೊಂಡು, 'ಕುಂಬೇಶ್ವರಾ' ಎಂಬ ಅಂಕಿತ ಇಟ್ಟುಕೊಂಡಿದ್ದಾಳೆ.

ಕೆಳವರ್ಗದಿಂದ ಬಂದ ವಚನಕಾರ್ತಿಯರಲ್ಲಿ ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀಯೂ ಒಬ್ಬಳು. ಈಕೆಯ ಹೆಸರಿನ ಹಿಂದೆ ಸೇರಿರುವ ವಿಶೇಷಣದಿಂದ ಬಾಚಿ ಕಾಯಕದ ಬಸವಯ್ಯಗಳ ಹೆಂಡತಿ ಎಂಬುದು ತಿಳಿದು ಬರುತ್ತದೆ. ಇವಳ ವಚನಗಳ ಅಂಕಿತ ಹಾಗೂ ವಚನಗಳಲ್ಲಿ ಬಳಸಿದ ಭಾಷೆ ಗಮನಿಸಿದರೆ, ಈಕೆ ಬಡಿಗ ವೃತ್ತಿಯವಳು ಎಂಬುದು ಸ್ಪಷ್ಟವಾಗುವುದು. ದೊರೆತಿರುವ ಈ ಕಾಳವ್ವೆಯ ಎರಡು ವಚನಗಳಲ್ಲಿ ಚಿಕ್ಕ ಹಾಗೂ ಚೊಕ್ಕ ನುಡಿಗಳು, ಸರಳ, ಸುಂದರವಾಗಿ ಕಾಯಕ, ವ್ರತ, ನಿಷ್ಠೆಯ ಬಗ್ಗೆ ಹೇಳುತ್ತವೆ. 'ಕಾಯಕ ತಪ್ಪಿದಡೆ ಸೈರಿಸಬಾರದು ವ್ರತ ತಪ್ಪಲೆಂತೂ ಸೈರಿಸಬಾರದು

> ಕರ್ಮಹರ ಕಾಳೇಶ್ವರಾ'.[5]

'ಕೈತಪ್ಪಿ ಕೆತ್ತಲು ಕಾಲಿಗೆ ಮೂಲ,
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ,
ವ್ರತಹೀನನ ನೆರೆಯಲು ನರಕಕ್ಕೆ ಮೂಲ, ಕರ್ಮಹರ ಕಾಳೇಶ್ವರಾ'.[6]

ಎನ್ನುವಲ್ಲಿ ನುಡಿ ವ್ರತಗಳಷ್ಟೇ ಕಾಯಕವನ್ನು ಕೂಡ ಎಚ್ಚರಿಕೆಯಿಂದ ಪಾಲಿಸಬೇಕು. ಇಲ್ಲದಿದ್ದರೆ ಬಾಚಿ ಕಾಲಿಗೆ ಬಿದ್ದು ಗಾಯ ಮಾಡುವಂತೆ ತೊಂದರೆಗೆ ಗುರಿಯಾಗಬೇಕಾಗುತ್ತದೆ ಎಂದು ಹೇಳುವುದರ ಜತೆಗೆ ಒಂದೊಂದು ತಪ್ಪಿನಿಂದ ದೊರಕುವ ಫಲಾಫಲಗಳನ್ನು ಸೂಚಿಸುತ್ತಾಳೆ.

ರೆಬ್ಬವ್ವೆ, ರೆಮ್ಮವ್ವೆ, ಕದಿರರೆಮ್ಮವ್ವೆ ಎಂಬ ಹೆಸರುಗಳಿಂದ ಗುರುತಿಸಿಕೊಂಡಿರುವ ರೆಮ್ಮವ್ವೆಯ ಕಾಲವನ್ನು ಕವಿಚರಿತೆಕಾರರು ಸುಮಾರು 1160 ಎಂದು ಗುರುತಿಸಿದ್ದಾರೆ. ಕವಿಚರಿತೆಕಾರರು ಮುಂದುವರಿದು ಈಕೆ ಕದಿರ ರೇಮಯ್ಯನ ಸತಿಯಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇಬ್ಬರಿಗೂ 'ಕದಿರೆ' ವಿಶೇಷಣ ಹತ್ತಲು ಕಾರಣಗಳು ಬೇರೆಯೇ ಆಗಿವೆ. ರೇಮಯ್ಯನಿಗೆ ಹತ್ತಿದ ವಿಶೇಷಣ ಅವನ ಸ್ಥಳಸೂಚಕವಾದರೆ, ರೆಮ್ಮವ್ವೆಯದು ಆಕೆಯ ವೃತ್ತಿ ಸೂಚಿಯಾಗಿ ಬಳಕೆಯಾಗಿದೆ.[7]

ರೆಮ್ಮವ್ವೆಯ ನಾಲ್ಕು ವಚನಗಳು ದೊರೆತಿದ್ದು, 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ' ಎಂಬ ಅಂಕಿತವನ್ನು ಇಟ್ಟುಕೊಂಡಿದ್ದಾಳೆ. ತನ್ನ ವಚನದಲ್ಲಿ ನೂಲು ತೆಗೆಯುವ ಉಪಕರಣಗಳಾದ ರಾಟೆ, ಕದಿರು ಹಾಗೂ ನೂಲುವ ಕಾಯಕವನ್ನೇ ಅನುಭಾವ ನಿರೂಪಣೆಗೆ ಪ್ರತೀಕವನ್ನಾಗಿಸಿಕೊಂಡಿದ್ದಾಳೆ. 'ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ ಸುತ್ತಿತ್ತು ನೂಲು ಕದಿರು ತುಂಬಿತ್ತು' ಎಂದು ಕಾಯಕದ ಪರಿಭಾಷೆಯಲ್ಲಿ ಲಿಂಗದೊಳಗಿನ ಐಕ್ಯಾನುಭವಪನ್ನು ವ್ಯಕ್ತಪಡಿಸಿದ್ದಾಳೆ.

ಇವರ ರೀತಿಯೇ ವಿವಿಧ ವೃತ್ತಿಗಳಿಂದ ಬಂದಂತಹ ಶರಣೆಯರು ತಮ್ಮ ತಮ್ಮ ಕಾಯಕದ ಮೂಲಕವೇ ತಮ್ಮನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೀಗೆ ಬಂದವರಲ್ಲಿ ಕನ್ನಡಿ ಕಾಯಕ ವೃತ್ತಿಯಿಂದಲೇ ಬಂದಂತಹ ಕನ್ನಡಿ ಕಾಯಕದ ರೇವಮ್ಮ ಕೂಡ ಒಬ್ಬಳು. ಈಕೆ ತನ್ನ ವೃತ್ತಿ ಪ್ರತಿಮೆಯನ್ನೇ ವಚನಗಳಲ್ಲಿ ಬಳಸಿದ್ದಾಳೆ. ಕನ್ನಡಿ ಕಾಯಕ ಎಂದರೆ, ಬಹುಶಃ ಕ್ಷೌರಿಕ ವೃತ್ತಿ ಇರಬಹುದು. ಈ ವೃತ್ತಿಗಳ ಮೂಲಕ ತಮ್ಮನ್ನು ತಾವು ಗುರುತಿಸಿಕೊಳ್ಳುವಿಕೆ ಒಂದು ರೀತಿಯ ಆತ್ಮಘನತೆಯ ವಿಚಾರವಾಗಿತ್ತು.

'ನಿರ್ಭೀತ ನಿಜಲಿಂಗ' ಎಂಬ ಅಂಕಿತದಿಂದ ವಚನ ರಚಿಸಿರುವ ಕಾಲಕಣ್ಣಿಯ ಕಾಮಮ್ಮ, ಆಯ್ದಕ್ಕಿ ಲಕ್ಕಮ್ಮನಂತೆ ಸ್ವತಂತ್ರ ಕಾಯಕ, ಸ್ವತಂತ್ರ ಮನೋಭಾವ ಮತ್ತು ನಿರ್ಭೀತ ಸ್ವಭಾವದಿಂದ ಗಮನ ಸೆಳೆಯುವ ವಚನಕಾರ್ತಿ. ಹೆಸರಿನೊಂದಿಗೆ ಸೇರಿಕೊಂಡಿರುವ ವಿಶೇಷಣವೂ ಹಗ್ಗವನ್ನು ಹೊಸೆದು ಮಾರುವ ಕಾಯಕ ಇವಳದಾಗಿರಬೇಕು.[8] ಹಾಗಾಗಿ ಅದೇ ವಿಶೇಷಣವನ್ನೇ ತನ್ನ ವಚನಗಳಲ್ಲಿ ಬಳಸಿಕೊಂಡಿದ್ದಾಳೆ. 'ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ, ಗುರುಲಿಂಗ ಜಂಗಮದ ಕಾಲ ಕಟ್ಟುವೆ'[9] ಎಂಬಲ್ಲಿ ಅತ್ತಿತ್ತ ಸಂಚರಿಸಿ ಅಪಾಯಕ್ಕೆ ಒಳಗಾಗದಂತೆ ದನಕರುಗಳನ್ನು ಹಗ್ಗದಿಂದ ಕಟ್ಟುವಂತೆ, ಭಕ್ತೆ ಕಾಮಮ್ಮ ಪ್ರಾಪಂಚಿಕ ಸುಖಕ್ಕೆ ಎಳಸುವ ಮನಸ್ಸನ್ನು ಗುರು-ಲಿಂಗ-ಜಂಗಮ ತತ್ವಗಳಲ್ಲಿ ಕಟ್ಟುವ ಕ್ರಿಯೆಯಲ್ಲಿ ಹೇಳುತ್ತಾಳೆ.

ಕುಂಬಾರ ವೃತ್ತಿಯಿಂದ ಬಂದ ಕೇತಲದೇವಿಯೂ ಕೂಡ ಗಂಡನ ಕಾಯಕಕ್ಕೆ ದುಗ್ಗಳೆಯಂತೆ ನೆರವಾದವಳೇ. ಈಕೆಯ ಅಂಕಿತ 'ಕುಂಭೇಶ್ವರ' ಅಥವಾ 'ಕುಂಭೇಶ್ವರಲಿಂಗ' ಎಂಬುದು. ಈಕೆಯೂ ಕೂಡ ತನ್ನ ಕಾಯಕದ ಪರಿಭಾಷೆಯನ್ನೇ ಬಳಸಿಕೊಂಡು ವಚನ ರಚಿಸುತ್ತಾಳೆ. 'ಹದ ಮಣ್ಣಲ್ಲದೆ ಮಡಕೆಯಾಗಲಾರದು, ವ್ರತಹೀನನ ಬೆರೆಯಲಾಗದು ಬೆರೆದಡೆ ನರಕ ತಪ್ಪದು ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ' ಎಂದು ಹೇಳುವಲ್ಲಿ ಹೇಗೆ ಹದವಾದ ಮಣ್ಣು ಮಾತ್ರ ಮಡಕೆ ಆಗಲಿಕ್ಕೆ ಸಾಧ್ಯವೋ ಹಾಗೆಯೇ ವ್ರತನಿಷ್ಠೆ ಇಲ್ಲದವರು ಮತ್ತು ಆತನನ್ನು ಬೆರೆಯುವವರು ನರಕ್ಕೆ ಹೋಗುತ್ತಾರೆ. ಇದು ನನಗೆ ತಿಳಿದಿದ್ದರಿಂದ ಅಂಥವರನ್ನು ಸೇರುವುದಿಲ್ಲ ಎಂದು ಹೇಳುತ್ತಾಳೆ.

ಹೀಗೆ ಹೇಳುವಾಗ ಅವಳ ವೃತ್ತಿ ಪರಿಭಾಷೆಯ ಮೂಲಕವೇ ತನ್ನ ಲಿಂಗನಿಷ್ಠೆಯನ್ನು ವ್ಯಕ್ತಪಡಿಸುತ್ತಾಳೆ. ಜತೆಗೆ ಈಕೆಯ ವಚನಗಳ ಅಂಕಿತ 'ಕುಂಭೇಶ್ವರಾ' ಎಂಬುದೇ ಇವಳ ವೃತ್ತಿಯನ್ನೇ ದೈವವನ್ನಾಗಿಸುವ ಕ್ರಿಯೆ ಕಂಡುಬರುತ್ತದೆ. ಬಹುಶಃ ಶರಣರ 'ಕಾಯಕವೇ ಕೈಲಾಸ' ಎಂಬ ತತ್ವದ ಅನುಕರಣೀಯರೆನಿಸುತ್ತದೆ. ಆದ್ದರಿಂದಾಗಿಯೇ ತನ್ನ ಇಷ್ಟದೈವವನ್ನು ತನ್ನ ವೃತ್ತಿಯಲ್ಲಿ ಕಾಣಲಿಕ್ಕೆ ಸಾಧ್ಯವಾಗಿರುತ್ತದೆ.

ತಮ್ಮ ತಮ್ಮ ಕಾಯಕಗಳ ಮೂಲಕ ವಚನಗಳನ್ನು ಶಿವಶರಣರಾಗಿ ತಮ್ಮದೇ ಆದಂತಹ ಒಂದು ಸಾಮಾಜಿಕ ಸ್ಥಾನಮಾನ ಪಡೆದಂತಹ ಶರಣೆಯರನ್ನು ಕಂಡಿದ್ದರೂ ಕೂಡ ಇನ್ನೂ ಕೆಲವು ವಚನಕಾರ್ತಿಯರು ಶರಣೆಯರಾದ ಮೇಲೆ ಕೆಲವೊಂದು ಕಾಯಕ ಕೈಗೊಂಡು ತಮ್ಮನ್ನು ತಾವು ಅದೇ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಹೀಗೆ ಗುರುತಿಸಿಕೊಂಡ ಶಿವಶರಣೆಯರಲ್ಲಿ ಪ್ರಮುಖವಾಗಿ ಧೂಪದ ಕಾಯಕ ಕೈಗೊಂಡಂತಹ ಗೊಗ್ಗವ್ವೆ. ಈಕೆ ಧೂಪದ ಗೊಗ್ಗವ್ವೆ ಎಂದೇ ಪ್ರಸಿದ್ಧಳಾಗಿದ್ದಾಳೆ.

> 'ಭಕ್ತರು ಜಂಗಮದಲ್ಲಿ ಕಟ್ಟಿ ಹೋರಲೇಕೆ?
> ಧೂಪದ ಹೊಗೆ ಎತ್ತ ಹೋದಡೂ ಸರಿ,
> ಇದು ಸತ್ಯವೆಂದೇ ನಾಸ್ತಿನಾಥಾ'[10]

ಎಂಬ ವಚನದಲ್ಲಿ ಲಿಂಗಧಾರಣೆಗಿಂತ ತಾನು ಕೈಗೊಂಡಂತಹ ಕಾಯಕ ನಿಷ್ಠೆಯೇ ಶ್ರೇಷ್ಠ ಎನ್ನುವಂತಹ ಮನೋಭಾವ ಬೆಳೆಸಿಕೊಂಡಿರುವಂತೆ ಕಾಣಿಸುತ್ತದೆ. ಈಕೆ ಧೂಪದ ಕಾಯಕದ ಮೂಲಕವೇ ತನ್ನನ್ನು ತಾನು ಗುರುತಿಸಿಕೊಳ್ಳುವುದರ ಜತೆಗೆ ಸಾಮಾಜಿಕವಾದ ಸ್ಥಾನವನ್ನೂ ಕೂಡ ಪಡೆದುಕೊಳ್ಳುತ್ತಾಳೆ. ಈಗಲೂ ಕೂಡ ಉತ್ತರ ಕರ್ನಾಟಕದಲ್ಲಿ ಹೆಣ್ಣು ಮಕ್ಕಳನ್ನು 'ಧೂಪದ ಗೊಗ್ಗವ್ವೆ' ಆಗಿದ್ದೀಯಾ ಎಂದು ರೇಗಿಸುವುದುಂಟು ಎಂದು ಡಾ. ಫ.ಗು.ಹಳಕಟ್ಟಿಯವರು ತಮ್ಮ ಶಿವಶರಣೆಯರ ಚರಿತೆಯಲ್ಲಿ ತಿಳಿಸುತ್ತಾರೆ.

ಹೀಗೆ ತನ್ನ ಕಾಯಕದಿಂದಲೇ ಮುಕ್ತಿಯನ್ನು ಹೊಂದಬೇಕು ಹಾಗೂ ಧೂಪದಿಂದಲೇ ಇತರರಿಗೂ ಲಿಂಗೈಕ್ಯ ಮಾಡಿಸಬಹುದು ಎಂಬ ಮನೋಭಾವವನ್ನು ಹೊಂದಿದ್ದಳು. ಹಾಗಾಗಿಯೇ

> 'ಮಾರುತನಲ್ಲಿ ಬೆರೆದ ಗಂಧದಂತೆ,
> ಸುರತದಲ್ಲಿ ಬೆರೆದ ಸುಖದಂತೆ,
> ಮಚ್ಚಿದಲ್ಲಿ ಕೊಡುವ ಉಚಿತದಂತೆ,
> ಭಕ್ತರಿಗದೇ ಹಾದಿ ಎಂದೇ ನಾಸ್ತಿನಾಥಾ'[11]

ಎಂದು ಖಚಿತವಾಗಿ ನುಡಿಯುತ್ತಾಳೆ.

ಪ್ರಸ್ತುತ ಉಪಲಬ್ದವಿರುವ 35 ವಚನಕಾರ್ತಿಯರಲ್ಲಿ ಕಾಳವ್ವೆ ಎಂಬ ಹೆಸರಿನ ನಾಲ್ವರು ವಚನಕಾರ್ತಿಯರಿದ್ದಾರೆ. ಇವರಲ್ಲಿ 'ಭೀಮೇಶ್ವರಾ' ಎಂಬ ಅಂಕಿತದಿಂದ ವಚನ ರಚಿಸಿದ ಕಾಳವ್ವೆಯೂ ಕೂಡ ಒಬ್ಬಳು. ಈಕೆ ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ. ಈಕೆಯ ಜೀವನದ ಬಗೆಗೆ ಏನೊಂದೂ ಸಂಗತಿ ತಿಳಿದಿಲ್ಲವಾದರೂ ಬಸವಾದಿ ಶರಣರ ಮಧ್ಯೆ ಕಾಯಕ ಜೀವಿಗಳಾಗಿ ಬದುಕಿನ ಸಾಮಾನ್ಯವರ್ಗಕ್ಕೆ ಸೇರಿದ ಶರಣರೆಂದು ತಿಳಿಯುತ್ತದೆ.[12]

ಕಾಯಕನಿಷ್ಠೆ ಅಭಿವ್ಯಕ್ತಿಯ ವಿಧಾನಗಳಿಂದ ಗಮನ ಸೆಳೆಯುವ ವಚನಕಾರ್ತಿ ಮೋಳಿಗೆ ಮಹಾದೇವಮ್ಮ. ಈಕೆ ಮೋಳಿಗೆಯ ಮಾರಯ್ಯನ ಪತ್ನಿ. ಈ ದಂಪತಿಗಳು ಶಿವಶರಣ ಸಮುದಾಯದಲ್ಲೇ ಅಪರೂಪದ ದಂಪತಿಗಳು. ಏಕೆಂದರೆ, ವೀರಶೈವ ಕಾವ್ಯಗಳ ಪ್ರಕಾರ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕದಲ್ಲಿ ತೊಡಗುತ್ತಾರೆ. ಈ ದಂಪತಿಗಳು ಕಾಶ್ಮೀರದ ರಾಜ ಮನೆತನಕ್ಕೆ ಸೇರಿದವರು ಎಂಬುದನ್ನು ಇದುವರೆಗಿನ ಯಾವುದೇ ಆಧಾರಗಳು ಪುಷ್ಟೀಕರಿಸದೇ ಇದ್ದರೂ ಕೂಡ ಮಾರಯ್ಯ-ಮಹಾದೇವಮ್ಮನ ಪೂರ್ವಾಶ್ರಮದ ವಿವರಗಳೆಲ್ಲಾ ಬೆಂಬಲಿಸುವಂತೆ ಮಾರಯ್ಯನವರು "ಸಕಲ ದೇಶಕೋಶವಾಸ ಭಂಡಾರ ಸವಾಲಕ್ಷ" ಮುಂತಾದ ಸಕಲ ಸಂಪತ್ತನ್ನು ತೊರೆದು ಬಂದರು ಎಂಬುದನ್ನು ಮಹಾದೇವಮ್ಮನ ವಚನವೊಂದು ಪುಷ್ಟೀಕರಿಸುತ್ತದೆ.[13]

ಮಾರಯ್ಯ ಬಸವಾದಿ ಶರಣರೆಲ್ಲರೂ ಲಿಂಗೈಕ್ಯರಾದ ನಂತರ ತಾನೂ ಲಿಂಗೈಕ್ಯನಾಗಬೇಕು ಎಂದು ನಿಶ್ಚಯಿಸಿದಾಗ ಮಹಾದೇವಮ್ಮ 'ಕಾಯವೇ ಕೈಲಾಸವೆಂದ ಮೇಲೆ ಮತ್ತೆ ಮತ್ತೆ ಕೈಲಾಸವುಂಟೆ?'[14] ಎಂದು ಹೇಳುವುದರ ಮೂಲಕ ಕಾಯಕವೇ ಕೈಲಾಸವೇ ಹೊರತು ಬೇರೊಂದಿಲ್ಲ ಎಂದು ಲಕ್ಕಮ್ಮನಂತೆ ತನ್ನ ಪತಿಗೆ ಉಪದೇಶಿಸುತ್ತಾಳೆ. ಇದರ ಜತೆಗೆ 'ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಹನೆಂಬುದು ಕೈ ಕೂಲಿ'[15] ಎಂದು ಹೇಳಿ ಮರ್ತ್ಯ ಬೇರೆಯಲ್ಲ, ಕೈಲಾಸ ಬೇರೆಯಲ್ಲ ಎಂಬ ವಿಚಾರವನ್ನು ತನ್ನ ಪತಿಗೆ ತಿಳಿ ಹೇಳುತ್ತಾಳೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆಯೂ ವಚನಕಾರ ವೀರಗೊಲ್ಲಾಳನ ಪತ್ನಿ ಎಂದು ಡಾ. ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.[16] ಈಕೆ ಕಾಟಕೂಟಯ್ಯಗಳ ಹೆಂಡತಿ ಎನ್ನುವುದನ್ನು ಬಿಟ್ಟರೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೆ, ಕಾಟಕೂಟ ಎಂಬುದು ವಚನಕಾರ ವೀರಗೊಲ್ಲಾಳನ ಮೂಲ ಹೆಸರೆಂದೂ ಅವನು ಕುರಿ ಕಾಯುವ ವೃತ್ತಿಯವನು ಎಂದು ತಿಳಿದು ಬರುವುದರಿಂದ ಈಕೆಯ ವೃತ್ತಿಯೂ ಅದೇ ಇರಬೇಕು ಎಂದು ತಿಳಿಯುತ್ತದೆ. ಆದರೆ, ಈಕೆಯ ಒಂದು ವಚನ ಮಾತ್ರ ಸಿಕ್ಕಿದ್ದು, ಅದರಲ್ಲಿ ಈಕೆಯ ಕಾಯಕವನ್ನು ಹೆಸರಿಸುವ ಯಾವ ಅಂಶವೂ ಕೂಡ ಕಂಡುಬರುವುದಿಲ್ಲ.

ಇಲ್ಲಿಯವರೆಗೂ ಸಿಕ್ಕ ವಚನಕಾರ್ತಿಯರಲ್ಲಿ ಬದುಕಿನ ವಿವರಗಳು ತಿಳಿಯದಿದ್ದರೂ ಕೂಡ ಅವರ ಕಾಯಕ ಹಾಗೂ ಇಷ್ಟದೈವದ ಅಂಕಿತಗಳನ್ನು ಕಾಣಬಹುದು. ಹೀಗೆ ಕಂಡ ವಚನಕಾರ್ತಿಯರು ಬಹುಶಃ ವಿವಿಧ ವೃತ್ತಿಗಳನ್ನು ಅನುಸರಿಸಿದವರು. ಆದರೆ, ಇಡೀ ಸಮಾಜವೇ ತಲ್ಲಣವಾಗುವಂತಹ ಪುರುಷ-ಸ್ತ್ರೀಯರಿಂದ ತಿರಸ್ಕೃತಪಡಲ್ಪಟ್ಟ ಸೂಳೆ

ವೃತ್ತಿಯನ್ನು ಕಾಯಕದ ಮಟ್ಟಕ್ಕೆ ಏರಿಸದಿದ್ದರೂ ವೇಶ್ಯಾವಾಟಿಕೆಯ ಬಗೆಗೆ ವಚನಕಾರ ಹಾಗೂ ವಚನಕಾರ್ತಿಯರಿಬ್ಬರಲ್ಲೂ ಕೂಡ ಕಾಯಕ ಎನ್ನುವ ಮನೋಧರ್ಮ ಇಲ್ಲದಿದ್ದರೂ ಕೂಡ ಆ ವೃತ್ತಿಯಿಂದ ಬಂದಂತಹ ಶರಣೆಯರನ್ನು ಶಿವಶರಣೆಯರಾಗಿಯೇ ನಡೆಸಿಕೊಳ್ಳಲಾಗಿದೆ.

ಇಂಥವರಲ್ಲಿ ಪ್ರಮುಖವಾಗಿ ಸೂಳೆ ಸಂಕವ್ವನ ಹೆಸರು ಕೇಳಿಬರುತ್ತದೆ. ಈಕೆಯ ಬದುಕಿನ ವಿವರ ಏನೂ ದೊರೆತಿಲ್ಲವಾದರೂ ಇವಳ ಹೆಸರಿಗೆ ಹತ್ತಿರುವ ವಿಶೇಷಣವನ್ನು ಗಮನಿಸಿದರೆ, ಮೊದಲು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದಳೆಂದು ನಂತರ ಶರಣರ ಪ್ರಭಾವಕ್ಕೆ ಒಳಗಾಗಿ ಸಾತ್ವಿಕ ಬದುಕಿನತ್ತ ಸಾಗಿಬಂದಿರಬೇಕೆಂದು ತಿಳಿಯುತ್ತದೆ. ಈಕೆಯ 'ನಿರ್ಲಜ್ಜೇಶ್ವರ' ಎಂಬ ಅಂಕಿತವು ವೃತ್ತಿ ಸಂಬಂಧಿತ ವಿಶಿಷ್ಟ ಮನೋಧರ್ಮವನ್ನು ಸೂಚಿಸುತ್ತದೆ.

ಲಜ್ಜೆ, ನಾಚಿಕೆಯ ನೆಪದಲ್ಲಿ ಅಭಿವ್ಯಕ್ತಿ ಕಳೆದುಕೊಂಡಿದ್ದ ಸ್ತ್ರೀವರ್ಗದಲ್ಲಿ ಮಾಡಿದ ವೈಚಾರಿಕ ಎಚ್ಚರಿಕೆಗೆ ಮಾದರಿ 'ಸಂಕವ್ವೆ'. ವೃತ್ತಿ ಸಂಬಂಧ ಅವಮಾನ, ಮುಜುಗರಗಳನ್ನು ಮುರಿದು ತನ್ನ ಸ್ವಂತಿಕೆಯ ಆಲೋಚನೆಗಳನ್ನು ರೂಢಿಸಿಕೊಂಡಿದ್ದಕ್ಕೆ ಈಕೆಯ ವಚನ ಉದಾಹರಣೆಯಾಗಿದೆ. ವೃತ್ತಿಯ ಅನುಭವದ ಮೂಲಕವೇ ಈಕೆ ಧರ್ಮಶ್ರದ್ಧೆ, ಆಚಾರ, ಸಂಹಿತೆಯನ್ನು ಅರ್ಥೈಸಿರುವುದು ವಿಶೇಷವಾಗಿದೆ.

'ಗಂಗೇಶ್ವರ' ಎಂಬ ಅಂಕಿತದಿಂದ ವಚನ ರಚಿಸಿರುವ ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ, ಸೂಳೆ ಸಂಕವ್ವೆಯಂತೆ ವೇಶ್ಯಾ ವೃತ್ತಿಯಿಂದ ಶರಣ ಜೀವನ ಸ್ವೀಕರಿಸಿರಬೇಕು ಎಂದು ತಿಳಿಯುತ್ತದೆ ಎಂದು ಡಾ. ವೀರಣ್ಣ ರಾಜೂರರವರು ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಈಕೆಯ ಒಂದು ವಚನ ಮಾತ್ರ ದೊರೆತಿದ್ದು, ಇದರಲ್ಲಿ

'ಆವ ಕಾಯಕವ ಮಾಡಿದಡೂ ಒಂದೇ ಕಾಯಕವಯ್ಯಾ,
ಆವ ವ್ರತವಾದಡೂ ಒಂದೇ ವ್ರತವಯ್ಯ,
ಆಯ ತಪ್ಪಿದಡೆ ಸಾವಿಲ್ಲ, ವ್ರತ ತಪ್ಪಿದಡೆ ಕೂಡಲಿಲ್ಲ,
ಕಾಕಪಿಕದಂತೆ ಕೂಡಲು ನಾಯಕ ನರಕ ಗಂಗೇಶ್ವರಲಿಂಗದಲ್ಲಿ'.[17]

ಸತ್ಯ, ಶುದ್ಧ, ಕಾಯಕ, ಶ್ರದ್ಧೆಯನ್ನು ಆಚಾರ ಶುದ್ದಿಯನ್ನು ಎತ್ತಿಹಿಡಿದಿರುವ ಈ ವಚನವೂ ಗಂಗಮ್ಮನ ಪ್ರಾಮಾಣಿಕ ವ್ಯಕ್ತಿತ್ವವನ್ನು ಪ್ರಕಟಿಸಿದೆ. ಭಾವಶುದ್ಧಿಯಿಂದ ಮಾಡುವ ಎಲ್ಲಾ ವೃತ್ತಿಗಳು ಪವಿತ್ರವಾದ 'ಕಾಯಕ'ಗಳು. ಕಾಯಕದಲ್ಲಿ ಮೇಲಿಲ್ಲ-ಕೀಳಿಲ್ಲ ಎಂದು ತಿಳಿಸುತ್ತಾಳೆ. ಜತೆಗೆ ವ್ರತಹೀನರ ಸ್ನೇಹ 'ಕಾಕಪಿಕ'ದ ಮೈತ್ರಿಯಂತೆ ಅಪವಿತ್ರ ಎಂದು ಅಂಥ ದುರಾಚಾರಕ್ಕೆ 'ನಾಯಕ ನರಕ'ವೆಂದು ಎಚ್ಚರಿಸುತ್ತಾಳೆ. ಜತೆಗೆ ದೇವನೊಬ್ಬ ನಾಮ ಹಲವು ಎನ್ನುವಂತೆ ಯಾವ ಕಾಯಕವಾದರೂ ಅದರಿಂದ ಸಿಗುವ ತೃಪ್ತಿ ಮಾತ್ರ ಒಂದೇ ಎನ್ನುವ ತೀರ್ಮಾನಕ್ಕೆ ಬಂದಂತೆ ಕಾಣಿಸುತ್ತದೆ.

ಅಕ್ಕಮ್ಮ ತನ್ನ ವಚನವೊಂದರಲ್ಲಿ "ಇಂದಿಂಗೆ ನಾಳಿಂಗೆ ಎಂಬ ಸಂದೇಹಮಂ ಬಿಟ್ಟು ಮುಂದಣ ಕಾಯಕ ಅಂದಂದಿಂಗೆ ಉಂಟು ಎಂಬುದನ್ನು ಅರಿತು ಬಂದುದ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ ಸದಾನಂದದಲ್ಲಿಪ್ಪ ಭಕ್ತಂಗಳ ಮಂಗಳಮಯ ಕೈಲಾಸವೆಂದು" ತಿಳಿಸುತ್ತಾಳೆ. ಅಂದಂದಿನ ಕಾಯಕವನ್ನು ಅಂದೇ ಮಾಡಿ ಜೀವಿಸಬೇಕು

ಎಂಬ ಶರಣರ ಕಾಯಕ ತತ್ವಕ್ಕೆ ಇವರೆಲ್ಲರೂ ಬದ್ಧರಾಗಿ ನಡೆದಂತೆ ಕಾಣಿಸುತ್ತದೆ.

ಶಿವಶರಣೆಯರಾದರೂ ಶರಣತ್ವದ ಜತೆಗೆ ತಮ್ಮ ತಮ್ಮ ಕಾಯಕದಿಂದಲೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗೆ ಗುರುತಿಸಿಕೊಂಡಂತಹ ಶರಣೆಯರಲ್ಲಿ ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಹಾಗೂ ಸೂಳೆಸಂಕವ್ವ ಇವರು ಎದುರಿಸಿದ ಕಾಯಕ ಸಮಸ್ಯೆ ದೊಡ್ಡದೆನಿಸುತ್ತದೆ. 'ಕಾಯಕವೇ ಕೈಲಾಸ'ವೆಂಬ ಶರಣ ನುಡಿಯಿಂದ ಪ್ರಭಾವಿತರಾದರೂ ಕೂಡ ತಮ್ಮ ಕಾಯಕಕ್ಕೆ ಅಂಟಿದ ಕಳಂಕದಿಂದಾಗಿ ಅದೇ ಕಾಯಕ ಮುಂದುವರೆಸಿದರೆ ವ್ರತಹೀನರಾಗುತ್ತಾರೆ. ಆ ಕಾಯಕವನ್ನು ಬಿಟ್ಟ ನಂತರವೂ ಕೂಡ ಆ ಹೆಸರಿನಿಂದಲೇ ತಮ್ಮನ್ನು ಗುರುತಿಸಿಕೊಳ್ಳುವಿಕೆ ಅವರುಗಳಿಗೆ ಆತ್ಮಘನತೆಯ ವಿಚಾರವಾಗಿದ್ದಂತೆ ಕಾಣಿಸುತ್ತದೆ.

ತಮ್ಮ ಇತರ ವೃತ್ತಿಗಳಿಂದ ಗುರುತಿಸಿಕೊಂಡ ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಮ್ಮ, ಧೂಪದ ಗೊಗ್ಗವ್ವೆ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ಕೊಟ್ಟಣದ ಸೋಮಮ್ಮ, ಕಾಲಕಣ್ಣಿಯ ಕಾಮಮ್ಮ, ಕನ್ನಡಿ ಕಾಯಕದ ರೇವಮ್ಮ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಕದಿರ ಕಾಯಕದ ಕಾಳವ್ವೆ, ಕದಿರ ರೆಮ್ಮವ್ವೆ, ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ದುಗ್ಗಳೆ -ಇವರೆಲ್ಲರೂ ಕೂಡ ಕಾಯಕ ನಿಷ್ಠೆಗೆ ಬದ್ಧರಾದವರೇ. ತಮ್ಮ ಮನಸ್ಸಿನಲ್ಲಿ ಇದ್ದಂತಹ ವೃತ್ತಿಯ ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳಲು ವಚನ ಚಳುವಳಿಯಲ್ಲಿ ದಲಿತ ವಚನಕಾರರ ಜತೆಗೆ ತಮ್ಮನ್ನು ತಾವು ವೃತ್ತಿಗಳ ಮೂಲಕ ಗುರುತಿಸಿಕೊಂಡರು. ಈ ರೀತಿ ಗುರುತಿಸಿಕೊಳ್ಳುವಿಕೆಯಿಂದ ತಾವು ಆಯ್ದುಕೊಂಡ ಬದುಕಿನ ಹಿನ್ನೆಲೆಯಲ್ಲಿ ಸಾಮಾಜಿಕ ಸ್ಥಾನಮಾನವನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು ಎಂದು ಹೇಳಬಹುದು.

ಶರಣೆಯರು ತಮ್ಮ ವಚನಗಳ ಅಂಕಿತವನ್ನು ತಮ್ಮ ವೃತ್ತಿಯ ಸಾಂಕೇತಿಕವಾಗಿ ಗುರುತಿಸಿಕೊಂಡಿರುವುದನ್ನು ಕೂಡ ಅವರವರ ಅನುಭವದ ನೆಲೆಯನ್ನು ಹಾಗೂ ಕಾಯಕವನ್ನೇ ದೈವವನ್ನಾಗಿಸಿಕೊಳ್ಳುವ, ಮಾಡುವ ಕಾಯಕದಲ್ಲಿಯೇ ಶ್ರೇಷ್ಠತೆಯನ್ನು ಕಾಣುವ ಜತೆಗೆ ಆ ಕಾಯಕವನ್ನು ಜಾತಿಯಾಚೆಗೆ ವಿಸ್ತರಿಸಿಕೊಳ್ಳುವ ಮನೋಭಾವ ಕಂಡುಬರುತ್ತದೆ. ಈ ರೀತಿ ತಮ್ಮ ಕಾಯಕದಿಂದ ಗುರುತಿಸಿಕೊಳ್ಳುವಿಕೆ ಬದುಕಿನ ಆಯ್ಕೆಯ ಪ್ರಶ್ನೆಯಾಗಿರುತ್ತದೆ. ಇದರಿಂದಾಗಿಯೇ ತಮ್ಮ ವಚನಗಳಲ್ಲಿ ವೃತ್ತಿ ಪ್ರತಿಮೆ ಬಳಸಿಕೊಂಡು ಅನುಭವದ ಮೂಸೆಯನ್ನು ವಿಸ್ತರಿಸಿಕೊಂಡಿದ್ದಾರೆ.

ಅಡಿ ಟಿಪ್ಪಣಿ

1. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–56
2. ಅದೇ, ಪುಟ–42–43
3. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–104
4. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–245, ವಚನ–772(1)

5. ಅದೇ, ಪುಟ–323, ವಚನ–1090(1)
6. ಅದೇ, ಪುಟ–323, ವಚನ–1091(2)
7. ಅದೇ, ಪುಟ–46
8. ಅದೇ, ಪುಟ–48
9. ಅದೇ, ಪುಟ–235, ವಚನ–750(1)
10. ಅದೇ, ಪುಟ–246, ವಚನ–777(4)
11. ಅದೇ, ಪುಟ–246, ವಚನ–778(5)
12. ಅದೇ, ಪುಟ–68
13. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ: ಡಾ.ಎಚ್.ಎಸ್.ಶ್ರೀಮತಿ, ಮುದ್ರಣ–2006, ಪುಟ–125
14. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–64
15. ಅದೇ, ಪುಟ–355, ವಚನ–1160(57)
16. ವಚನ ಶೋಧ–2, ಡಾ. ಎಂ.ಚಿದಾನಂದಮೂರ್ತಿ, ಮುದ್ರಣ: 1998, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
17. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–415, ವಚನ–1349(1)

ಅಧ್ಯಾಯ–3

ವಚನಕಾರ್ತಿಯರು ಮತ್ತು ಲಿಂಗ ರಾಜಕಾರಣ

ಹೆಣ್ಣನ್ನು ಅನಾದಿ ಕಾಲದಿಂದಲೂ ಕೂಡ ರಕ್ಕಸಿ, ದೇವತೆ, ಮಾಯೆ ಎನ್ನುವ ದೃಷ್ಟಿಕೋನದಿಂದಲೇ ನೋಡಲಾಗುತ್ತಿದ್ದು, ವಚನಕಾರರ ಕಾಲಕ್ಕೇನೂ ಇದು ಬದಲಾದಂತೆ ಕಾಣುವುದಿಲ್ಲ. ವಚನಕಾರರು ಹೆಣ್ಣನ್ನು ಮಾಯೆ, ರಕ್ಕಸಿ ಎಂಬ ದೃಷ್ಟಿಕೋನದಿಂದ ಬದಲಿಸಿ ನೋಡುವ ಪ್ರಯತ್ನ ಮಾಡಿದರೂ ಕೂಡ ಸಾಂಪ್ರದಾಯಿಕ ಮನೋಭಾವವನ್ನು ಅಳಿಸಿ ಹಾಕಲಿಕ್ಕೆ ಸಾಧ್ಯವಿಲ್ಲವೆಂದೆನಿಸುತ್ತದೆ. ಇದರ ಜತೆಗೆ ಹೆಣ್ಣನ್ನು 'ದೇವತೆ' ಎನ್ನುವ ದೃಷ್ಟಿಕೋನವನ್ನು ಬದಲಿಸದೇ ಅದೇ ನಿಟ್ಟಿನಲ್ಲಿ ನೋಡುವ ಮನೋಭಾವ ಬೆಳೆಸಿಕೊಂಡರು. ಯಾವುದೇ ವ್ಯಕ್ತಿ ಕೇವಲ ಒಳ್ಳೆಯಗುಣ ಹಾಗೂ ಕೆಟ್ಟಗುಣಗಳ ಮೂಟೆಯಲ್ಲ; ಬದಲಿಗೆ ಎರಡೂ ಗುಣಗಳ ಸಮ್ಮಿಶ್ರತೆ.

ಹಾಗೆ ನೋಡುವಾಗ ವಚನಕಾರರು ಹೆಣ್ಣನ್ನು ರಕ್ಕಿಸಿ, ಮಾಯೆಯಿಂದ ಹೊರತುಪಡಿಸಿ ಸಿದ್ಧ ಮಾದರಿಯಾದ ದೇವತೆಯಲ್ಲಿಗೆ ತಂದು ನಿಲ್ಲಿಸುತ್ತಾರೆ. ಉದಾಹರಣೆಗೆ 'ಹೆಣ್ಣು ಮಾಯೆಯಲ್ಲ. ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಚೆನ್ನಮಲ್ಲಿಕಾರ್ಜುನ'[1] ಎಂಬ ಸಿದ್ಧರಾಮಯ್ಯನ ವಚನದಲ್ಲಿ ಹೆಣ್ಣು, ಮಾಯೆ–ರಕ್ಕಸಿಯ ಹಂತವನ್ನು ಮೀರಿ ದೇವತೆಯಾಗಿ ಒಂದು ಕಡೆ ನೆಲೆನಿಂತು ಬಿಡುತ್ತಾಳೆ. ಈ ರೀತಿ ಹೆಣ್ಣನ್ನು ಹೆಣ್ಣಾಗಿ ನೋಡುವ ಹಾಗೂ ಗುರುತಿಸುವ ಮನೋಭಾವ ಹೊರತುಪಡಿಸಿ ತನ್ನದಲ್ಲದ, ಆರೋಪಿತ ಗುಣಗಳನ್ನು-ಆಕೆಯ ಮೇಲೆ ಬಲವಂತವಾಗಿ ಹೇರುವ ಹಾಗೂ ಅದನ್ನೇ ಆಕೆ ಒಪ್ಪಿ ನಡೆಯುವಂತೆ ನಿರ್ಮಿಸಿರುವ ಪ್ರಜ್ಞಾಪೂರ್ವಕ ನಿಯಮಗಳಂತೆ ಕಂಡುಬರುತ್ತವೆ.

ಇದು ಕೇವಲ "ಯತ್ರನಾರ್ಯಸ್ತುಪೂಜ್ಯಂತೆರಮಂತೆ ತತ್ರದೇವತಾರ್ಹ"–ಎಂಬ ಶ್ಲೋಕವನ್ನೇ ಪುನರ್ ಉಚ್ಚರಿಸಿದಂತೆ ಕಾಣುತ್ತದೆ. ಹೆಣ್ಣಿನ ಒಳಮನಸ್ಸಿನ ಭಾವನೆಗಳನ್ನು ಅದುಮುವ ಜತೆಗೆ ಆಕೆಯನ್ನು ಒಂದು ಮಾದರಿ ಪುತ್ಥಳಿಯಾಗಿ ಪುರುಷ ಸಮಾಜದ ಮುಂದೆ ನಿಲ್ಲಿಸುವ ಪ್ರಯತ್ನ ಮಾಡಲಾಗಿದೆ. ಈ ವಿಚಾರಗಳನ್ನು ಸ್ತ್ರೀಯರ ಮೇಲೆ ಬಲವಂತವಾಗಿ ಹೇರದೇ ಇದ್ದರೂ ಪ್ರೀತಿ ಪೂರ್ವಕವಾಗಿ ಸ್ತ್ರೀಯರೇ ಒಪ್ಪಿಕೊಳ್ಳುವಂತೆ ಮಾಡಲಾಗಿದೆ.

ಇಲ್ಲಿ ಸ್ತ್ರೀತನದ ಶ್ರೇಷ್ಠತೆಯನ್ನು ಗುರುತಿಸುವುದರ ಬದಲು ಆಕೆಯನ್ನು ಅವಳ ವ್ಯಕ್ತಿತ್ವದಿಂದ ಬೇರ್ಪಡಿಸಿ ನೋಡುವ ದೃಷ್ಟಿಕೋನ ಕಂಡುಬರುತ್ತದೆ. ಬಹುಶಃ ಹೆಣ್ಣನ್ನು ಮಾಯೆ, ರಕ್ಕಸಿ, ದೇವತೆ ದೃಷ್ಟಿಕೋನದಲ್ಲಿ ಕಂಡಂತೆ ಸ್ತ್ರೀಗೆ ಪುರುಷ ಮಾಯೆಯಾಗಿ ಕಾಡಲಿಲ್ಲ. ಅಂತೆ ಪುರುಷನಿಗೆ ಪುರುಷ ಮಾಯೆಯಾಗಿ ಕಾಡಲಿಲ್ಲ. ಬಹುಶಃ ಅನಾದಿಕಾಲದಿಂದಲೂ ಬಂದ ಪುರುಷ ನಿರ್ಮಿತ ಸಮಾಜದ ಮೌಲ್ಯಗಳು ಶಿವಶರಣ ಕಾಲಕ್ಕೂ ಬದಲಾಗದೇ ಅದೇ ಮೌಲ್ಯಗಳನ್ನು ಉಳಿಸಿ ಬೆಳೆಸುವ ವಿಚಾರಗಳಾಗಿ ಕಾಣಿಸುತ್ತದೆ.

ಆದರೆ, ಆದ್ಯ ವಚನಕಾರನಾದ ಜೇಡರ ದಾಸಿಮಯ್ಯ ಹೆಣ್ಣಿನ ಬಗೆಗೆ ಉನ್ನತಿಯ ಮಾತುಗಳನ್ನಾಡುತ್ತಾನೆ.

ಮೊಲೆಮೂಡಿ ಬಂದರೆ ಹೆಣ್ಣೆಂಬರು

ಗಡ್ಡಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ
ರಾಮನಾಥ.[2]

ಆತ್ಮದಲ್ಲಿ ಗಂಡು-ಹೆಣ್ಣುಗಳೆಂಬ ಭೇದ ಹೇಗಿಲ್ಲವೋ ಹಾಗೆಯೇ ಆತ್ಮ ಜ್ಞಾನಕ್ಕೂ ಭೇದವಿಲ್ಲ. ಹೆಣ್ಣು-ಗಂಡು ಎಂಬ ವ್ಯತ್ಯಾಸ ಕೇವಲ ದೈಹಿಕ ವ್ಯತ್ಯಾಸವೇ ಹೊರತು ಮಾನಸಿಕ ವ್ಯತ್ಯಾಸವಲ್ಲ. ಬಹುಶಃ ಸ್ತ್ರೀವಾದದ ಬಗೆಗೆ ಮಾತಾಡಿದ; ಸ್ತ್ರೀಪರ ದೃಷ್ಟಿಕೋನವನ್ನು ಇಟ್ಟುಕೊಂಡಂತಹ ಮೊದಲ ವಚನಕಾರ ಹಾಗೂ ಎಲ್ಲೋ ಒಂದು ಕಡೆ ವಚನಕಾರ್ತಿಯರ ಜತೆಗೆ ಇಡೀ ಶಿವಶರಣೆಯರಿಗೆ ತಮ್ಮ ನೆಲೆಯನ್ನು ತಾವು ಗುರುತಿಸಿಕೊಳ್ಳಲಿಕ್ಕೆ ಈತ ಮಾರ್ಗದರ್ಶಕನಂತೆ ಕಾಣಿಸುತ್ತಾನೆ. ಆದ್ದರಿಂದಾಗಿಯೇ ಲಿಂಗದಾಚೆಗಿನ ಅನುಭವವನ್ನು ತನ್ನ ವಚನವೊಂದರಲ್ಲಿ ನೀಡಲಿಕ್ಕೆ ಸಾಧ್ಯವಾಗಿದೆ.

ಜೇಡರದಾಸಿಮಯ್ಯನ ರೀತಿಯೇ ಧೂಪದ ಗೊಗ್ಗವ್ವೆ ಪ್ರಶ್ನೆಯನ್ನು ಎತ್ತುತ್ತಾಳೆ.

ಮೊಲೆಮೂಡಿ ಬಂದರೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥ.[3]

ಮೊಲೆ ಮೂಡಿಬಂದರೆ ಹೆಣ್ಣು, ಮೀಸೆಕಾಸೆ ಬಂದರೆ ಗಂಡೂ ಎಂದೂ ನಿರ್ಧರಿಸುವ ಈ ಸಮಾಜ, ಹೆಣ್ಣು-ಗಂಡಿಗೆ ಆಗುವ ಅನುಭವದ ಜ್ಞಾನವನ್ನು ಯಾವ ಲಿಂಗಕ್ಕೆ ಸೇರಿಸಬೇಕು ಎಂದು ಪ್ರಶ್ನಿಸುತ್ತಾಳೆ. ಕೇವಲ ದೈಹಿಕ ಲಕ್ಷಣವಷ್ಟೇ ಒಬ್ಬ ಮನುಷ್ಯನನ್ನು ಹೆಣ್ಣು-ಗಂಡು ಎಂದು ನಿರ್ಧರಿಸಲಾಗದು. ಹೆಣ್ಣಿಗೂ ಕೂಡ ಗಂಡಿನ ಮನಸ್ಥಿತಿ ಹಾಗೂ ಗಂಡಿಗೂ ಕೂಡ ಹೆಣ್ಣಿನ ಮನಸ್ಸು ಇರುವ ಎಷ್ಟೋ ವ್ಯಕ್ತಿಗಳನ್ನು ಕಾಣಬಹುದು.

ಗಂಡು-ಹೆಣ್ಣು ಅನ್ನುವಂತಹುದು ಕೇವಲ ಒಂದು ಶಾರೀರಿಕ ವ್ಯತ್ಯಾಸದಂತೆ ಗೊಗ್ಗವ್ವೆ ಗುರುತಿಸಿದ್ದಾಳೆ. ಗೊಗ್ಗವ್ವೆ ಇಲ್ಲಿ ಸ್ತ್ರೀಯಾಗಿ, ಶರಣೆಯಾಗಿ, ಸ್ತ್ರೀಪರ ಚಿಂತಕಿಯಾಗಿ ಕಾಣಿಸಿಕೊಳ್ಳುತ್ತಾಳೆ. ಈ ರೀತಿ ಕಾಣಿಸಿಕೊಳ್ಳುವಿಕೆಯಲ್ಲೂ ಆಕೆಗೆ ದಾಸಿಮಯ್ಯನಂತಹ ಶರಣನೊಬ್ಬ ಮಾರ್ಗದರ್ಶಕನಾಗಿ ಗುರುವಾಗಿ ನಿಂತಿರುವುದು ಕಾಣಿಸುತ್ತದೆ. ಇಲ್ಲಿ ಹೆಣ್ಣು ತನ್ನ ಸಮಸ್ಯೆಗಳನ್ನು ತಾನು ಅರಿತುಕೊಳ್ಳದಂತಹ ಸ್ಥಿತಿಗೆ ತಲುಪಿದ್ದರೂ ಕೂಡ ತನ್ನ ಅಸ್ತಿತ್ವವನ್ನು ಸ್ವಲ್ಪಮಟ್ಟಿಗಾದರೂ ನಿಜನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸಿದ್ದಾರೆ.

ಲಿಂಗದಾಚೆಗಿನ ಕಲ್ಪನೆಯನ್ನು ವಿಸ್ತರಿಸುವಂತಹ ಗೊಗ್ಗವ್ವೆಯ ಚಿಂತನೆಗೆ ಬೆನ್ನೆಲುಬಾಗಿ ನಿಂತ ದಾಸಿಮಯ್ಯನ ಚಿಂತನೆ ಕೇವಲ ಚಿಂತನೆಯಾಗಿದ್ದಂತೆ ಕಾಣಿಸುತ್ತದೆ. ಇದಕ್ಕೆ ಕಾರಣವೆಂದರೆ, ಡಾ. ಫ.ಗು.ಹಳಕಟ್ಟಿಯವರು ತಮ್ಮ ಶಿವಶರಣೆಯರ ಚರಿತ್ರೆಗಳು ಕೃತಿಯಲ್ಲಿ ದುಗ್ಗಳೆಯ ವ್ಯಕ್ತಿತ್ವನ್ನು ಚಿತ್ರಿಸುವ ಸಂದರ್ಭದಲ್ಲಿ ಒಂದು ದಿನ ಕೈಲಾಸ ಪರ್ವತದಲ್ಲಿ ಇಬ್ಬರು ಗಣಾಧೀಶ್ವರರು ವೈರಾಗ್ಯ ಅಧಿಕವೋ ಸಂಸಾರ ಅಧಿಕವೋ ಎಂಬುದರ ವಿಷಯವಾಗಿ ವಾಗ್ವಾದ ಮಾಡುತ್ತಿರುವಾಗ ಅದರಲ್ಲಿ ಒಬ್ಬನು ಸಂಸಾರ ಅಧಿಕವೆಂತಲೂ ಇನ್ನೊಬ್ಬನು ವಿರಕ್ತಿ ಅಧಿಕವೆಂತಲೂ ವಾದಿಸುತ್ತಾನೆ.

ಆದರೆ, ಇವುಗಳಲ್ಲಿ ಯಾವುದು ಅಧಿಕವೆಂಬುದು ಅವರಿಗೆ ತಿಳಿಯದೇ ಹೋಗಲು ಅವರು ಶಿವನಲ್ಲಿಗೆ ಬಂದು ಈ ಎರಡರಲ್ಲಿ ಯಾವುದು ಅಧಿಕವೆಂದು ಕೇಳುತ್ತಾರೆ. ಅದಕ್ಕೆ ಶಿವನು ಭೂಲೋಕದಲ್ಲಿ ತನ್ನ ಭಕ್ತರಾದ ದಾಸ ದುಗ್ಗಳೆಯರೆಂಬ ಸತಿಪತಿಗಳಿದ್ದಾರೆ. ಅವರನ್ನು ನೀವು ಈ ವಿಷಯದಲ್ಲಿ ಕಾಣಿರಿ ಎಂದು ತಿಳಿಸುತ್ತಾನೆ. ಆಗ ಆ ಇಬ್ಬರು ಗಣಾಧೀಶರು ಭೂ ಲೋಕಕ್ಕೆ ವೇಶ ಮರೆಸಿ ಬಂದು ಮೊದಲು ದಾಸಿಮಯ್ಯನ ಮನೆಗೆ ಬರುತ್ತಾರೆ. ಆಗ ದಾಸಿಮಯ್ಯನ ಮನೆಯಲ್ಲಿ ಉಭಯ ದಂಪತಿಗಳು ತಮ್ಮ ಸಂಸಾರದ ನಿತ್ಯದ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಹೀಗೆ ಕಾಯಕದಲ್ಲಿ ನಿರತರಾಗಿದ್ದರೂ ಕೂಡ ಅವರ ಮನೆಯಲ್ಲಿ ಶಿವಾನುಭವದ ದಿವ್ಯ ತೇಜಸ್ಸು ಸ್ಫುರಿಸುತಿತ್ತು.

ದುಗ್ಗಳೆಯೂ ಧಾನ್ಯವನ್ನು ಕುಟ್ಟುವುದರಲ್ಲಿ ತೊಡಗಿದ್ದಳು ಆಗ ದಾಸಿಮಯ್ಯ ಕೆಲವೊಂದು ಕಾರ್ಯಕ್ಕೋಸ್ಕರ ಆಕೆಯನ್ನು ಒಳಗೆ ಕರೆದನು. ಆಗ ಅವಳು ಎತ್ತಿದ ಒನಕೆಯೂ ಕೆಳಗಿಳಿಸದೇ ಅದನ್ನು ಅಲ್ಲಿಯೇ ಬಿಟ್ಟು ಅವನಿದ್ದಡೆಗೆ ಬಂದಳು. ನೇಯ್ಗೆಯ ಕೆಲಸದಲ್ಲಿ ಸ್ತ್ರೀಯರು ಉಂಕಿ, ಹೂಡಿ ಮಗ್ಗಕ್ಕೆ ಬೇಕಾಗುವ ಎಳೆಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಇದು ಸಾಮಾನ್ಯವಾಗಿ ಸ್ತ್ರೀಯರು ಮಾಡತಕ್ಕ ಕೆಲಸವಾಗಿದ್ದು, ದಾಸಿಮಯ್ಯ ಈ ಕೆಲಸವನ್ನು ತನ್ನ ಹೆಂಡತಿಗೋಸ್ಕರ ತಾನೇ ಕೈಗೊಂಡಿದ್ದನು.

ಒಂದು ದಿವಸ ಅದನ್ನು ಮಾಡುತ್ತಿರುವಾಗ ಅವನು ದುಗ್ಗಳೆಗೆ ಇಲ್ಲಿ ಎಳೆ ಹರಿದಿದೆ. ಅದು ಚೆನ್ನಾಗಿ ಕಾಣುವುದಿಲ್ಲ. ನೀನು ದೀಪವನ್ನು ತೆಗೆದುಕೊಂಡು ಬಂದು ಎಳೆಯನ್ನು ಹತ್ತಿಸು ಎಂದು ಹೇಳಲು ಅದು ಹಗಲು ಹೊತ್ತು, ಆಗ ಚೆನ್ನಾಗಿ ಕಾಣುತಿತ್ತು. ಹೀಗಿದ್ದರೂ ಅವಳು ಅವನಿಗೆ ಹೀಗೇಕೆ ದೀಪ ಬೇಕು ಎಂದು ಅವಳು ತಿರುಗಿ ಅವನಿಗೆ ಪ್ರಶ್ನೆ ಮಾಡಲಿಲ್ಲ. ದುಗ್ಗಳೆ ದೀಪವನ್ನು ಹಚ್ಚಿಕೊಂಡು ಬೆಳಕಿನಲ್ಲಿ ಬಂದು ಹರಿದ ಎಳೆಗೆ ಕೆಚ್ಚು ಹಾಕಿ ಗಂಡನಿಗೆ ತೋರಿಸಿ ಒಳಗೆ ಹೋದಳು. ಇದರಿಂದ ದುಗ್ಗಳೆ–ದಾಸಿಮಯ್ಯರಲ್ಲಿ ಎಷ್ಟು ಪರಸ್ಪರ ಸಹಕಾರ ಮತ್ತು ಪ್ರೇಮ ಭಾವವಿತ್ತೆಂಬುದು ಗೊತ್ತಾಗುತ್ತದೆ.

ಮುಂದೆ ಕೆಲವು ವೇಳೆಯಾದ ಮೇಲೆ ದಾಸಿಮಯ್ಯನು ದುಗ್ಗಳೆ ಇಲ್ಲಿ ಬಾ ಕುಂಚಿಗೆಯನ್ನು ತಂದುಕೊಡು ಎಂದು ಅವಳಿಗೆ ಹೇಳಿದನು. ಆಗ ಚಿಕ್ಕಮಕ್ಕಳಿಗೆ ಹೊದ್ದಿಸುವ ಕುಂಚಿಕೆಯ ಕೆಲಸವಿರಲಿಲ್ಲ. ಸರಾಳಿ ಮಾಡುವಾಗ ಉಪಯೋಗಿಸುವ ಕುಂಜಿಗೆ ಅವನಿಗೆ ಬೇಕಾಗಿತ್ತು. ಆದರೆ, ತಾನು ಹೊದ್ದುಕೊಂಡಿದ್ದ ಕುಂಚಿಗೆಯನ್ನು ಗಂಡನು ಬೇಡುತ್ತಿರಬಹುದು ಎಂದು ತಿಳಿದು ಅದನ್ನು ತೆಗೆದು ಗಂಡನಿಗೆ ಕೊಟ್ಟು ಹೋದಳು. ದಾಸಿಮಯ್ಯ–ದುಗ್ಗಳೆಯರು ಹೀಗೆ ತಮ್ಮ ಕಾಯಕವನ್ನು, ಸಂಸಾರ ಕಾರ್ಯಗಳನ್ನು ಮಾಡುವಲ್ಲಿ ಪರಸ್ಪರ ಸಹಾಯದಿಂದ ಮತ್ತು ಪ್ರೇಮದಿಂದ ನಡೆಸುತ್ತಿರುವುದನ್ನು ಈ ಉಭಯ ಮಹೇಶ್ವರರು ಕಂಡು ಸಂಸಾರವು ಇದ್ದರೆ, ಹೀಗಿರಬೇಕು. ಇದು ವಿರಕ್ತಿಗಿಂತಲೂ ಸುಖಕರವಾದದ್ದು, ಇದೇ ಹೆಚ್ಚಿನದು ಎಂದು ಅವರಿಗೆ ತೋರಿತು.

ಇದಾದ ಮೇಲೆ ದಾಸಿಮಯ್ಯನು ಹೆಂಡತಿಯನ್ನು ಒಳಗೆ ಕರೆದುಕೊಂಡು ಹೋಗಿ ಭೋಜನಕ್ಕೆ ಕುಳಿತುಕೊಂಡನು. ಆದರೆ, ಅವರು ಬಡವರು. ಊಟದಲ್ಲಿ ಪಕ್ವಾನ್ನಗಳಿರಲಿಲ್ಲ. ಬಿಸಿಬಿಸಿ ಪದಾರ್ಥಗಳಿರಲಿಲ್ಲ. ದುಗ್ಗಳೆಯೂ ತಣ್ಣಗಿನ ತಂಗುಳ ಅಂಬಲಿಯನ್ನು ಒಳಗಿನಿಂದ ತಂದು ಎಲ್ಲರಿಗೂ ನೀಡಿದಳು. ದಾಸಿಮಯ್ಯನು ಅದನ್ನು ಲಿಂಗಾರ್ಪಣೆ ಎಂದು ಸುರಿದುಕೊಳ್ಳಹತ್ತಿದನು. ಇದರ ಮಧ್ಯೆ ಕುಡಿಯುವುದನ್ನು ನಿಲ್ಲಿಸಿ ಈ ಅಂಬಲಿಯು

ಬಹಳ ಬಿಸಿಯಾಗಿದೆ. ಅದನ್ನು ಬೀಸಿ ತಣ್ಣಗೆ ಮಾಡು ಎಂದು ಹೇಳಿದಾಗ, ಅದನ್ನು ಕೇಳಿದಂತಹ ದುಗ್ಗಳೆ, ಗಂಡನಿಗೆ ಮರುತ್ತರ ಕೊಡದೇ ಅಂಬಲಿಯೂ ತಣ್ಣಗಿದ್ದರೂ ಒಂದು ಬೀಸಣಿಕೆ ತಂದು ತಣ್ಣಗಿನ ಆ ಅಂಬಲಿಗೆ ಗಾಳಿಯನ್ನು ಬೀಸುತ್ತಾಳೆ.

ಆಗ ಆ ಉಭಯ ಗಣಾಧೀಶರು ಇವರ ಸಂಸಾರವನ್ನು ನೋಡಿ ಹಿಗ್ಗಿ, ದುಗ್ಗಳೆ–ದಾಸಿಮಯ್ಯರ ಅಪ್ಪಣೆ ಪಡೆದು ಗೊಗ್ಗೇಶ್ವರನೆಂಬ ಬೇರೊಬ್ಬ ಶಿವಶರಣರ ಮನೆಗೆ ಹೊರಟರು. ಅವನೂ ಕೂಡ ಒಬ್ಬ ಶ್ರೇಷ್ಠ ಶಿವಾನುಭವಿಯೂ, ಲಿಂಗಾಂಗ ಸಾಮರಸ್ಯ ವೃತ್ತಿಯವನೂ ಬಹು ಶಾಂತ ಸ್ವಭಾವದವನು. ಆದರೆ, ಈ ಉಭಯ ಮಹೇಶ್ವರರು ಗೊಗ್ಗೇಶ್ವರನ ಗೃಹವನ್ನು ಪ್ರವೇಶಿಸಿದ ಕೂಡಲೇ ಅವನ ಹೆಂಡತಿಯೂ ಅವರ ಮೇಲೆ ಬೈಗುಳ ಸುರಿಮಳೆಯನ್ನು ಸುರಿಸಹತ್ತಿದಳು. ಅವಳ ಬಾಯಲ್ಲಿ ಭಕ್ತರ ನಿಂದೆ, ಜಂಗಮರ ನಿಂದೆ, ಬಂದ ಅತಿಥಿಗಳ ನಿಂದೆ ಇವುಗಳೇ ತುಂಬಿದ್ದವು. ಆದರೆ, ಗೊಗ್ಗೇಶ್ವರನು ಅವಳ ಮೇಲೆ ಎಷ್ಟು ಮಾತ್ರವೂ ಕೋಪಿಸಲಿಲ್ಲ. ಅವನು ಆ ಮಹೇಶ್ವರರನ್ನು ಯಥಾರೀತಿಯಾಗಿ ತಾನೇ ಸತ್ಕರಿಸಿ ಅವರನ್ನು ತನ್ನ ಮನೆಯಿಂದ ಬೀಳ್ಕೊಟ್ಟನು.

ಆಗ ಈ ಉಭಯ ಮಹೇಶ್ವರರು ಈ ಗೊಗ್ಗೇಶ್ವರನು ಮಹಾ ಶಿವಶರಣನು. ಅವನಿಗೆ ಸಿಟ್ಟು ಎಂಬುದಿಲ್ಲ. ಆದರೆ, ಅವನ ಸಂಸಾರಕ್ಕೂ ದಾಸಿಮಯ್ಯನ ಸಂಸಾರಕ್ಕೂ ಎಷ್ಟು ಅಂತರವೂ! ದಾಸಿಮಯ್ಯನ ಸಂಸಾರವೂ ಕೈಲಾಸಕ್ಕಿಂತಲೂ ಮಿಗಿಲಾದದ್ದು, ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುವುದು ಬೇಡ. ಅವನು ಇಲ್ಲಿಯೇ ಇರಲಿ. ಆದರೆ, ಗೊಗ್ಗೇಶ್ವರನಂತಹ ಶಿವಶರಣನು ಇಂತಹ ಸಂಸಾರದಲ್ಲಿ ಇರಬಾರದು. ಅವನನ್ನು ನಾವು ಕೈಲಾಸಕ್ಕೆ ಕರೆದುಕೊಂಡು ಹೋಗಬೇಕು ಎಂದು ನುಡಿದು ಗೊಗ್ಗೇಶ್ವರನನ್ನು ಕೈಲಾಸಕ್ಕೆ ತಮ್ಮ ಕೂಡ ಕರೆದುಕೊಂಡು ಹೋದರು.

ಇದರಿಂದ ಸರಿಯಾಗಿ ನಡೆಸಿದ ಕಾಯಕ ಮತ್ತು ಉತ್ತಮ ಗೃಹಿಣಿ ಇವುಗಳು ವಿರಕ್ತಿಗಿಂತಲೂ ಹೆಚ್ಚು ಶ್ರೇಷ್ಠವಾದವುಗಳೆಂದೂ ಶರಣರು ಭಾವಿಸುತ್ತಿದ್ದುದ್ದು ವ್ಯಕ್ತವಾಗುತ್ತದೆ ಎಂದು ತಿಳಿಸಿದ್ದಾರೆ.[4] ಕೇವಲ ಕತೆಗಳನ್ನು ಕಟ್ಟುಕತೆಗಳನ್ನು ವದಂತಿಗಳನ್ನು ನಂಬಲೂ ಸಾಧ್ಯವಿಲ್ಲದಿದ್ದರೂ ಕೂಡ ದಾಸಿಮಯ್ಯನೇ ತನ್ನ ವಚನವೊಂದರಲ್ಲಿ

> 'ಬಂದುದನ್ನ ಅರಿದು ಬಳಸುವಳು,
> ಬಂದುದ ಪರಿಣಾಮಿಸುವಳು,
> ಬಂಧುಬಳಗವ ಮರೆಸುವಳು
> ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ'.[5]

ಎಂದು ಹೇಳುತ್ತಾನೆ.

ದಾಸಿಮಯ್ಯನ ಏಳಿಗೆಗೆ ದುಡಿಯುವಂತಹ ಮನಸ್ಸು, ಸಹನೆ ಹಾಗೂ ತಾಳ್ಮೆ ದುಗ್ಗಳೆಗೆ ಇದ್ದಿತೆಂದು ದಾಸಿಮಯ್ಯನ ವಚನದಿಂದಲೇ ತಿಳಿಯುತ್ತದೆ. ಇದರಿಂದಾಗಿಯೇ ಕೈಲಾಸದ ಗಣಾಧೀಶ್ವರರು ದಾಸಿಮಯ್ಯ–ದುಗ್ಗಳೆಯ ಸಂಸಾರವನ್ನು ಕೊಂಡಾಡಿರಬಹುದು. ಅಲ್ಲದೆ, ದಾಸಿಮಯ್ಯನ ದಾಂಪತ್ಯವನ್ನು ಬಸವ, ಅಲ್ಲಮ, ಚೆನ್ನಬಸವಣ್ಣ ಮೊದಲಾದವರು ಕೊಂಡಾಡುತ್ತಾರೆ. ಹೀಗೆ ಕೊಂಡಾಡುವಲ್ಲಿ ದುಗ್ಗಳೆಯ ವ್ಯಕ್ತಿತ್ವವನ್ನು ಸಾಂಪ್ರದಾಯಿಕ ದೃಷ್ಟಿಯಿಂದಲೇ ನೋಡುವ ಹಾಗೂ ಪತಿಗೆ ಸತಿ ಸಹಕಾರ ನೀಡುವ ಮನಸ್ಥಿತಿಯೇ

ಕಂಡುಬರುತ್ತದೆ. ಹಾಗಾಗಿಯೇ ಸಾಂಪ್ರದಾಯಿಕ ಮನಸ್ಥಿತಿಯನ್ನು ಒಪ್ಪಿಕೊಂಡಂತಹ ದುಗ್ಗಳೆಯ ಅಭಿವ್ಯಕ್ತಿ ಹೆಚ್ಚು ಸಹಜವಾಗಿ ವಚನಕಾರರಿಗೆ ಕಾಣಿಸುತ್ತದೆ. ಇದರ ಜತೆಗೆ ದುಗ್ಗಳೆ ತನ್ನ ವ್ಯಕ್ತಿತ್ವ ಬೆಳೆಸಿಕೊಳ್ಳಲು; ತನ್ನತನವನ್ನು ಗುರುತಿಸಿಕೊಳ್ಳಲು ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರನ್ನು ನೆನೆಸಿ ಗುರು–ಲಿಂಗ–ಜಂಗಮ–ಪ್ರಸಾದಿ ಯಾರಿಂದಾದೆ ಅನ್ನುತ್ತಾಳೆ. ಭಕ್ತನಾದರೆ ಬಸವಣ್ಣ, ಜಂಗಮನಾದರೆ ಪ್ರಭುದೇವ, ಯೋಗಿಯಾದರೆ ಸಿದ್ಧರಾಮ ಎನ್ನುತ್ತಲೇ ತನ್ನ ಅಸ್ತಿತ್ವದ ನೆಲೆಗಳನ್ನು ಪುರುಷರ ನೆಲೆಯಲ್ಲಿ ಗುರುತಿಸಿಕೊಳ್ಳಲು ಹೆಣಗುತ್ತಾಳೆ. ತನ್ನದೊಂದು ಅಸ್ತಿತ್ವದ ಕಲ್ಪನೆಯನ್ನು ಮಾಡಿಕೊಳ್ಳದೆ, ಪ್ರಶ್ನಾತೀತ ಬದುಕನ್ನು ಬದುಕಿದವಳು.

ಅಡುಗೂಲಜ್ಜಿಯ ಪರಂಪರೆಯಲ್ಲಿ ಅವಳ ಈ ನಡೆ ಸಹಜವೇ ಇರಬಹುದು. ಆದರೆ, ಈ ಸಹಜತೆಯನ್ನು ಮೀರಿದ ಗೊಗ್ಗೇಶ್ವರನ ಹೆಂಡತಿ ಮಾತ್ರ ರಕ್ಕಸಿಯ ಪುತ್ಥಳಿಯಾಗಿ ನಿಂತುಬಿಡುತ್ತಾಳೆ. ಒಟ್ಟಿನಲ್ಲಿ ವಚನಕಾರರಿಗೆ ಸ್ತ್ರೀ ಸಾಂಪ್ರದಾಯಿಕ ನಿಯಮಗಳಿಗೆ ಬದ್ಧಳಾಗಿದ್ದಾಗ ಮಾತ್ರ ದೇವತೆಯ ಪುತ್ಥಳಿಯಾಗಿ ಸಾಂಪ್ರದಾಯಿಕ ನಿಯಮಗಳನ್ನು ಮೀರಿದಾಗ ರಕ್ಕಸಿಯಾಗಿ ನೆಲೆಗೊಳ್ಳುತ್ತಾಳೆ.

ಆದರೆ, ಈ ಎಲ್ಲಾ ನಿಯಮಗಳನ್ನು ಮೀರಿದ ಕೆಲವು ವಚನಕಾರ್ತಿಯರನ್ನು ಕಾಣಬಹುದು. ಗೊಗ್ಗವ್ವೆಯೂ 'ಉಭಯದ ಜ್ಞಾನ ಹೆಣ್ಣೋ ಗಂಡೋ' ಎಂಬ ಪ್ರಶ್ನೆಯ ಜತೆಗೆ ಇಡೀ ಸಮಾಜವನ್ನೇ ದಿಗ್ಭ್ರಾಂತಿಗೆ ಒಳಪಡಿಸುವಂತಹ ದಿಟ್ಟ ಪ್ರಶ್ನೆಗಳನ್ನು ಸಮಾಜದ ಮುಂದಿಡುತ್ತಾಳೆ.

> 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ
> ಅದು ಒಬ್ಬರ ಒಡವೆಯೆಂದು ಅರಿಯಬೇಕು
> ಹೆಣ್ಣು ಮೋಹಿಸಿ ಗಂಡ ಹಿಡಿದಡೆ
> ಉತ್ತರವಾವುದೆಂದರಿಯಬೇಕು'[6]

ಎಂದು ಪ್ರಶ್ನಿಸುವ ಮೂಲಕ ಇಡೀ ಸಮಾಜದ ವ್ಯವಸ್ಥೆಯ ಒಳತೋಟಿಯನ್ನೇ ಧಿಕ್ಕರಿಸುವ ಹಂತಕ್ಕೆ ತಲುಪುತ್ತಾಳೆ. ಗಂಡು ಯಾವಾಗಲೂ ಕೂಡ ಹೆಣ್ಣನ್ನು ಆಸ್ತಿ, ಅಂತಸ್ತು, ಸಂಪತ್ತಿನ ರೀತಿಯೆ ಒಡವೆಯೆಂದು ಪ್ರತಿಷ್ಠೆ ಎಂದು ಪರಿಗಣಿತ. ಹಾಗಾಗಿಯೇ ಈ ಸ್ವಯಂವರದ ಕಲ್ಪನೆಗಳು ಹುಟ್ಟಿರಬಹುದು ಎಂದೆನಿಸುತ್ತದೆ.

ಆದರೆ, ಹೆಣ್ಣು ತನ್ನ ಬದುಕಿನ ಮೌಲ್ಯಗಳನ್ನು ಪುರುಷನಂತೆ ನಿರ್ಧರಿಸುವಂತಹ ಹಂತಕ್ಕೆ ತಲುಪಿದರೆ, ಹೆಣ್ಣು ಕೂಡ ಪುರುಷನ ರೀತಿಯೇ ಗಂಡನ್ನು ಮೋಹಿಸಿ ಪಡೆದರೆ ಯಾವ ಉತ್ತರವನ್ನು ಕೊಡಬೇಕು ಎಂದು ಪ್ರಶ್ನಿಸುತ್ತಾಳೆ. ಕೇವಲ ಪುರುಷ ಸಮಾಜ ಹೆಣ್ಣನ್ನು ಒಡವೆ ಎಂದು ಅರಿಯುವುದರ ಜತೆಗೆ ಆಕೆಯನ್ನು ಲೈಂಗಿಕ ದೃಷ್ಟಿಯಿಂದಲೇ ಕಂಡಿರುವುದು ಹಾಗೂ ಹೆಣ್ಣು ಗಂಡನ್ನೂ ಕೂಡ ಅದೇ ದೃಷ್ಟಿಯಿಂದ ನೋಡಿದಾಗ ಆಗುವಂಥ ವ್ಯತ್ಯಾಸವನ್ನು ಪ್ರಶ್ನಿಸುತ್ತಾಳೆ.

ಆದರೆ, ಕೇವಲ ಪುರುಷ ಸಮಾಜವನ್ನು ಪ್ರಶ್ನಿಸಿ ಉತ್ತರಕ್ಕಾಗಿ ಕಾಯುತ್ತ ಕೂರುವ ಹೆಣ್ಣಲ್ಲ ಗೊಗ್ಗವ್ವೆ, ಹಾಗಾಗಿ ಸರ್ವಕಾಲಕ್ಕೂ ಒಪ್ಪಿಗೆಯಾಗುವಂತಹ ಉತ್ತರವನ್ನು ನೀಡುತ್ತಾಳೆ. ಬಹುಶಃ ಈ ಉತ್ತರ ಗೊಗ್ಗವ್ವೆಯ ತೀರ್ಮಾನ ಮಾತ್ರವಲ್ಲ; ಸ್ತ್ರೀ ಆಲೋಚನೆಯುಳ್ಳ ಪ್ರತಿಯೊಬ್ಬರ ತೀರ್ಮಾನದಂತೆ ಕಾಣಿಸುತ್ತದೆ.

'ಈ ಎರಡರ ಉಭಯವ ಕಳೆದು ಸುಖಿತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ'[7]

ಗೊಗ್ಗವ್ವೆ ಇಲ್ಲಿ ನಾಸ್ತಿನಾಥನನ್ನು ತನ್ನ ಆರಾಧ್ಯ ದೈವವನ್ನಾಗಿಸಿಕೊಂಡರೂ ಕೂಡ ಒಬ್ಬ ಪರಿಪೂರ್ಣ ಮನುಷ್ಯನನ್ನು ಅದರಲ್ಲಿ ಸಮೀಕರಿಸುತ್ತಿದ್ದಾಳೆ. ಹಾಗಾಗಿಯೇ ನಾಸ್ತಿನಾಥನನ್ನು 'ಅರ್ಧನಾರೀಶ್ವರ' ಕಲ್ಪನೆಯಲ್ಲಿ ಕಾಣುವುದರ ಜತೆಗೆ ಸ್ತ್ರೀಯಾಗಲಿ, ಪುರುಷನಾಗಲಿ, ಗಂಡು ಹೆಣ್ಣೆಂಬ ಮೋಹವನ್ನು ಕಳೆದು ಬದುಕಿದರೆ, ಆ ಬದುಕು ಪರಿಪೂರ್ಣ ಎಂದು ತಿಳಿಸುತ್ತಾಳೆ. ಹೀಗೆ ತಿಳಿಸುವ ಹಂತದಲ್ಲಿ ಗೊಗ್ಗವ್ವೆ ಲಿಂಗ ವ್ಯತ್ಯಾಸದ ಆಚೆಗಿನ ಬದುಕನ್ನು ವಚನಗಳ ಮೂಲಕ ಗುರುತಿಸುವಂತಹ ಪ್ರಯತ್ನ ಮಾಡುತ್ತಾಳೆ.

ಸಂಸಾರದಲ್ಲಿ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತಿನಂತೆ ಸತಿ-ಪತಿ ಇಬ್ಬರೂ ಕೂಡ ಸಮಾನರು. ಕೂಡಿ ಬಾಳಿದರೆ ಸ್ವರ್ಗ ಸುಖ. ಆದರೆ, ಸತಿಯೊಬ್ಬಳಿಂದಾಗಲಿ, ಪತಿಯೊಬ್ಬನಿಂದಾಗಲಿ ಸಂಸಾರ ಸಾಗಲಾರದು. ಮುಕ್ತಿಯೆಂಬುದು ಸಂಸಾರದಲ್ಲಿ ಸಾಧ್ಯವಾಗಬೇಕಾದರೆ, ಸತಿ-ಪತಿಗಳ ಭಕ್ತಿ ಒಂದೇ ಆಗಿರಬೇಕು ಎಂದು ದಾಸಿಮಯ್ಯ ತಿಳಿಸುತ್ತಾನೆ. ಇದರಿಂದ ತಿಳಿಯುವುದೇನೆಂದರೆ ಮುಕ್ತಿ ಕೇವಲ ಪುರುಷನ ಹಂಗಲ್ಲ. ಆತ ಮುಕ್ತಿ ಪಡೆಯಬೇಕು ಎಂದರೆ ಸಂಸಾರ ಬಿಟ್ಟು ಹೊರ ಹೋಗುವುದಲ್ಲ. ಮುಕ್ತಿಯನ್ನು ಪಡೆಯಲು ಸತಿಪತಿಗಳಿಬ್ಬರೂ ಕೂಡ ಅರ್ಹರಾದವರೇ.

ಆದರೆ,

ಬಸವಣ್ಣ ತನ್ನ ವಚನವೊಂದರಲ್ಲಿ
ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತಯ್ಯಾ
ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ

ಈ ಭಕ್ತಿ ಸಾಧನೆಗೆ ಇರುವ ಅಡಚಣೆಗಳೇನು? ಎಂದು ಕೇಳಿದರೆ, ಅಡಚಣೆಗಳು ಹಲವು ಎಂದು ಉತ್ತರ ಬರುತ್ತದೆ. ಮನುಷ್ಯರು ಸಂಸಾರವೇ ಸಾರ ಸರ್ವಸ್ವವೆಂದೂ, ಸಂಸಾರ ಸುಖವೇ ಶಾಶ್ವತ ಸುಖವೆಂದು ಭ್ರಮಿಸಿ, ಅದರಲ್ಲಿ ಮಗ್ನನಾಗಿ ಕಷ್ಟ ದುಃಖಗಳನ್ನು ಅನುಭವಿಸುತ್ತಿದ್ದರೂ ಸಂಸಾರದಿಂದ ಪಾರಾಗದೇ, ಭಗವಂತನನ್ನು ಮೊರೆ ಹೋಗದೇ ಇರುತ್ತಾನೆ. ಆತ್ಮನನ್ನು ಸಂಸಾರವೆಂಬ ರಾಹು ಹಿಡಿದಿರುತ್ತದೆ.[8] ಎಂಬ ಮಾತನ್ನು ಒಪ್ಪಬಹುದು ಎನಿಸಿದರೂ ಕೂಡ 'ಇಂದೆನ್ನ ದೇಹಕ್ಕೆ ಗ್ರಹಣವಾಯಿತಯ್ಯಾ' ಎಂದು ಬಸವಣ್ಣ ಹೇಳುವಾಗ ಹೆಣ್ಣನ್ನು ವರಿಸಿದ್ದರ ಕಲ್ಪಕತೆ ಇದೆ. ಅಂದರೆ ಸ್ತ್ರೀ-ಪುರುಷನ ಆಲೋಚನೆಗಳನ್ನು ನುಂಗುವ

ರಾಹು ಎಂಬ ಕಲ್ಪನೆ ಇದ್ದಂತೆ ಕಾಣಿಸುತ್ತದೆ. ಆದರೆ, ಬಸವಣ್ಣ ತನ್ನ ಏಳಿಗೆಯನ್ನು ಬಯಸಿದವಳು ಹೆಣ್ಣೆಂಬುದನ್ನು ಮರೆತಂತೆ ಕಾಣಿಸುತ್ತದೆ. ಹಾಗಾದರೆ, ಒಬ್ಬ ಯಶಸ್ವೀ ಪುರುಷನ ಹಿಂದೆ ಸ್ತ್ರೀಯೊಬ್ಬಳ ತ್ಯಾಗ, ಪರಿಶ್ರಮ ಇರುವುದು ಸುಳ್ಳು ಎಂದಾಗುತ್ತದೆ. ಆದರೆ, ಬಸವಣ್ಣನ ಏಳಿಗೆಗೆ ಕಾರಣಳಾದವಳು ಹೆಣ್ಣೆಂಬುದು ನಿಜವಾದರೆ, ಆಕೆ ಕೇವಲ ಸಹೋದರಿಯಾಗಿ, ತಾಯಿಯಾಗಿ ಮಾತ್ರವಿರಬೇಕು ಎನಿಸುತ್ತದೆ.

ಏಕೆಂದರೆ, ಬಹುಶಃ ಗ್ರಹಣ ಎಂದರೆ, ಕೂಡಿದ ಮಡದಿಯೇ ಇರಬೇಕು. ಒಂದು ಹೆಣ್ಣು ಸಹೋದರಿಯಾದಾಗ, ತಾಯಿಯಾದಾಗ ಒಬ್ಬ ಪುರುಷನ ಏಳಿಗೆಗೆ ಪರಿಶ್ರಮಿಸಿದವಳು ಪತಿಯ ಏಳಿಗೆಯನ್ನು ಸಹಿಸದೇ ಇರಲಾರಳೆ? ಸಂಸಾರ ಸಾಗರ ಎಂದಾಕ್ಷಣ ಕೇವಲ ರಾಹುವಾಗಿ ಮಾಯೆಯಾಗಿ ಸತಿ ಮಾತ್ರ ಕಾಣಿಸುತ್ತಾಳೆ. ಹಾಗಾಗಿಯೆ ಸಂಸಾರ ಎಂಬ ರಾಹು ಸರ್ವಗ್ರಾಸಿಯಾಗಿ ನುಂಗಿದೆ ಎಂದು ಹೇಳಿದಂತೆ ಕಾಣಿಸುತ್ತದೆ. ದಾರಿ ಕಾಣದೆ ಕೂಡಲ ಸಂಗಮದೇವನನ್ನೇ ಬೇಡಿಕೊಳ್ಳುತ್ತಾನೆ.

ಬಸವಣ್ಣನ ಈ ಮಾತುಗಳಿಗಿಂತ ಹೆಚ್ಚಾಗಿ ಅಮ್ಮುಗೆ ರಾಯಮ್ಮ ಕೂಡ ತನ್ನ ವಚನದಲ್ಲಿ

'ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ,
ಎನ್ನ ಕಾಲೊಳಗಣ ಮುಳ್ಳ ತೆಗೆಯುವವರನಾರನೂ ಕಾಣೆ,
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ,
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ಕೆಡಿಸುವವರನಾರನೂ
ಕಾಣೆನಯ್ಯಾ'[9]

ಎಂದು ಬಸವಣ್ಣನಂತೆ ಈಕೆಯೂ ಕೂಡ ಸಂಸಾರದಿಂದ ಆಗುವ ತೊಡಕುಗಳನ್ನು ಮೋಕ್ಷಕ್ಕೆ ಇರುವ ಅಡೆತಡೆಗಳನ್ನು ತೋಡಿಕೊಂಡರೂ ಕೂಡ ಬಸವಣ್ಣನಗಿಂತ ಒಂದು ದಿಟ್ಟ ಹೆಜ್ಜೆಯನ್ನು ಮುಂದಿಡುತ್ತಾಳೆ. ಆದರೆ, ಅಮುಗೆ ರಾಯಮ್ಮ ಮಾತ್ರ ಇಂಥವರನ್ನು-ಬಸವಣ್ಣನಂಥವರನ್ನು-ಹಾಗೂ ಅವರ ವಚನಗಳಿಂದ ತಿಳಿದೇ ಎನ್ನುವವರನ್ನು ಖಂಡಿಸಿ ಮಾತನಾಡುತ್ತಾಳೆ.

ಆದ್ಯರ ವೇದ್ಯರ ವಚನಗಳಿಂದ
ಅರಿದೆವೆಂಬರು ಅರಿಯಲಾರರು ನೋಡಾ'[10]

ಹಾಗೆಯೇ ಈ ಸಂಸಾರ ಬಂಧನವನ್ನು ಬಿಡಿಸುವವರು ಮತ್ತೊಬ್ಬರಲ್ಲ ಎಂಬುದನ್ನು

'ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೇ ಮುರಿಯಬೇಕು
ಎನ್ನ ಕಾಲೊಳಗಣ ಮುಳ್ಳ ನಾನೇ ತೆಗೆಯಬೇಕು
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೇ ಸುಡಬೇಕು
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೇ ಕಳೆಯಬೇಕು
ಅಮುಗೇಶ್ವರಲಿಂಗವ ನಾನೇ ಅರಿಯಬೇಕು'[11]

ಎನ್ನುತ್ತಾಳೆ.

ಹಾಗಾಗಿ ಸಂಸಾರದಲ್ಲಿರುವ ತೊಂದರೆಗಳು, ತೊಡಕುಗಳನ್ನು ಇಂದ್ರಿಯಜನ್ಯವಾದ ವಿಪತ್ತುಗಳನ್ನು ಅವರವರ ಅನುಭವಕ್ಕೆ ತಕ್ಕ ಹಾಗೆ ಪರಿಹರಿಸಿಕೊಳ್ಳಬೇಕು. ಅದನ್ನು ಹೊರತುಪಡಿಸಿ ಅನ್ಯರ ಸಹಾಯವನ್ನು ಬೇಡುವುದು ಬೇಡವೆನ್ನುತ್ತಾಳೆ. ಇದರ ಜತೆಗೆ ಸಂಸಾರದಲ್ಲಿ ಇದ್ದುಕೊಂಡೇ ಪಾರಮಾರ್ಥಿಕದ ಕಡೆಗೆ ವಾಲಬೇಕು ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿಕೊಡುತ್ತಾಳೆ.

'ಅಮರಗುಂಡ ಮಲ್ಲಿಕಾರ್ಜುನ' ಎಂಬ ಅಂಕಿತವುಳ್ಳ ವಚನಕಾರ

ನೆನೆವ ಮನಕ್ಕೆ ಹೊನ್ನ ತೋರಿದೆ
ನೋಡುವ ಕಂಗಳಿಗೆ ಹೆಣ್ಣ ತೋರಿದೆ
ಪೂಜಿಸುವ ಕೈಗೆ ಮಣ್ಣ ತೋರಿದೆ
ಇಂತೀ ತ್ರಿವಿಧಕ್ಕೆ ತ್ರಿವಿಧವ ತೋರಿ
ನೀ ಬೇರಾದ ಭಿನ್ನಾಣಕ್ಕೆ ಬೆರಗಾದನೈ
ಅಮರಗುಂಡ ಮಲ್ಲಿಕಾರ್ಜುನ'[12] ಎಂದಿದ್ದಾನೆ.

ಇಲ್ಲಿ ಹೊನ್ನು, ಮಣ್ಣು, ಹೆಣ್ಣು ಇವುಗಳನ್ನು ಮಾಯೆಯ ದೃಷ್ಟಿಯಲ್ಲಿ ನೋಡುವ ಇದರಾಚೆಗೆ ಬೇರಾದ ದೈವವೊಂದನ್ನು ಕಾಣುವಂಥ ದೃಷ್ಟಿಕೋನವಿದೆ. ಅಂದರೆ, ಹೊನ್ನು, ಮಣ್ಣು, ಹೆಣ್ಣು ಮತ್ತೆ ಮತ್ತೆ ಎಲ್ಲರಿಗೂ ಎಲ್ಲಾ ಕಾಲಕ್ಕೂ ಕಾಡಿದ ರೀತಿಯೇ ಮಾಯೆಯಾಗಿಯೇ ವಚನಕಾರರಿಗೂ ಕೂಡ ಕಾಡಿಸಿದೆ. ಅದರಿಂದ ಬಿಡಿಸಿಕೊಳ್ಳಲಾಗದಂತಹ ಸ್ಥಿತಿಗೆ ವಚನಕಾರರು ಬಂದಿರುವಂತೆ ಕಾಣಿಸುತ್ತದೆ. ಆದರೆ,

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸೆಯೇ ಮಾಯೆ ಕಾಣ ಗುಹೇಶ್ವರಾ[13]

ಎಂದು ಅಲ್ಲಮಪ್ರಭು ಹೇಳಿದ್ದಾರೆ. 'ಜನಿತಕ್ಕೆ ತಾಯಾಗಿ, ಕೂಟಕ್ಕೆ ಸತಿಯಾಗಿ, ಮೋಹಕ್ಕೆ ಮಗಳಾಗಿ, ಯೋಗಿಗೆ ಯೋಗಿಣಿಯಾಗಿ, ಸವಣಂಗೆ ಕಂತಿಯಾಗಿ' ಪುರುಷನನ್ನು 'ಬಿಟ್ಟನೆಂದರೆ ಬಿಡದೆ ಬೆಂಬತ್ತಿ ಕಾಡುವ' ದುಷ್ಟಶಕ್ತಿ ಎಂದು ದೂರ ತಳ್ಳಲಾಗುತ್ತಿದ್ದ ಸ್ತ್ರೀಯನ್ನು ಮಾಯೆಯ ಕಲ್ಪನೆಯಿಂದ ಮುಕ್ತಿಗೊಳಿಸುತ್ತಾನೆ ಅಲ್ಲಮಪ್ರಭು.[14] ಹೀಗೆ ಯೋಚಿಸಿದ ಅಲ್ಲಮ, ಅಕ್ಕನನ್ನು ಮಾತ್ರ ಅನುಭವ ಮಂಟಪಕ್ಕೆ ಬಂದಾಗ ಯಾವ ಪುರುಷನಿಗೂ ಒಡ್ಡದ ಪ್ರಶ್ನೆಗಳನ್ನು ಹಾಕುತ್ತಾನೆ ಎಂಬುದು ಮಾತ್ರ ದ್ವಂದ್ವಕ್ಕೆ ಎಡೆಮಾಡಿಕೊಟ್ಟಿದೆ.

ಬಸವಣ್ಣ ತನ್ನ ವಚನವೊಂದರಲ್ಲಿ

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ

ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆ ಎಳಸದಂತೆ ಇರಿಸು
ಕೂಡಲಸಂಗಮದೇವಾ[15]

ಎಂದು ಶರಣರ ಪಾದಗಳನ್ನೇ ಹೊರತು ಶರಣೆಯರ ಬಗೆಗೆ ಮಾತನಾಡುವುದಿಲ್ಲ. ಬಸವಣ್ಣನಂಥವರು ಡಾಂಬಿಕ ಸಮಾಜವನ್ನು ತಿರಸ್ಕರಿಸಿ ಹೊಸ ಸಮಾಜವೊಂದನ್ನು ಸಮತಾವಾದ ನೆಲೆಯಲ್ಲಿ ರೂಪಿಸಲು ಹೊರಟಂಥವರಿಗೆ ಸ್ತ್ರೀಯರು ತನ್ನ ಜತೆ ಇರುವತೆ ಕಾಣಿಸಲೇ ಇಲ್ಲ. ಹಾಗಾಗಿ ಅತ್ತಲಿತ್ತ ಹೋಗದಂತೆ, ಸುತ್ತಿ ಸುಳಿದು ನೋಡದಂತೆ, ಮತ್ತೊಂದ ಕೇಳದಂತೆ, ಹೆಳವ, ಅಂಧಕ ಹಾಗೂ ಕಿವುಡನನ್ನಾಗಿ ಮಾಡು ಎಂದು ಕೇಳಿಕೊಳ್ಳುತ್ತಾನೆ.

ಈ ರೀತಿ ಕೇಳಿಕೊಳ್ಳುವಿಕೆಯಲ್ಲಿ ಸ್ತ್ರೀ ರಹಿತ ಸಮಾಜದ ಕಲ್ಪನೆಯನ್ನು ಇಟ್ಟುಕೊಂಡಂತೆ ಕಾಣಿಸುತ್ತದೆ. ಕೇವಲ ಸಂಪತ್ತು, ಐಶ್ವರ್ಯ, ಅಧಿಕಾರವಷ್ಟೇ ಒಬ್ಬ ಪುರುಷನನ್ನು ಹಾಳು ಮಾಡುವುದಿಲ್ಲ. ಅದರ ಜತೆಗೆ ಸ್ತ್ರೀಯೂ ಕೂಡ ಸೇರಿಹೋಗುತ್ತಾಳೆ. ಈ ರೀತಿ ಸ್ತ್ರೀಯಿಂದ ಆಕೆಯ ಪಾಶದಿಂದ ಪಾರಾಗಬೇಕಾದರೆ ಅಂಗವಿಕಲನಾಗಬೇಕು. ಈ ಅಂಗವೈಕಲ್ಯ ಕೂಡಲ ಸಂಗನ ಮುಂದೆ ಮಾತ್ರ ಪರಿಹಾರವಾಗಬೇಕು. ಆದರೆ, ಸ್ತ್ರೀಯೇ ಇಲ್ಲದ ಸಮಾಜವೊಂದನ್ನು ಕಟ್ಟುವ ಕನಸಾಗಲಿ, ಕಲ್ಪಿಸಿಕೊಳ್ಳುವ ಮನಸ್ಸಾಗಲಿ ಸಾಧ್ಯವಿಲ್ಲ. ಇದರಿಂದಾಗಿಯೆ ಕೆಳವರ್ಗದ ವಚನಕಾರರ ಬಗೆಗೆ ಇರುವ ಕಳಕಳಿ ವಚನಕಾರ್ತಿಯರ ಬಗೆಗೆ ಇರಲಿಲ್ಲವೆಂದೇ ತೋರುತ್ತದೆ. ಆದರೂ ಸಮಾಜದಿಂದ ಪುರುಷನಿಂದ ಪೋಷಿಸಲ್ಪಡದಿದ್ದರೂ ಕೂಡ ಕೆಳವರ್ಗದ ವಚನಕಾರರ ಜತೆ ಜತೆಗೆ ವಚನಕಾರ್ತಿಯರೂ ಕೂಡ ತಮ್ಮನ್ನು ತಾವು ಗುರುತಿಸಿಕೊಂಡರು. ಇದರ ಜತೆಗೆ

'ಅಪ್ಪಯ್ಯ ಡೋಹರ ಕಕ್ಕಯ್ಯನಾಗಿ
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕುವೆನು
ಮತ್ತಾಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ
ನಾನರಿವೆನಯ್ಯ ಕಷ್ಟ ಜಾತಿ ಜನ್ಮದಲಿ ಜನಿಸಿದೆ
ಎನಗಿದು ವಿಧಿಯೇ ಕೂಡಲಸಂಗಮದೇವಾ?'[16]

ಎಂದು ಹೇಳುವ ಬಸವಣ್ಣಾ ಅಸ್ಪೃಶ್ಯನೊಬ್ಬನ ಮಗನಾಗಿ ಜನಿಸಿ ಆ ನೋವನ್ನು ತನ್ನದಾಗಿಸಿಕೊಳ್ಳುವಂತಹ ಮನೋಧರ್ಮವಿದ್ದರೂ; ಅದೇ ಹೆಣ್ಣೊಬ್ಬಳ ನೋವನ್ನು ಗುರುತಿಸಿಕೊಳ್ಳದವನಾಗಿ ನಿಲ್ಲುತ್ತಾನೆ. ಇದರ ಜತೆಗೆ ಪರಸತಿಯನ್ನು 'ಪಾರ್ವತಿ' ಎಂಬ ಮನೋಭಾವದಿಂದ ಕಾಣಬೇಕು ಎಂದು ಹೇಳುವುದರ ಜತೆಜತೆಗೆ ಪರಮ ಪತಿವ್ರತೆ ಹೇಗಿರಬೇಕು ಎಂಬುದನ್ನು ಕೂಡ ಶರಣ ಸಮಾಜ ನಿರ್ಧರಿಸುತ್ತದೆ.

ದೇವನೊಬ್ಬ, ನಾಮ ಹಲವು,
ಪರಮ ಪತಿವ್ರತೆಗೆ ಗಂಡನೊಬ್ಬ,
ಮತ್ತೊಂದಕ್ಕೆರಗಿದಡೆ ಕಿವಿ, ಮೂಗ ಕೊಯ್ವನು
ಹಲವು ದೈವದ ಎಂಜಲ ತಿಂದವರ
ನೇನೆಂಬನಯ್ಯ ಕೂಡಲಸಂಗಮದೇವಾ[17]

ಇಲ್ಲಿ ಶರಣಸತಿ, ಲಿಂಗಪತಿ ಎಂಬ ಕಲ್ಪನೆ ಮೇಲ್ನೋಟಕ್ಕೆ ಇದ್ದರೂ ಸಹ ಕೊಡುವ ಉಪಮೆಗಳು ವ್ಯತಿರಿಕ್ತವಾದಂತೆ ಕಾಣಿಸುತ್ತವೆ. 'ದೇವನೊಬ್ಬ ನಾಮ ಹಲವು' ಎಂದು ಒಪ್ಪಿಕೊಂಡರೂ ಕೂಡ ಎಲ್ಲಾ ದೈವವನ್ನು ಒಂದೇ ಹೆಸರಿನ ಕೆಳಗೆ ಕಾಣಬೇಕೆಂಬ ಮನೋಧರ್ಮವಿದೆಯೋ ಒಂದೇ ದೈವವನ್ನೇ ಹಲವು ನಾಮಗಳುಳ್ಳ ದೇವರನ್ನಾಗಿಸಿಕೊಳ್ಳಬೇಕೋ ಅಥವಾ ದೇವನೊಬ್ಬನೇ ಎಂದು ಬದ್ಧವಾಗಿರಬೇಕೋ. ಅದರ ಬಗೆಗೆ ಬಿನ್ನಾಭಿಪ್ರಾಯಗಳು ಇದ್ದಂತೆ ಕಾಣಿಸುತ್ತದೆ. ಇಲ್ಲವೆ ಪರಮ ಪತಿವ್ರತೆಯೊಬ್ಬಳು ಪತಿಯೇ ಪ್ರತ್ಯಕ್ಷ ದೈವ ಎನ್ನುವ ರೀತಿ ಇರಬೇಕು.

ಹಾಗಾಗಿಯೇ ಪರಮ ಪತಿವ್ರತೆಯಾದವಳು ಗಂಡನೊಬ್ಬ ಎಂದು ಬಾಳಬೇಕು.ಅದನ್ನು ಬಿಟ್ಟು ಜನಪದ ಗೀತೆಯಲ್ಲಿರುವಂತೆ 'ಮಲ್ಲಿಗೆ ಹೂವಿನಂಥ ಮದ್ವಿ ಗಂಡನ ಬಿಟ್ಟು ಹುಲ್ಲು ಕೊಯ್ವವನ ಹುಡ್ಕ್ಯಾಳ' ಎಂಬ ರೀತಿ ವರ್ತಿಸಿದರೆ ಆಕೆಯ ಕಿವಿ, ಮೂಗು ಕುಯ್ದು ವಿಕಾರಗೊಳಿಸಬೇಕು ಎಂದು ಹೇಳುತ್ತಾನೆ ಬಸವಣ್ಣ.

ಆದರೆ, ಈ ರೀತಿಯ ಕಟ್ಟು ಕಟ್ಟಲೆಗಳು ನಡಾವಳಿಗಳ ನಿರ್ಬಂಧಗಳು ಶರಣರ ಕಾಲಕ್ಕೇನೂ ಸಡಿಲವಾದಂತೆ ಕಾಣುವುದಿಲ್ಲ. ಇದರ ಜತೆಗೆ ಇಂಥ ನಿರ್ಬಂಧಗಳು ಕೇವಲ ಸ್ತ್ರೀಯರಿಗಾಗಿಯೇ ನಿರ್ಮಿಸಲ್ಪಟ್ಟಂಥವುಗಳು. ಹಾಗಾಗಿ ಇವನ್ನು ಅನುಸರಿಸುವವರು ಸ್ತ್ರೀಯರೇ ಆಗಬೇಕೆ ಹೊರತು ಪುರುಷರಲ್ಲ. ಇದರ ಜತೆಗೆ ಪತಿವ್ರತೆಯೊಬ್ಬಳು ಪರಪುರುಷನ ವ್ಯಾಮೋಹಕ್ಕೆ ಒಳಗಾದರೆ, ಅದು ಪತಿಯೊಬ್ಬನ ಪುರುಷತ್ವದ ಪ್ರಶ್ನೆಯಾಗಿ ಕಾಡಲು ಪ್ರಾರಂಭಿಸುತ್ತದೆ.

ಆದರೆ, ಇಂಥ ಪ್ರಶ್ನೆಗಳು ಸ್ತ್ರೀಯರಿಗೆ ಉದ್ಭವಿಸುವ ಆಗಿಲ್ಲ. ಪುರುಷನೊಬ್ಬ ಅನೇಕ ಸ್ತ್ರೀಯರನ್ನು ವರಿಸುವುದು ಅವರ ಗಂಡಸ್ತಿಕೆ ಹೆಚ್ಚಿಸುವುದಾಗಿರುತ್ತದೆ. ಹಾಗಾಗಿ ಅಂಥ ಪ್ರಶ್ನೆಗಳಿಗೆ ಅವರು ಕಂಡುಕೊಳ್ಳುವ ಸುಲಭೋಪಾಯಗಳು ಪರಮ ಪತಿವ್ರತೆ ಎನ್ನುವ ಪಟ್ಟ. ಅದರಾಚೆಗೆ ಸ್ತ್ರೀಯ ವ್ಯಕ್ತಿತ್ವವನ್ನು ನಿರ್ಬಂಧಿಸುವ ಮನಸ್ಥಿತಿ. ಶರಣರ ಜತೆಜತೆಗೆ ಗುರುತಿಸಿಕೊಂಡ ಶರಣೆಯರನ್ನು ತಿರಸ್ಕರಿಸದಿದ್ದರೂ ಪುರುಷನಿಗೆ ಕೊಟ್ಟ ಸ್ವಾತಂತ್ರ್ಯವನ್ನು ಸ್ತ್ರೀಯೊಬ್ಬಳಿಗೆ ಕೊಡಲು ನಿರಾಕರಿಸುತ್ತಾರೆ. ಸಾಂಪ್ರದಾಯಿಕ ಮೌಲ್ಯಗಳನ್ನೇ ಮತ್ತೆ ಮತ್ತೆ ಆಕೆಯ ಮೇಲೆ ಹೇರಲ್ಪಡುತ್ತಾ ಹೋಗುತ್ತಾರೆ.

ಇದರಾಚೆಗೆ, ಸ್ತ್ರೀಯರನ್ನೂ ಕೂಡ ಪುರುಷರ ಭಾಷೆಯಲ್ಲಿಯೇ ಪುರುಷರ ಆಲೋಚನೆಯಲ್ಲಿಯೇ ಬೆಳೆಸುವುದನ್ನು ಕಾಣಬಹುದು. ಉದಾಹರಣೆಗಳೆಂಬಂತೆ ಕೆಲವು ಶರಣೆಯರ ವಚನಗಳು ಪುರುಷ ಭಾಷೆಯಲ್ಲಿಯೇ ವ್ಯಕ್ತವಾಗಿವೆ. "ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇ ನೇಮ"[18] ಎಂದು ಸತ್ಯಕ್ಕ ಹೇಳುವಾಗಲೂ ಕೂಡ ಪರಸ್ತ್ರೀಯನ್ನೇ ಕುರಿತು ಹೇಳುವಲ್ಲಿ ಪುರುಷ ನಿರ್ಮಿತ ಭಾಷೆ ವ್ಯಕ್ತವಾಗುತ್ತಿದೆ. ಇಲ್ಲೆಲ್ಲವೂ ಕೂಡ ಪುರುಷ ಸಮಾಜದ ಲಿಂಗರಾಜಕಾರಣ ಎದ್ದುಕಾಣುತ್ತದೆ. ಪುರುಷನೊಬ್ಬ ಸ್ತ್ರೀಯನ್ನು ನಿಯಂತ್ರಿಸುವುದಕ್ಕೂ ನಿರ್ಬಂಧಿಸುವುದಕ್ಕೂ ಅದೇ ಸ್ತ್ರೀಯೊಬ್ಬಳು ಇಡೀ ಸ್ತ್ರೀ ಸಮಾಜವನ್ನೇ ಪುರುಷನ ಆಲೋಚನೆಗಳಿಗೆ ತಕ್ಕಂತೆ ನಿರ್ಮಿಸುವುದಕ್ಕೂ ತುಂಬಾ ವ್ಯತ್ಯಾಸಗಳಿವೆ.

'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಆದರೆ, ಕಲಿಯುವ ಹೆಣ್ಣು ಪುರುಷ ಸಮಾಜದ ಮೌಲ್ಯಗಳನ್ನೇ ತನ್ನದಾಗಿಸಿಕೊಂಡು ಮುಂದಿನ ಪೀಳಿಗೆಗೆ ವರ್ಗಾಹಿಸುವ ಶಿಕ್ಷಕಿಯಾಗಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಇಡೀ ಸಮಾಜದ ಯೋಚನೆಗಳನ್ನು ಪುರುಷನ ಹಿತದೃಷ್ಟಿಗೆ ನಿರ್ಮಿಸಿದಂತೆ ಕಂಡುಬರುತ್ತದೆ. ಹಾಗಾಗಿಯೇ ಅನುಭವ ಮಂಟಪವೂ ಕೂಡ ಶರಣೆಯರನ್ನು ಶರಣ ಸಮಾಜಕ್ಕೆ ಅನುಕೂಲವಾಗುವಂತೆ ಅವರ ಆಲೋಚನೆಗಳನ್ನು ಪುಣ್ಯಸ್ತ್ರೀ ಹಾಗೂ ಪರಮ ಪತಿವ್ರತೆಯ ಒಳಗಡೆ ಹುದುಗಿಸಿ ಬಿಟ್ಟಿರುತ್ತಾರೆ. ಹಾಗಾಗಿ ಸತ್ಯಕ್ಕ ಪರಧನ, ಪರಸ್ತ್ರೀ ಎಂದು ಹೇಳುವಾಗ ಸ್ತ್ರೀಯನ್ನೂ ಕೂಡ ಮತ್ತೆ ಸಂಪತ್ತಿನ ಹಾಗೂ ಒಡವೆಯ ದೃಷ್ಟಿಯಲ್ಲೇ ಕಾಣಲಾಗುತ್ತದೆ. ಶರಣೆಯೊಬ್ಬಳು ತನ್ನ ಆಲೋಚನೆಗಳನ್ನು ಇತರರ ಜತೆ ಚರ್ಚಿಸುವಾಗಲೂ ಪುರುಷ ದೃಷ್ಟಿಕೋನದಿಂದಲೇ ಗುರುತಿಸಿಕೊಂಡಿರುವುದು ಕಂಡುಬರುತ್ತದೆ.

ಈ ರೀತಿಯ ಪುರುಷ ನಿರ್ಮಿತ ಭಾಷೆ ನಿರ್ಮಾಣವಾಗಲು ಕಾರಣ ಬಹುಶಃ ಶರಣರಿಗೆ ಮುಖಂಡತ್ವಗುಣವಿದ್ದ ನಾಯಕನಾಗಿ ಬಸವಣ್ಣ, ಅಲ್ಲಮಪ್ರಭುರಂಥವರು ನಿಲ್ಲುತ್ತಾರೆ. ಆದರೆ, ಶರಣೆಯರಿಗೆ ಇಂಥ ನಾಯಕತ್ವವುಳ್ಳ, ಸ್ತ್ರೀ ಸಂವೇದನೆಯುಳ್ಳ ನಾಯಕಿ ದೊರೆಯಲಿಲ್ಲವೇನೋ? ಶರಣರ ಹೆಸರನ್ನು ಹೇಳಿದ ತಕ್ಷಣ, ಬಸವಣ್ಣನ ಹೆಸರು ನೆನಪಿಗೆ ಬರುವಂತೆ ಶರಣೆಯರ ಗುಂಪಲ್ಲಿ ಅಕ್ಕ ಮೊದಲಿಗಳಾಗಿ ನಿಲ್ಲುತ್ತಾಳೆ.[19] ಆದರೆ, ಈಕೆ ಶರಣಸತಿ ಲಿಂಗಪತಿ ಎಂಬುದನ್ನು ಒಪ್ಪಿಕೊಂಡು ಇಹದ ಗಂಡನಲ್ಲದಿದ್ದರೂ ಪರದ ಗಂಡನನ್ನು ಹುಡುಕ ಹೊರಟಳೇ ಹೊರತು ಸ್ತ್ರೀಯೊಬ್ಬಳ ನಿಜವಾದ ಸಂವೇದನೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮುಂದಾಗಲಿಲ್ಲ ಎನಿಸುತ್ತದೆ.

ಇಲ್ಲವಾದಲ್ಲಿ ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕಮ್ಮ, ಮುಕ್ತಾಯಕ್ಕ, ನಾಗಲಾಂಬಿಕೆ ಇಂಥವರ ವಚನಗಳು, ಅನುಭವಗಳು ಬಹುಶಃ ಕೆಳವರ್ಗದ ವಚನಕಾರ್ತಿಯರಿಗೆ ತಟ್ಟಬೇಕಿತ್ತು, ಆದರೆ ತಟ್ಟಲಿಲ್ಲವೆನಿಸುತ್ತದೆ. ಹಾಗಾಗಿಯೇ ಶರಣೆಯರು ತಮ್ಮದೊಂದು ಭಾಷೆಯನ್ನು ಕಟ್ಟಿಕೊಳ್ಳುವಲ್ಲಿ ಸೋತಂತೆ ಕಾಣುತ್ತಾರೆ. ಈ ರೀತಿ ಸೋತಂತೆ ಕಂಡರೂ ಕೂಡ ಸೋತ ಮೆಟ್ಟಿಲುಗಳಿಂದಲೇ ಅಂದರೆ, ಶರಣ ದೃಷ್ಟಿಕೋನದಿಂದಲೇ ಸ್ತ್ರೀ ಎಲ್ಲೋ ಒಂದು ಕಡೆ ತನ್ನ ಪರಿಧಿಯನ್ನು ಗುರುತಿಸಿಕೊಳ್ಳುವ ಸಣ್ಣ ಪ್ರಯತ್ನವಾದರೂ ಮಾಡಿದ್ದಾಳೆಂದು ಗ್ರಹಿಸಬಹುದು.

'ಮೊಲೆಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ; ಬಲ್ಲವರ ನೀತಿಯಲ್ಲ
ಏತರ ಹಣ್ಣಾದಡೂ ಮಧುರವೇ ಕಾರಣ
ಅಂಧವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕೇಶ್ವರಾ'[20]

ಎಂದು ಸತ್ಯಕ್ಕ ಗಂಡು ಹೆಣ್ಣೆಂಬ ಭೇದ ಈ ಜಗತ್ತು ನಿರ್ಮಿಸಿಕೊಂಡಿರುವ ಸೂತ್ರ. ಆದರೆ, ಬಲ್ಲವರು ದೈಹಿಕ ಲಕ್ಷಣ ನೋಡಿ ಅಳೆಯುವುದಿಲ್ಲ. ಬದಲಿಗೆ ಅವರ ಮಾನಸಿಕ ಸ್ಥೈರ್ಯವನ್ನು ನೋಡಿ ಮೆಚ್ಚುತ್ತಾರೆ ಎಂದು ಹೇಳುತ್ತಾ ಈ ಸ್ಥೈರ್ಯ ಸ್ತ್ರೀ-

ಪುರುಷರಿಬ್ಬರಿಗೂ ಕೂಡ ಸಮಾನವಾದದ್ದು ಎಂದು ಹೇಳುವುದರ ಜತೆಗೆ ಸ್ತ್ರೀವಾದದ ಮೊದಲ ಮೆಟ್ಟಿಲುಗಳನ್ನು ಹತ್ತುವ ಪ್ರಯತ್ನವನ್ನು ಮಾಡುತ್ತಾಳೆ.

ಇದೇ ರೀತಿ ಅಮುಗೆ ರಾಯಮ್ಮ

'ಮರುಜವಣಿಯ ಕಂಡವಂಗೆ ಮರಣದ ಹಂಗುಂಟೆ?
ಪರುಷ ಉಳ್ಳವಂಗೆ ಪಾಷಾಣದ ಹಂಗುಂಟೆ?
ಸರ್ವಾಂಗಲಿಂಗವಾದವಂಗೆ ಅನರ್ಪಿತ ಉಂಟೆ?
ಜ್ಯೋತಿಯ ಬೆಳಗಿನಲ್ಲಿದ್ದವಂಗೆ ಕತ್ತಲೆಯ ಹಂಗುಂಟೆ?
ಅಮುಗೇಶ್ವರಲಿಂಗವಾದವಂಗೆ ಲಿಂಗದ ಹಂಗುಂಟೆ?'[21]

ಎನ್ನುವಲ್ಲಿ ಸಂಜೀವಿನಿ ಕಡ್ಡಿ ಇದ್ದವನು ಜೀವಕ್ಕೆ ಹೆದರುವ ಆಗಿಲ್ಲ. ಹಾಗೆಯೇ ಸರ್ವ ಅಂಗಗಳು ಲಿಂಗವಾದಾಗ ಅನರ್ಪಿತ ಎಂಬ ಭಾವನೆ ಬೆಳೆಯಲು ಸಾಧ್ಯವಿಲ್ಲ. ಹಾಗಾಗಿ ಲಿಂಗವನ್ನು ಕೇವಲ ಲಿಂಗ ವ್ಯತ್ಯಾಸದಿಂದ ಕಾಣದೇ ಅದಾರಚೆಯ ದೈವವಾಗಿ ಕಾಣುವ ಮನೋಧರ್ಮ ಕಂಡುಬರುತ್ತದೆ. ಜತೆಗೆ ಹೆಣ್ಣೊಬ್ಬಳನ್ನು ಭೋಗಿಸುವ ಹಾಗೂ ಕಾಮಿಸುವ ದೃಷ್ಟಿಯಿಂದಲೇ ನೋಡುವ ಶ್ರೇಷ್ಠ ಜ್ಞಾನಿಗಳನ್ನು ರಾಯಮ್ಮ ಪ್ರಶ್ನಿಸುತ್ತಾಳೆ.

ಮಾಯಾ ಯೋನಿಯಲ್ಲಿ ಹುಟ್ಟುವ ಮರುಳರೆಲ್ಲರೂ
ಮಹಾಜ್ಞಾನಿಗಳಪ್ಪರೆ?
ಕಾಮವಿಕಾರಕ್ಕೆ ತಿರುಗುವ ಜೀವಗಳ್ಳರು
ಅನಾದಿ ವಸ್ತುಗಳನ್ನರಿವರೆ?
ಮಾತಿನಲ್ಲಿ ಮಹಾಜ್ಞಾನಿಗಳೆಂಬ ವೇಷಧಾರಿಗಳ ಕಂಡು
ನಾಚುವೆ ಕಾಣಾ ಅಮುಗೇಶ್ವರಾ[22]

ಈ ರೀತಿ ವೇಷಮರೆಸುವ ತನ್ನ ವ್ಯಕ್ತಿತ್ವದಲ್ಲೇ ಇಮ್ಮುಖಗಳನ್ನು ಒಳಗೊಂಡ ವ್ಯಕ್ತಿಗಳನ್ನು ಕಂಡು ನಾಚಿಕೆ ಪಡುತ್ತಾಳೆ. ಇಲ್ಲೆಲ್ಲಾ ನೋಡಿದಾಗ ಮನಸ್ಸಿನಲ್ಲಿರುವ ಯಾವುದೋ ಒಂದು ರೀತಿಯ ಸುಪ್ತ ಪ್ರಜ್ಞೆಯ ಈಡಿಪಸ್ ಆಲೋಚನೆಗಳನ್ನು ಧಿಕ್ಕರಿಸುತ್ತಾಳೆ. ಸಂಸಾರ ಎಂಬುದು ಕೇವಲ ಮಾಯೆ ಎಂದುಕೊಡು ಸಂಸಾರದಿಂದ ಮುಕ್ತಿ ಹೊಂದುತ್ತೇವೆ ಎಂದು ಹೊರಟು ಸನ್ಯಾಸಿಗಳಾದವರನ್ನು ಕುರಿತು

- ವಿರಕ್ತ ವಿರಕ್ತ ಎಂಬ ಹಾದಿಕಾರರ ವಿರಕ್ತರೆನ್ನಬಹುದೆ?
ಕಾವಿಯ ಹೊದ್ದು ತಿರುಗುವ ಜೀವಗಳ್ಳರು ವಿರಕ್ತರೆ?
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ವಿರಕ್ತರೆಂದಡೆ,
ಅಘೋರ ನರಕ ತಪ್ಪದು ಅಮುಗೇಶ್ವರಲಿಂಗವೆ.[23]

ಅಂಥವನು ತನ್ನನ್ನು ತಾನು ಮಾಹೇಶ್ವರ, ಶರಣ ಎಂಬ ಹೆಸರುಗಳಿಂದ ಗುರುತಿಸಿಕೊಂಡರೆ ಘೋರವಾದ ನರಕ ತಪ್ಪದು. ಹಾಗಾಗಿ ಇಹದ ಸಂಸಾರದ ಜಂಜಡದ ಜತೆಗೆ ಬದುಕದೇ ಸಂಸಾರದಿಂದ ವಿಮುಕ್ತಿ ಹೊಂದುವವನು ಶರಣನಲ್ಲ. ಅದರ ಜತೆ

ಜತೆಗೆ ಶಿವಾರ್ಪಿತವಾಗಿ ಬದುಕುವುದು ನಿಜವಾದ ಬದುಕು. ಹಾಗಾಗಿಯೇ ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ.

'ಸಿಂಹದ ಮರಿಯ, ಸೀಳ್ನಾಯ ಸರಿ ಎನಬಹುದೆ?
ವರಹ ಕುಕ್ಕುಟನ ಸರಿ ಎನಬಹುದೆ?
ಹೊನ್ನು ಹೆಣ್ಣು ಮಣ್ಣು ಹಿಡಿದು ಲಿಂಗೈಕ್ಯರೆನಿಸಿಕೊಂಬ ಅಜ್ಞಾನಿಗಳೆಲ್ಲರೂ
ಸೀಳ್ನಾಯಿಗಳೆಂಬೆನಯ್ಯಾ'[24]

ಎಂದು ಅಮುಗೆ ರಾಯಮ್ಮ ವೇಶಮರೆಸಿ ಸ್ತ್ರೀಯರನ್ನು ಗೌರವಿಸುವೆ ಎಂದು ಕಪಟವಾಡಿ ಮನದೊಳಗೆ ಮೋಹಿಸುವ ಅಜ್ಞಾನಿಗಳನ್ನು ನಿಜವಾದ ಶರಣನೆನ್ನದೇ ಸೀಳ್ನಾಯಿ ಎಂದು ಉಪಮೆ ಕೊಡುತ್ತಾಳೆ. ಸಿಂಹ ಯಾವಾಗಲೂ ರಾಜಾರೋಷವಾಗಿ ಬದುಕುವ ಪ್ರಾಣಿ, ಸೀಳ್ನಾಯಿಯಾದರೂ ತನ್ನನ್ನು ಆ ಮಟ್ಟಕ್ಕೆ ಗುರುತಿಸಿಕೊಳ್ಳಲಾಗದ ಉತ್ತರನ ಪೌರುಷ ಒಲೆಯ ಮುಂದೆ ಎನ್ನುವಂತೆ ಬದುಕುವ ಪ್ರಾಣಿ. ಹಾಗಾಗಿ ಶರಣ ಕೂಡ ಸಿಂಹದ ರೀತಿ ಇರಬೇಕೇ ಹೊರತು ಸೀಳ್ನಾಯಿಯ ಥರವಲ್ಲ ಎಂದಿದ್ದಾಳೆ.

ಅಕ್ಕಮ್ಮ ತನ್ನ ಒಂದು ವಚನದಲ್ಲಿ

'ಪಾಕಲವಣ ಬಿಟ್ಟಲ್ಲಿ ಪರವಧುವ ಅಪೇಕ್ಷಿಸಿ ಬೇಡಲಾಗದು.
ಅಪ್ಪು ಲವಣವ ಬಿಟ್ಟು ಸಪ್ಪೆಯ ಕೊಂಬಲ್ಲಿ ಉಚ್ಚೆಯ ಬಚ್ಚಲ
ಮುಟ್ಟಲಾಗದು.
ಉಚ್ಚೆಯ ಬಚ್ಚಲ ಬಿಟ್ಟಲ್ಲಿ ಮತ್ತೊಬ್ಬರ ಅಪ್ಪಾ, ಅಣ್ಣಾ ಎಂದು
ಬಾಗಿಲ ತಪ್ಪಲ ಕಾಯಲಾಗದು.
ಇಂತೀವ್ರತ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ತಪ್ಪದ ನೇಮ'[25]

ಎಂಬಲ್ಲಿ ಶರಣನ ನಿಜವಾದ ಆಚಾರ ನೇಮ, ನಿಷ್ಠೆ, ಎಂಥದ್ದು ಎಂದು ತಿಳಿಸುತ್ತಾಳೆ. ಹೀಗೆ ತಿಳಿಸುವಾಗ ಪಾಕ ಸಿಹಿಯಾದುದ್ದೇ ಆದರೂ ಕೂಡ ಲವಣವನ್ನು ಬಿಟ್ಟರೆ ಅಂದರೆ, ಸಿಹಿ ಕೂಡ ತನ್ನ ತನವನ್ನು ಬಿಟ್ಟುಕೊಟ್ಟರೂ ಶರಣನಾದವನು ಪರವಧುವನ್ನು ಅಪೇಕ್ಷಿಸಬಾರದು ಎಂದು ತಿಳಿಸುತ್ತಾಳೆ. ಒಂದು ವೇಳೆ ಬಯಸಿದರೆ, ಲವಣ ಪಾಕದಲ್ಲಿ ಕಡಿಮೆಯಾಯಿತೆಂದು ಉಚ್ಚೆಬಚ್ಚಲ ಮುಟ್ಟಿದಂತೆ ಎಂದು ಅಕ್ಕಮ್ಮ ವಿಶಿಷ್ಟ ಹೋಲಿಕೆಗಳನ್ನು ಕೊಡುತ್ತಾಳೆ.

'ಅನುಭಾವಿ ಅನುಭಾವಿಗಳೆಂಬ ಅಜ್ಞಾನಿಗಳ
ಮುಖವ ನೋಡಲಾಗದು.
ಕಂಗಳ ಮುಂದಣ ಕಾಮ, ಮನದಮುಂದಣ ಆಸೆ,
ಅಂಗದಲ್ಲಿ ಅಹಂಕಾರವಾಗಿಪ್ಪವರ ಅನುಭಾವಿಗಳೆಂಬೆನೆ?
ಸೂಳೆಯ ಮನೆಯಲ್ಲಿಪ್ಪ ಗವುಡಿಯಂತೆ
ತಮ್ಮ ತಮ್ಮ ಹಿರಿತನವ ಮುಂದುಗೊಂಡು
ಕುರಿಗಳಂತೆ ತಿರುಗುವ ಜಡರುಗಳ ಅನುಭಾವಿಗಳೆಂಬೆನೆ?

ಹತ್ತೈದ ಕೂಡಿಕೊಂಡು ಇಕ್ಕಿ ಎರೆವವರ ಮನೆಗೆ ಹೋಗಿ,
ಭಕ್ತಿ ಬಿನ್ನಹವ ಕೈಕೊಂಡಡೆ ಬೆಕ್ಕು ಹಾಲು ಕುಡಿದಂತೆ'.[26]

ಎಂಬ ವಚನದಲ್ಲಿ ಅನುಭಾವಿ ಎಂದು ಹೇಳಿಕೊಂಡು ತಿರುಗುವ ಆಷಾಢಭೂತಿಗಳನ್ನು ಅಮುಗೆ ರಾಯಮ್ಮ ಖಂಡಿಸಿದ್ದಾಳೆ. ಆಸೆ ಕಾಮಗಳನ್ನು ಹೊತ್ತು ತಿರುಗುವ ಭವಿಗಳ ಮುಖವನ್ನು ಕೂಡ ನೋಡಲಾಗದೆನ್ನುತ್ತಾಳೆ. ಹೀಗೆ ವಚನಕಾರ್ತಿಯರು ವಚನಗಳನ್ನು ರಚಿಸುವಾಗ ಮುಖ್ಯವಾಗಿ ಕಂಡುಬರುವುದು ಪುರುಷ ನಿರ್ಮಿತ ಭಾಷೆ. ಶರಣರ ಆಲೋಚನೆಗಳಿಂದ ಪ್ರೇರಿತರಾದ ಶರಣೆಯರು ಬಹುಶಃ ಶರಣರ ರೀತಿಯೇ ತಮ್ಮ ಆಲೋಚನಾ ಲಹರಿಯನ್ನು ರೂಢಿಸಿಕೊಂಡಿದ್ದಾರೆ.

ಇವರಲ್ಲಿ ಅಕ್ಕಮಹಾದೇವಿ ಮಾತ್ರ ಸ್ವಲ್ಪ ಭಿನ್ನವಾಗಿ ಹಾಗೂ ಪುರುಷ ನಿರ್ಮಿತ ಭಾಷೆಯಿಂದ ದೂರ ನಿಂತಂತೆ ಕಾಣಿಸುತ್ತಾಳೆ. ಈ ರೀತಿ ದೂರ ನಿಲ್ಲುವಿಕೆಗೆ ಕಾರಣ ಅಕ್ಕ ಶರಣೆಯಾಗುವುದಕ್ಕಿಂತ ಹೆಚ್ಚಾಗಿ ಒಬ್ಬ ಭಕ್ತೆಯಾಗಿ; ಚೆನ್ನಮಲ್ಲಿಕಾರ್ಜುನನ್ನು ಹುಡುಕುವ ಸಂತಳಾಗಿ ಕಂಡುಬರುತ್ತಾಳೆ. ಆದರೆ, ಅಕ್ಕನಂಥವಳೂ ಕೂಡ ತನ್ನ ವ್ಯಕ್ತಿತ್ವಗಳನ್ನು ತನ್ನ ಆಲೋಚನೆಗಳನ್ನು ಇತರರಿಗೆ ತಿಳಿಸಬೇಕಾದಲ್ಲಿ ಅನುಭವ ಮಂಟಪ ಪ್ರವೇಶಿಸಬೇಕಾದಲ್ಲಿ ಪುರುಷರಿಂದ ಶ್ರೇಷ್ಠತೆಯ ಓರಗೆ ಹಚ್ಚಿಸಿಕೊಳ್ಳಬೇಕಾಯಿತು.

ಆದರೆ, ಪುರುಷನ ಶ್ರೇಷ್ಠತೆಯ ಓರಗೆ ಹಚ್ಚಿಸಿಕೊಂಡರೂ; ಸೂಳೆ ಸಂಕವ್ವೆ, ಗೊಗ್ಗವ್ವೆ, ಲಕ್ಕಮ್ಮನಂಥವರ ಮೇಲೆ ಅಕ್ಕಮಹಾದೇವಿ ಚಿಂತನೆಗಳು ಪ್ರಭಾವ ಬೀರಿದಂತೆ ಕಾಣಿಸುವುದಿಲ್ಲ. ಸಬಿತಾರವರು ಹೇಳುವಂತೆ ಶರಣೆಯರಾಗಿ ಮಾರ್ಪಟ್ಟ ವಚನಕಾರ್ತಿಯರು ತಮ್ಮ ಈ ಹೊಸಮನೆಯನ್ನು ಸದಾ ಸ್ವಚ್ಛವಾಗಿ ಇಟ್ಟುಕೊಳ್ಳುವ ಕಾಳಜಿ ಇದ್ದಂತೆ ತೋರುತ್ತದೆ. ಅದಕ್ಕೆ ಶರಣರಾದವರು ಹೇಗಿರಬೇಕು? ನಿಜವಾದ ಶರಣ ಯಾರು? ನಿಜವಾದ ವ್ರತಿ ಯಾರು? ಎಂಬುದರ ಬಗೆಗೆ ಚಿಂತನೆಗಳಿವೆ. ಆದರೆ, ಇಂತಹ ಕಟ್ಟುಪಾಡುಗಳ ಬಗೆಗೆ ಅಕ್ಕನಿಗೆ ನಂಬಿಕೆ ಇರಲಿಲ್ಲವೆನಿಸತ್ತದೆ.

ಹಾಗಾಗಿ ಒಮ್ಮೆಯೂ ಕೂಡ ಪರಧನ, ಪರಧರ್ಮ, ಪರಸ್ತ್ರೀ ಎಂಬ ಮಾತುಗಳನ್ನು ಬಳಸುವುದಿಲ್ಲ. ಮೊದಲಿಗೆ ಪುರುಷ ನಿರ್ಮಿತ ಭಾಷೆಯೊಂದನ್ನು ಒಡೆಯುವ ಪ್ರಯತ್ನವನ್ನು ಅಕ್ಕಮಹಾದೇವಿ ಮಾಡಿದರೂ ಸಹ ಪುರುಷ ಸಮಾಜದ ಕಟ್ಟುಕಟ್ಟಳೆಗಳನ್ನು ಮೀರಲು ಸಾಧ್ಯವಾಗದೇ ನಿಂತು ಬಿಡುತ್ತಾಳೆ.

ಶರಣನಾದವನು ಸತಿಯಾಗಿ ಸ್ತ್ರೀಯತ್ವವನ್ನು ಆರೋಪಿಸಿಕೊಂಡು ಇಷ್ಟದೈವದಲ್ಲಿ ಪತಿಯನ್ನು ಕಾಣುವ ಮನೋಧರ್ಮವನ್ನು ಬೆಳೆಸಿಕೊಂಡಿರುತ್ತಾರೆ. ಆದರೆ, ಸ್ತ್ರೀಯಾದವಳು ಸ್ತ್ರೀಯತ್ವವನ್ನು ಆರೋಪಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಶರಣನಿಗಿಂತ ಶರಣೆಯರು ತಮ್ಮ ಭಾವನೆಗಳನ್ನು ತೊಡಕುಗಳನ್ನು ನೈಜವಾಗಿ ಚಿತ್ರಿಸುತ್ತಾರೆ.

ಅಕ್ಕಮಹಾದೇವಿ ಸಮಾಜ ನಿರ್ಮಿತ ವಿವಾಹವನ್ನು ದಿಕ್ಕರಿಸಿದರೂ, ಲೌಕಿಕ ಗಂಡನನ್ನು ಹೋಯ್ದು ಒಲೆಯೊಳಗೆ ಇಕ್ಕು ಎನ್ನುವ ಮನಸ್ಸಿದ್ದರೂ ಪಾರಮಾರ್ಥಿಕ ಗಂಡನನ್ನು ಒಪ್ಪಿಕೊಂಡವಳು. ಅಕ್ಕ ಎಂದಿಗೂ ತನಗೊಬ್ಬ ಸಂಗಾತಿ ಬೇಕು ಎಂಬುದನ್ನು

ನಿರಾಕರಿಸಿದವಳಲ್ಲ. ಆದರೆ, ಅಕ್ಕ ಇತರೆ ವಚನಕಾರ್ತಿಯರಿಗಿಂತ ಭಿನ್ನವಾಗಿ ನಿಲ್ಲುವುದು ಎಲ್ಲಿ ಎಂದರೆ, ಉಳಿದ ಶಿವಶರಣೆಯರು, ಗಂಡಂದಿರು ಶರಣರಾಗಿ ಮತಾಂತರಗೊಂಡಾಗ ಅದನ್ನೇ ಅನುಸರಿಸಿ ಶರಣೆಯಾದವರು.

ಪತಿ ಇಚ್ಛೆಯನ್ನೇ ತಮ್ಮಿಚ್ಛೆ ಮಾಡಿಕೊಂಡವರು; ಇದು ಶರಣೆಯರಿಗೆ ಸುಲಭದ ಮಾರ್ಗ. ಗಂಡನನ್ನು ಅನುಸರಿಸುವ ಹೆಂಡತಿಗೆ ಸಮಾಜದಿಂದಾಗಲಿ, ಕುಟುಂಬದಿಂದಾಗಲಿ ವಿರೋಧವಿಲ್ಲ. ಆದರೆ, ಅಕ್ಕ ಮಾತ್ರ ಗಂಡ, ಕುಟುಂಬ, ತಂದೆ-ತಾಯಿ ಎಲ್ಲವನ್ನು ತನ್ನ ಚೆನ್ನಮಲ್ಲಿಕಾರ್ಜುನನಿಗಾಗಿ ದಿಕ್ಕರಿಸಿ ಬಂದವಳು. ಇಲ್ಲಿ ಅಕ್ಕ ರಾಧೆಗಿಂತ ವಿಶೇಷವಾಗಿ, ಮೀರಾಳಿಗಿಂತ ಭಿನ್ನವಾಗಿ ಏನೂ ಕೂಡ ಕಾಣುವುದಿಲ್ಲ.

ಶರಣರೆಲ್ಲರೂ ಕೂಡ ಬಹುಶಃ ವಿವಾಹಿತರೆ, ಬಸವಣ್ಣ, ದಾಸಿಮಯ್ಯ, ಆಯ್ದಕ್ಕಿ ಮಾರಯ್ಯ ಸೇರಿದಂತೆ ಯಾರೂ ಕೂಡ ಸಂಸಾರ ಬಂಧನದಿಂದ ಮುಕ್ತರಾದವರೇನಲ್ಲ. ಸಂಸಾರದ ಜತೆಜತೆಗೆ ಎಷ್ಟೇ ಅತೃಪ್ತಿ ಇದ್ದರೂ ಮುಕ್ತಿ ಪಡೆಯಲು ಹೆಣಗಿದವರು. ಆದರೆ, ಶರಣೆಯರು ಮಾತ್ರ ಎರಡು ಮಾರ್ಗಗಳನ್ನು ಕಂಡುಕೊಂಡರು. ಒಂದನೆಯ ಮಾರ್ಗ ಪುರುಷನೊಬ್ಬ ಶರಣನಾದರೆ, ಆತನ ಹೆಂಡತಿಯೂ ಕೂಡ ತನ್ನ ಗಂಡನ ದಾರಿಯನ್ನೇ ಹಿಡಿದು, ಅದೇ ಮಾರ್ಗದಲ್ಲಿ ನಡೆದು ಹೂವಿನ ಜತೆ ನಾರು ಸ್ವರ್ಗ ಸೇರಿದಂತೆ ಇದ್ದುಬಿಡುವುದು.

ಇಲ್ಲವಾದಲ್ಲಿ ಎರಡನೇ ಮಾರ್ಗವಾದ ಇಹದ ಪತಿಯ ಸಂಗವನ್ನು ತ್ಯಜಿಸಿ ಪರದ ಗಂಡನನ್ನು ಕೂಡಲು ತವಕಿಸುವುದು. ಈ ರೀತಿ ತವಕಕ್ಕೆ ಒಳಗಾದ ಸ್ತ್ರೀಯರು ಅಥವಾ ಶರಣೆಯರು ಕೃಷ್ಣನನ್ನು ಹುಡುಕುವ ಮೀರಾಳ ರೀತಿಯೇ ಕಾಣಿಸುತ್ತಾರೆ. ಮೀರಾಳಂತಯೇ ತವಕಿಸುವ ಶರಣೆಯರು ಇಹದ ಗಂಡನ ಮೇಲಿನ ಪ್ರೀತಿಯನ್ನೇ ಪರದ ಗಂಡನ ಮೇಲೆಯೂ ವ್ಯಕ್ತಪಡಿಸಿದ ರೀತಿ ಕಾಣಿಸುತ್ತದೆ. ಇಲ್ಲಿಯೂ ಕೂಡ ಪುರುಷ ನಿರ್ಮಿಸಿಕೊಂಡ ಸೀತೆ, ಸಾವಿತ್ರಿಯಂತೆ 'ರಾಧೆ'ಯೊಬ್ಬಳ ವ್ಯಕ್ತಿತ್ವ ಕಾಣಿಸುತ್ತದೆ.

ಅಂದರೆ 'ಹೆಣ್ಣು ಬಾಲ್ಯದಲ್ಲಿ ತಂದೆಯಿಂದಲೂ, ಯೌವ್ವನದಲ್ಲಿ ಪತಿಯಿಂದಲೂ, ಮುಪ್ಪಿನಲ್ಲಿ ಮಗನಿಂದಲೂ ರಕ್ಷಿಸಲ್ಪಡಬೇಕು. ನಿಜವಾಗಿಯೂ ಅವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ'. ಎಂಬ ಮನುವಿನ ಪ್ರಸಿದ್ಧ ಹೇಳಿಕೆಯಂತೆ ಶರಣೆಯರೇನು ಭಿನ್ನವಾಗಿ ಬದುಕಿದಂತೆ ಕಾಣುವುದಿಲ್ಲ. ಆದರೆ, ಅಕ್ಕನಂಥವಳು ಪುರುಷನ ಹಿಡಿತಕ್ಕೆ ಸಿಲುಕದೆ, ಚಿಕ್ಕ ವಯಸ್ಸಿನಲ್ಲೇ ದೇವರಿಗೆ ಅರ್ಪಿತಳಾಗುತ್ತಾಳೆ. ದೇವರೇ ಅವಳ ಮೊದಲ ಪ್ರೇಮಿ. ಮೇಲು ಜಾತಿಯ ಶರಣರೆಲ್ಲರಿಗೂ ಕೂಡ ಧಮನಕ್ಕೆ ಒಳಗಾದ ದಲಿತ ಸಮಾಜವೊಂದನ್ನು ಉದ್ಧರಿಸುವ ದೃಷ್ಟಿಕೋನವಿತ್ತೇ ಹೊರತು ಅದರಾಚೆಗೆ ಸ್ತ್ರೀಯರನ್ನು ಉದ್ಧರಿಸುವ ದೃಷ್ಟಿ ಇದ್ದಂತೆ ಕಾಣುವುದಿಲ್ಲ.

ಈ ಹಂತದಲ್ಲಿ ಹೆಚ್ಚು ಕಡಿಮೆ ಎಲ್ಲಾ ಮಹಿಳಾ ಸಂತರು ಮಹಾದೇವಿ, ಅಲ್ಲಮನಿಂದ ಪಡೆದಂತೆ, ಪುರುಷ ಗುರುವೊಬ್ಬನಿಂದ ಪ್ರಶ್ನಿತರಾಗುತ್ತಾರೆ ಮತ್ತು ಪರೀಕ್ಷಿತರಾಗುತ್ತಾರೆ. ಅಲ್ಲದೆ, ದೀಕ್ಷೆಯನ್ನು ಪಡೆಯುತ್ತಾರೆ. ಇದು ಪರಂಪರಾಗತ ಸಾಮಾನ್ಯವಾಗಿರುವ ಹಿಂದೂ ಮಾದರಿಗೆ ಒಂದು ರಿಯಾಯ್ತಿಯಾಗಿರುವಂತಿದೆ. ಸುಪ್ರಸಿದ್ಧವಾಗಿರುವ ಆಧುನಿಕ

ಭಾರತೀಯರ ಮಹಿಳೆಯರ ಬದುಕಿನಲ್ಲೂ ಅವರ ಸಾರ್ವಜನಿಕ ಬದುಕಿನ ಮಾರ್ಗದರ್ಶಕರು ಮತ್ತು ಅವರನ್ನು ಸಾರ್ವಜನಿಕ ಬದುಕಿನಲ್ಲಿ ತೊಡಗಿಸಿದವರು ಪುರುಷರೇ ಅಲ್ಲದೆ, ಅವರ ಅಸಾಮಾನ್ಯ ಪಾತ್ರವನ್ನು ಕಾನೂನು ಬದ್ಧಗೊಳಿಸಿದವರೂ ಅವರೇ ಆಗಿದ್ದಾರೆ[27] ಎಂಬ ರಾಮಾನುಜಂರವರ ಮಾತುಗಳನ್ನು ಒಪ್ಪಬಹುದಾಗಿದೆ.

ಆದರೆ, ಈಗಾಗಲೇ ಹಲವರು ಗುರುತಿಸಿರುವಂತೆ ಶಿವಶರಣರ ಧರ್ಮದ ಕ್ರಾಂತಿಯ ಸಂದರ್ಭದಲ್ಲಿ ಅದ್ಭುತವೆಂಬಂತೆ ಬದುಕಿದ್ದ ಏಕಾಂಗ ಸಾಹಸಿಯಾದ ಅಕ್ಕನನ್ನು ಕುರಿತು ಅವಳ ಸಮಕಾಲೀನರಾದ 30ಕ್ಕೂ ಹೆಚ್ಚು ವಚನಕಾರ್ತಿಯರು ಮೌನವಾಗಿದ್ದಿದ್ದು, ಏಕೆ ಎಂಬುದು ಅನೇಕ ಪ್ರಶ್ನೆಗಳಿಗೆ ಎಡೆಮಾಡಿ ಕೊಡುತ್ತದೆ ಎಂದು ಪ್ರಶ್ನಿಸುವ ಎಚ್.ಜೆ.ಸರಸ್ವತಿಯವರು ವಚನಕಾರ್ತಿಯರನ್ನು ಮತ್ತೆ ಮೇಲ್ವರ್ಗ ಹಾಗೂ ಕೆಳವರ್ಗದ ವಚನಕಾರ್ತಿಯರು ಎಂದು ಗುರುತಿಸಿಕೊಳ್ಳುತ್ತಾರೆ.

ಹಾಗೆ ಗುರುತಿಸಿಕೊಳ್ಳುವಿಕೆಯಲ್ಲಿ ಮೇಲ್ವರ್ಗದ ವಚನಕಾರ್ತಿಯರು ತಮ್ಮ ವೈಯಕ್ತಿಕ ನೆಲೆಯ ಸಮಸ್ಯೆಗಳನಷ್ಟೇ ಗುರುತಿಸಿಕೊಳ್ಳುತ್ತಾರೆಯೇ ವಿನಃ ಸಾಮಾಜಿಕ ಸಮಸ್ಯೆಗಳ ಬಗೆಗೆ ಚಿಂತಿಸುವುದಿಲ್ಲ. ಆದರೆ, ಕೆಳವರ್ಗದ ವಚನಕಾರ್ತಿಯರು ತಮ್ಮ ಸಮಸ್ಯೆಗಳಲ್ಲದೆ, ಇಡೀ ಒಂದು ವರ್ಗದ ಚಿಂತನೆಗಳನ್ನು ವಚನಗಳಲ್ಲಿ ಮೇಳೈಸುತ್ತಾರೆ. ಉದಾಹರಣೆಗೆ ಸೂಳೆ ಸಂಕವ್ವನ ವಚನದಲ್ಲಿ

> 'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ,
> ಹಿಡಿದಡೆ ಬತ್ತಲೆ ನಿಲ್ಲಿಸಿ ಕೊಲುವರಯ್ಯಾ
> ವ್ರತಹೀನನರಿದು ಬೆರೆದಡೆ
> ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ
> ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ'[28]

ಎಂಬಲ್ಲಿ ಮನವ ತುಂಬಿಕೊಂಡಿರುವ ಭಯ ಇಡೀ ಕಾಯಕನಿಷ್ಠೆಯನ್ನು ಅಲುಗಾಡಿಸಿದಂತೆ ಕಾಣುತ್ತದೆ. ಆದರೆ, ಮೇಲ್ವರ್ಗದ ವಚನಕಾರ್ತಿಯರಿಗೆ ಈ ರೀತಿಯ ಕಾಯಕನಿಷ್ಠೆಯಾಗಲಿ, ಅಥವಾ ಲೌಕಿಕ ಅಡೆತಡೆಗಳಾಗಲಿ ಗೌಣವಾಗಿ ಕಾಣಿಸುತ್ತವೆ.

'ಪುಣ್ಯಸ್ತ್ರೀ' ಎಂಬ ವಿಶೇಷಣದಿಂದ ಗುರುತಿಸಿಕೊಳ್ಳುವ ಶರಣೆಯರಲ್ಲಿ ಪರಮ ಪತಿವ್ರತೆ ಎನಿಸಿಕೊಳ್ಳುವ ಮನೋಭಾವವಿದೆಯೋ ಅಥವಾ ತಮ್ಮ ಹೆಸರನ್ನು ಗುರುತಿಸಿಕೊಳ್ಳಲಿಕ್ಕೆ ಆಗದೇ ಇರುವ ಒಂದು ಸಾಮಾಜಿಕ ನಿರ್ಬಂಧವೋ ತಿಳಿಯದು. ಇರುವ ಸಂದರ್ಭದಲ್ಲೇ ಪುಣ್ಯಸ್ತ್ರೀ ಎಂಬ ವಿಶೇಷವಾದರೂ ಬಾಯಿ ತೆರೆಸಿದೆ. ಆದರೆ, ಪುಣ್ಯಸ್ತ್ರೀ ಎಂಬ ವಿಶೇಷವಿದ್ದಾಕ್ಷಣ ಆಕೆಯನ್ನು ಶರಣರು ಪಾರ್ವತಿ ಎಂದು ಕಾಣಲು ತಿಳಿಸುತ್ತಾರೆ. ಈ ರೀತಿ ಗುರುತಿಸಿಕೊಳ್ಳುವಿಕೆ ಭಕ್ತಿ ಎಲ್ಲವೂ ಕೂಡ ಮನಸ್ಸಿನ ಒಳಗೆ ಕಾಡುವ ಸ್ತ್ರೀಯ ಮಾಯಾ ಸ್ವರೂಪದಿಂದ ವಿಮುಕ್ತರಾಗಲಿಕ್ಕೆ ಇರಬಹುದು.

> 'ಗಂಡುಳ್ಳಮ್ಮನ ಗೌರಿ ಎಂದು ಕಂಡರೆ
> ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತ' ಎಂಬಲ್ಲಿ ಹಾಗೂ

'ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದಡೆ
ಅವರರಸಿಯರ ಪಾರ್ವತಿ ಸರಿ ಎಂದು ಕಾಣಬೇಕು'[29]

ಎಂದು ಜೇಡರದಾಸಿಮಯ್ಯ ತನ್ನ ವಚನದಲ್ಲಿ ಹೇಳುವಾಗ ಮನದೊಳಗಿನ ಆಸೆಯನ್ನು ಹಾಗೂ ಮೃಗತ್ವವನ್ನು ಸಂಹರಿಸಲು ಕಂಡುಕೊಂಡ ವಿಭಿನ್ನ ಮಾರ್ಗವಾಗಿದೆ. ಛಲ ಬೇಕು ಶರಣಂಗೆ ಪರಸತಿಯನ್ನೊಲ್ಲೆ ಎಂಬ ಮನೋಧರ್ಮವನ್ನು ರೂಢಿಸಿಕೊಳ್ಳುವಾಗ ಪರಸತಿಯ ವ್ಯಾಮೋಹ ಬಿಡದಿದ್ದಾಗ ಶರಣನೊಬ್ಬ ತನ್ನ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಬಗ್ಗೆ ಬಸವಣ್ಣ ತಿಳಿಸುತ್ತಾರೆ.

ಶರಣನಾದವನು ಕೆಲವು ಗುಣಗಳನ್ನು ಪ್ರಜ್ಞಾಪೂರಕವಾಗಿಯೂ ಕೂಡ ರೂಢಿಸಿಕೊಳ್ಳಬೇಕಾಗುತ್ತದೆ. ಆ ಅಂಶಗಳನ್ನು ತಿಳಿಸುವಾಗ 'ಶಿವಲಿಂಗ ನೋಡುವ ಕಣ್ಣಿನಲ್ಲಿ ಪರಸ್ತ್ರೀಯ ನೋಡಿದರೆ ಅಲ್ಲಿ ಲಿಂಗವಿಲ್ಲ'[30]-ಎಂಬ ಚೆನ್ನಬಸವಣ್ಣನ ವಚನ ಇಡೀ ಶರಣ ಸಮುದಾಯವನ್ನೇ ಎಚ್ಚರಿಸುತ್ತದೆ. ತನ್ನ ಹೆಸರನ್ನು ಸೂಚಿಸದೆ ಕೇವಲ ಪುಣ್ಯಸ್ತ್ರೀಯಾಗಿಯೇ ಗುರುತಿಸಿಕೊಂಡಿರುವಂಥ ಗಜೇಶಮಸಣ್ಣಯ್ಯಗಳ ಪುಣ್ಯಸ್ತ್ರೀ

'ಹೊನ್ನಬಿಟ್ಟು ಲಿಂಗವನ್ನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಹೆಣ್ಣಬಿಟ್ಟು ಲಿಂಗವನ್ನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?'[31]

ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ಹೆಣ್ಣು, ಹೊನ್ನು, ಮಣ್ಣುಗಳು ಮಾಯೆ ಎನ್ನುವ ಪುರುಷ ಚಿಂತನೆಗೆ ಪ್ರಶ್ನಿತಳಾಗಿ ನಿಲ್ಲುತ್ತಾಳೆ. 'ಹೆಣ್ಣು ಹೆಣ್ಣಾದರೆ ಗಂಡಿಗೆ ಮಾಯೆ' ಎಂದ ಅಕ್ಕಮಹಾದೇವಿಯ ನಿಲುವಿಗಿಂತ ಗಜೇಶಮಸಣ್ಣಯ್ಯಗಳ ಪುಣ್ಯಸ್ತ್ರೀಯ ನಿಲುವು ಭಿನ್ನವಾಗಿ ನಿಲ್ಲುತ್ತದೆ. ಅಕ್ಕಮಹಾದೇವಿ ಇಲ್ಲಿ ಪುರುಷ ಚಿಂತನೆಗಳನ್ನು ಒಪ್ಪಿಕೊಂಡರೆ, ಗಜೇಶಮಸಣ್ಣಯ್ಯಗಳ ಪುಣ್ಯಸ್ತ್ರೀ ಆ ಪುರುಷ ಚಿಂತನೆಗಳನ್ನು ಪ್ರಶ್ನಿಸುತ್ತಾಳೆ.

ಒಟ್ಟಿನಲ್ಲಿ ಬಸವಣ್ಣನವರು ಪ್ರತಿಪಾದಿಸಿದ ಧರ್ಮದಲ್ಲಿ ಎರಡು ಜಾತಿಗಳನ್ನು ವಿಂಗಡಿಸಿಕೊಳ್ಳಬಹುದು. ಒಂದು ಭವಿ. ಇನ್ನೊಂದು ಭಕ್ತ. ಭವಿ-ಭಕ್ತ ಸಂಬಂಧದ ಹಿನ್ನೆಲೆಯಲ್ಲೇ ಬೇಕು-ಬೇಡ ನಿರ್ಣಯವಾಗುತ್ತದೆ. ಭಕ್ತನಲ್ಲದವನು ಶರಣರ ಪ್ರಕಾರ ಭವಿಯೆನಿಸಿಕೊಳ್ಳುತ್ತಾನೆ. ಹೆಣ್ಣಾಗಲಿ, ಗಂಡಾಗಲಿ; ಅಂತರಂಗದ ಶುದ್ಧಿ, ಕಾಯಕನಿಷ್ಠೆಗಳು ಕಡ್ಡಾಯವಾಗಿರಬೇಕು.

ಇಷ್ಟೆಲ್ಲದರ ಜತೆಗೆ ಹೆಣ್ಣನ್ನು ಪುರುಷನ ಜತೆ ಸಮೀಕರಿಸಿದರೂ ಸಹ ಶರಣರಾಡುವ ಮಾತುಗಳೆಲ್ಲಾ ಬಹುಶಃ ಆಧ್ಯಾತ್ಮಿಕ ಚೌಕಟ್ಟಿನೊಳಗೆ ಸೀಮಿತಗೊಂಡಂತೆ ಕಾಣುತ್ತವೆ. ಆದರೆ, ಸಾಮಾಜಿಕ ಸುಧಾರಣಾ ಮನೋಭಾವದಿಂದ, ಸಾಮಾಜಿಕ ಸ್ವಾತಂತ್ರ್ಯ, ಸಮಾನತೆ ಮತ್ತು ಶಿಕ್ಷಣಕ್ಕಾಗಿ ಹೋರಾಡಿದ ಬಾಲ್ಯ ವಿವಾಹ, ವೈದವ್ಯ, ಸತಿಪದ್ಧತಿ ಇತ್ಯಾದಿಗಳ ನಿರ್ಮೂಲನಕ್ಕಾಗಿ ಚಳುವಳಿ ಮಾಡಿದವರಲ್ಲ. ಸಾಮಾಜಿಕ ಅನಿಷ್ಟ ಕಾರ್ಯಗಳ ಕಪಿಮುಷ್ಠಿಯಲ್ಲಿ ಸಿಲುಕಿ ನರಳಿ ಸವೆಯುತ್ತಿದ್ದ ಹೆಣ್ಣು ಸಮುದಾಯದ ಬಗೆಗೆ ನಿಜವಾದ ಕಾಳಜಿಯಿಂದ ದನಿ ಎತ್ತಿದಂತೆ ಕಾಣುವುದಿಲ್ಲ. ಭಕ್ತಿ ಸಾಧನೆ, ಆಧ್ಯಾತ್ಮಿಕ ಚರ್ಚೆಗಳಿಗೆ

ಅನುಭಾವ ಗೋಷ್ಠಿಯಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಕೊಡುವಾಗಲೂ ಶರಣರಿಂದ ಪರೀಕ್ಷಿಸಲ್ಪಡಬೇಕಾಗಿತ್ತು.

ಅಡಿಟಿಪ್ಪಣಿ

1. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–25
2. ಅದೇ, ಪುಟ–22
3. ಅದೇ, ಪುಟ–247, ವಚನ–779(6)
4. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ: ಸಂಪುಟ–11: ಚರಿತ್ರ ಸಾಹಿತ್ಯ:2, ಸಂ: ಡಾ. ಎಂ.ಎಸ್.ಮದಭಾವಿ, ಮುದ್ರಣ–2007, ಪುಟ–156–157
5. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–56
6. ಅದೇ, ಪುಟ–246, ವಚನ–776(3)
7. ಅದೇ, ಪುಟ–246, ವಚನ–776(3)
8. ವಚನ ಧರ್ಮಸಾರ– ಎಂ.ಆರ್.ಶ್ರೀನಿವಾಸಮೂರ್ತಿ ಬಿ.ಎ., ಮುದ್ರಣ: 1977, ಪ್ರಸಾರಂಗ, ಮೈಸೂರು, ಪುಟ–44
9. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–193, ವಚನ–614(26)
10. ಅದೇ, ಪುಟ–193, ವಚನ–614(26)
11. ಅದೇ, ಪುಟ–193, ವಚನ–614(26)
12. ವಚನ ಧರ್ಮಸಾರ– ಎಂ.ಆರ್.ಶ್ರೀನಿವಾಸಮೂರ್ತಿ ಬಿ.ಎ., ಮುದ್ರಣ: 1977, ಪ್ರಸಾರಂಗ, ಮೈಸೂರು, ಪುಟ–44
13. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–23–24
14. ಅದೇ, ಪುಟ–23
15. ವಚನ ಧರ್ಮಸಾರ– ಎಂ.ಆರ್.ಶ್ರೀನಿವಾಸಮೂರ್ತಿ ಬಿ.ಎ., ಮುದ್ರಣ: 1977, ಪ್ರಸಾರಂಗ, ಮೈಸೂರು, ಪುಟ–44
16. ಅದೇ, ಪುಟ–107
17. ಅದೇ, ಪುಟ–118
18. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–26
19. ಅದೇ, ಪುಟ–33
20. ಅದೇ, ಪುಟ–370–371, ವಚನ–1228(23)
21. ಅದೇ, ಪುಟ–210, ವಚನ–677(89)
22. ಅದೇ, ಪುಟ–211, ವಚನ–678(90)
23. ಅದೇ, ಪುಟ–212, ವಚನ–685(97)
24. ಅದೇ, ಪುಟ–216, ವಚನ–298(110)

25. ಅದೇ, ಪುಟ–163, ವಚನ–524(90)
26. ಅದೇ, ಪುಟ–187, ವಚನ–593(5)
27. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್ ತರೀಕೆರೆ, ಪುಟ–146
28. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–374, ವಚನ–1234(1)
29. ಅದೇ, ಪುಟ–27
30. ಅದೇ, ಪುಟ–28
31. ಅದೇ, ಪುಟ–244, ವಚನ–771(10)

ಅಧ್ಯಾಯ-4

ವಚನಕಾರ್ತಿಯರ ಸಾಮಾಜಿಕ ಚಿಂತನೆ

ಹನ್ನೇರಡನೇ ಶತಮಾನದಲ್ಲಿ ಉಂಟಾದ ಕಲ್ಯಾಣದ ಕ್ರಾಂತಿ, ಸಮಾಜೋ-ಧಾರ್ಮಿಕ ಕ್ರಾಂತಿ ಹಾಗೂ ಹೋರಾಟವಾಗಿದ್ದಿತು. ಸಮಾಜದಲ್ಲಿ ಬೇರೂರಿದ್ದ ಜಾತಿ ಪದ್ಧತಿ, ಲಿಂಗಭೇದಗಳ ಅಸಮಾನ ನೆಲೆಗಳನ್ನು ಸುಧಾರಿಸುವುದಕ್ಕಾಗಿ ಉಂಟಾದ ಕ್ರಾಂತಿಯಾಗಿದೆ. ಜಾತಿ ವ್ಯವಸ್ಥೆಯನ್ನು ತೊಡೆದು ಹಾಕಲು; ಹೊಸ ಸಮಾಜವೊಂದನ್ನು ನಿರ್ಮಿಸಲು ಹಾಗೂ ಆ ಸಮಾಜದಲ್ಲಿ ಜಾತಿ ವ್ಯವಸ್ಥೆ ತಲೆ ಹಾಕದಿರಲು 'ಕೊಲುವವನೆ ಮಾದಿಗ, ಹೊಲಸು ತಿಂಬುವವನೇ ಹೊಲೆಯ' ಎಂಬ ಹೊಸ ಆಚಾರ ಸಂಹಿತೆಗಳನ್ನು ರೂಪಿಸುತ್ತಾರೆ.

ಭಾರತದ ಪರಂಪರಾಗತ ವ್ಯವಸ್ಥೆಯಲ್ಲಿ ಪ್ರಬಲವಾದ ಅಸಮಾನತೆ ನೆಲೆಗಳು ಜಾತಿ ಪದ್ಧತಿ ಮತ್ತು ಸ್ತ್ರೀಯರನ್ನು ಕುರಿತ ಭೇದ-ಭಾವಗಳಿಗೆ ಸಂಬಂಧಿಸಿದಂಥವು. ಈ ಎರಡರಲ್ಲಿ ಜಾತಿ ಪದ್ಧತಿಯನ್ನು ಪರಿಷ್ಕರಿಸಿ ಸುಧಾರಿಸಲು ಶಿವಶರಣರು ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳ ಎರಡರಲ್ಲೂ ಹೊಸ ನೆಲೆಗಳನ್ನು ರೂಪಿಸಲು ಯತ್ನಿಸಿದರು[1]. ಇದು ಅಲ್ಲದೆ ವೃತ್ತಿ ಎಂಬುದು ಜಾತಿಯ ಜತೆಗೆ ಸಮೀಕರಿಸಿಕೊಂಡಿದ್ದಾಗ ಆ ವೃತ್ತಿಯನ್ನು ಕಾಯಕದ ಮಟ್ಟಕ್ಕೆ ಏರಿಸಿ ಜಾತಿಯಾಚೆಗಿನ ದೃಷ್ಟಿಯಿಂದ ನೋಡುವ ಮನೋಭಾವವನ್ನು ಹಾಗೂ 'ದೇವನೊಬ್ಬ ನಾಮ ಹಲವು' ಎಂಬಂತೆ ಯಾವುದೇ ವೃತ್ತಿಯಾದರೂ ಕೂಡ ಒಂದೇ ನೆಲೆಗಟ್ಟಿನಲ್ಲಿ ನೋಡುವ ದೃಷ್ಟಿಕೋನವನ್ನು ಬೆಳಸಿಕೊಳ್ಳುತ್ತಾರೆ.

ಶರಣರಾಗುವುದಕ್ಕೆ ಮೊದಲು ಯಾವ ವೃತ್ತಿಯನ್ನು ಅನುಸರಿಸುತ್ತಿದ್ದರೋ ಶರಣರಾದ ಮೇಲೂ ಕೂಡ ಅದೇ ವೃತ್ತಿಯನ್ನು ಅನುಸರಿಸುವ ಆದರೆ, ಆ ವೃತ್ತಿಗೆ ಅಂಟಿದ್ದ ಕಳಂಕವನ್ನು ಕಳೆದುಕೊಂಡು ಆತ್ಮವಿಶ್ವಾಸದಿಂದ ಆ ಕಾಯಕದಿಂದಲೇ ಭಕ್ತಿ ಸಾಧನೆಗೆ ತೊಡಗುವುದು ಸಾಧ್ಯವಾಯಿತು. ಆದರೆ, ಇವರ ಈ ಸಾಮಾಜಿಕ ಪರಿವರ್ತನೆಯಿಂದಾಗಿ ಅಥವಾ ಹೊಸ ಸಮಾಜವೊಂದರ ಸೃಷ್ಟಿಯಿಂದಾಗಿ ಸಾಮಾಜಿಕ, ಆರ್ಥಿಕವಾದ ಸ್ತರಗಳಲ್ಲಿ ಯಾವುದೇ ಬದಲಾವಣೆಗಳಾದಂತೆ ಕಾಣಿಸುವುದಿಲ್ಲ. ಹೀಗಾಗಿ ಜಾತಿ-ವೃತ್ತಿ-ಅಂತಸ್ತುಗಳ ರೂಢೀಗತ ಶ್ರೇಣೀಕರಣವನ್ನು ಕಾಯಕತತ್ವದ ಹೊಸ ಜೀವನಕ್ರಮವು ಬುಡಮೇಲು ಮಾಡಲಿಲ್ಲ.

ಜಾತಿ ಅಸಮಾನತೆಯ ನಿರ್ವಹಣೆಯಲ್ಲಿ ಶಿವಶರಣರ ಆಂದೋಲನದಲ್ಲಿ ಬರುವ ಪ್ರಗತಿಪರತೆ, ಸಂದಿಗ್ಧತೆ, ಸಂಪ್ರದಾಯ ಶರಣತೆಯ ಸಂಕೀರ್ಣ ಅಂಶಗಳನ್ನು ಸ್ತ್ರೀ ಅಥವಾ ಶರಣೆಯರ ವಿಚಾರದಲ್ಲೂ ಕಾಣಬಹುದು. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಭೋಗವಸ್ತುವೆಂದು ಮಾತ್ರ ಕಾಣಲು ಕಾರಣವಾಗಿದ್ದ ಆರ್ಥಿಕ, ಸಾಮಾಜಿಕ ಕಾರಣಗಳನ್ನು ಕಂಡು ನಿವಾರಿಸುವಂತಹ ವಿಚಾರಗಳು ಕಂಡುಬರಲಿಲ್ಲ. ಬಹುಶಃ ಇದಕ್ಕೆ ಕಾರಣ ಭಕ್ತಿ ಮತ್ತು ಮೋಕ್ಷವನ್ನೇ ಕೇಂದ್ರವಾಗಿಟ್ಟುಕೊಂಡಿದ್ದಂಥ ಶರಣಯುಗಕ್ಕೆ ಸಿಲುಕಲಿಲ್ಲವೇನೊ? ಪಿ.ವಿ.ನಾರಾಯಣರವರು, ತಮ್ಮ ಪೂರ್ವೋಕ್ತದಲ್ಲಿ ಮತಕ್ಕೆ ಹೊರತಾದ ನೆಲೆಗಳಲ್ಲಿ ಸ್ತ್ರೀಯರು ಎದುರಿಸುತ್ತಿದ್ದ ನೂರಾರು ಬಗೆಯ ಸಂಕಷ್ಟಗಳ ಬಗ್ಗೆ ಯಾವುದೇ ಸಾಮಾಜಿಕ ಕಾರ್ಯಕ್ರಮ, ಪರಿಹಾರಗಳು ವಚನಯುಗದಲ್ಲಿದ್ದುದು ಅನುಮಾನದ ಸಂಗತಿ ಎಂದು

ಹೇಳುತ್ತಾರೆ. ವಚನಯುಗದಲ್ಲಿ ಹುಟ್ಟಿಬಂದ ಮಹಿಳೆಯರು ಮತ್ತು ಭಿನ್ನ ಜಾತಿ ಮತಗಳಿಂದ ಬಂದು ಮತಾಂತರಗೊಂಡವರು; ಹೀಗೆ ಮತಾಂತರಗೊಂಡ ಶರಣೆಯರು ಎದುರಿಸಿದ ಸಮಸ್ಯೆಗಳು, ಅವರ ಅನುಭವ, ಅಭಿವ್ಯಕ್ತಿಗಳು ಬೇರೆ ಬೇರೆ.

'ಶರಣಸತಿ-ಲಿಂಗಪತಿ' ಎಂಬ ತತ್ವ ಶರಣೆಯರನ್ನು ಗೊಂದಲಕ್ಕೆ ಗುರಿ ಮಾಡಿರುವಂತೆ ಕಾಣಿಸುತ್ತದೆ.

'ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ'[2]

ಎಂಬುದುನ್ನು ಕೇಳುವಾಗ ಅಕ್ಕನ ಬದುಕಿನ ನೆಲೆಗಳನ್ನು ನೋಡಬಹುದಾಗಿದೆ. ಇಲ್ಲಿ ಮುಖ್ಯವಾಗಿ ಶರಣಸತಿ ಎಂಬ ಭಾವನೆಯನ್ನು ಅಕ್ಕನಂಥವಳು ಒಪ್ಪಿಕೊಂಡಾಗ ಲಿಂಗಪತಿಯಾಗಿ ಕಾಣಬಹುದು. ಆದರೆ, ಅಕ್ಕನನ್ನು ಹೊರತುಪಡಿಸಿ ಪತಿಯ ಮಾರ್ಗವನ್ನೇ ಅನುಸರಿಸಿ ಶರಣೆಯರಾದ ಸತಿಯರು ಈ ರೀತಿಯ ದಿಟ್ಟ ಹೆಜ್ಜೆಯನ್ನು ಇಡಲಾಗುವುದಿಲ್ಲ.

ಅಕ್ಕನಾದರೂ ಇಹದ ಗಂಡನನ್ನು ಅಷ್ಟೇ ಅಲ್ಲ, ತನ್ನ ತಂದೆ-ತಾಯಿಯನ್ನು ತೊರೆದು ಸಂಸಾರದ ಬಂಧನದಿಂದ ಮುಕ್ತಳಾಗಿ ಚೆನ್ನಮಲ್ಲಿಕಾರ್ಜುನಷ್ಟೇ ಸರ್ವಸ್ವವೆಂದು ನಂಬಿದವಳು. ಆದರೆ, ಕೆಳವರ್ಗದಿಂದ ಬಂದ ವಚನಕಾರ್ತಿಯರು ತಮ್ಮ ಇಷ್ಟದೈವವನ್ನು ಪತಿ ಎಂದು ನಂಬುವುದಕ್ಕಿಂತ ಹೆಚ್ಚಾಗಿ ಕಾಯಕವೇ ಕೈಲಾಸ ಎಂದುಕೊಂಡವರು. ಕಾಯಕದಲ್ಲೇ ದೈವವನ್ನು ಕಾಣಲಿಕ್ಕೆ ಹೊರಟವರು.

ಆಗಾಗಿ ಶರಣೆಯರು ತಾವು ಕೈಗೊಂಡ ಕಾಯಕದಲ್ಲೇ ತೃಪ್ತಿ ಹೊಂದಿದವರು. ಈ ಶರಣೆಯರು ಅನುಸರಿಸಿದ ಕಾಯಕವು ಕೂಡ ಅವರ ಪತಿಯರು ಅನುಸರಿಸುತ್ತಿದ್ದ ಕಾಯಕವೇ ಆಗಿತ್ತು. ಅಲ್ಲದೆ, ಶಿವಶರಣರು ಈ ಗೃಹಿಣಿಯರಿಂದ ನಿರೀಕ್ಷಿಸುತ್ತಿದ್ದದ್ದು ಇವರು ಪತಿಗೆ ಅನುಕೂಲ ಸತಿಯರಾಗಿರಬೇಕು ಎಂಬುದನ್ನೆ. ಪತಿವ್ರತೆ, ಸಾಧ್ವಿ ಎನಿಸಲು ಒಬ್ಬ ಗೃಹಿಣಿ ನಡೆಸಬೇಕಾದ ವಿಧಾನಗಳ ಜತೆಗೆ ಗುರು-ಜಂಗಮಸೇವೆ, ದಾಸೋಹಗಳು ಸೇರಿದ್ದವು.

ಇವೆಲ್ಲದರ ನಡುವೆ ಶರಣೆಯರು ಶಿವಭಕ್ತಿಯನ್ನು ಸಾಧಿಸಲು ಅವಕಾಶವಿತ್ತು. ಜೇಡರ ದಾಸಿಮಯ್ಯನ ಪತ್ನಿ ದುಗ್ಗಳೆ, ಆಯ್ದಕ್ಕಿ ಮಾರಯ್ಯನ ಪತ್ನಿ ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯನ ಪತ್ನಿ ಮೋಳಿಗೆ ಮಹಾದೇವಮ್ಮ, ಬಸವಣ್ಣನವರ ಪತ್ನಿಯರಾದ ನೀಲಲೋಚನೆ, ಗಂಗಾಂಬಿಕೆ ಮುಂತಾದ ಶಿವಶರಣರ ಧರ್ಮ ಪತ್ನಿಯರು ನಡೆದ ದಾರಿ ಪತಿಗೆ ಅನುಕೂಲ ಸತಿಯರಾಗಿಯೇ. ಸಮಾಜದ ನಿಮ್ನ ಸ್ತರದ ಜಾತಿ, ವೃತ್ತಿಗಳಿಂದ ದೀಕ್ಷೆ ಪಡೆದವರಲ್ಲಿ ಕೆಲವರು ಶಿವಶರಣೆಯರಾದ ನಂತರವೂ ಶರಣರ ರೀತಿಯೇ ತಮ್ಮ ವೃತ್ತಿಗಳನ್ನು ಮುಂದುವರೆಸಿದಂತೆ ತೋರುತ್ತದೆ.

ಹಾಗಾಗಿ ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ, ಧೂಪದ ಗೊಗ್ಗವ್ವೆ, ಸೂಳೆ ಸಂಕವ್ವೆ ಇವರೆಲ್ಲರೂ ಕೂಡ ತಮ್ಮ ವೃತ್ತಿಗಳಿಂದ ದೊರೆತ ಅನುಭವಗಳ ಮೂಲಕ ವಚನಗಳನ್ನು ರಚಿಸಿರುವುದು ಕಾಣುತ್ತದೆ. ವಚನಕಾರ್ತಿಯರ ವಚನಗಳನ್ನು ಗಮನಿಸಿದಾಗ ಕೇವಲ ಧಾರ್ಮಿಕ ಆಶ್ರಯದ ಅಡಿಯಲ್ಲೂ ವಿವಿಧ ಸ್ತರ–ವೃತ್ತಿ–ನೆಲೆಗಳಿಂದ ಬಂದ ಶರಣೆಯರು, ಕ್ರಾಂತಿಯ ಸಂದರ್ಭದ ಸಾಂಸ್ಕೃತಿಕ ಸಂದರ್ಭಕ್ಕೆ ಸ್ಪಂದಿಸುವ ರೀತಿ ಅವರವರ ಲೌಕಿಕ ನೆಲೆಯಲ್ಲೂ ಕೂಡ ಕಾರ್ಯನಿರ್ವಹಿಸಿರುವಂತೆ ತೋರುತ್ತದೆ.[3]

ಸದಾ ಚೆನ್ನಮಲ್ಲಿಕಾರ್ಜುನಲ್ಲೇ ಅಂತರ್ಮುಖಿಯಾದ ಮಹಾದೇವಿಯಕ್ಕನ ವಚನಗಳಲ್ಲಿ ಇತರರ ಬದುಕು ಹಾಗೂ ಸಾಮಾಜಿಕ ಆಗುಹೋಗುಗಳ ಚಿಂತನೆ ಕಾಣುವುದು ವಿರಳ. ಆದ್ದರಿಂದಲೋ ಏನೋ ಕೆಳವರ್ಗದಿಂದ ಬಂದಂತಹ ವಚನಕಾರ್ತಿಯರು ತಮ್ಮ ಕಾಯಕದಿಂದಲೇ ಹೊಸ ಸಮಾಜವೊಂದನ್ನು ಕಟ್ಟಲು ಯತ್ನಿಸಿದ್ದು, ಅಕ್ಕನಂಥವಳು ಇಹದ ಗಂಡನಲ್ಲದಿದ್ದರೂ ಪರದ ಗಂಡನನ್ನು; ಒಟ್ಟಿನಲ್ಲಿ ಕೌಟುಂಬಿಕ ವ್ಯವಸ್ಥೆಯೊಂದನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಅಕ್ಕಮಹಾದೇವಿ ಎಂದಿಗೂ ಕೂಡ ಇಹದ ಬದುಕನ್ನು ಒಪ್ಪಿದವಳಲ್ಲ. ಹಾಗಾಗಿ ಅಕ್ಕ 'ನೀರತಾವರೆ'ಯಂತೆ ಅಂಟಿಯೂ ಅಂಟದ ನೆಲೆಯವಳು.

ಕೆಳವರ್ಗದಿಂದ ಬಂದ ವಚನಕಾರ್ತಿಯರು 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಒಪ್ಪಿಕೊಂಡು, ಅದೇ ರೀತಿ ಶರಣೆಯರಾಗಿ ಬದುಕಲು ಹೊರಟವರು. ಆದರೆ, ವಚನ ಚಳುವಳಿಯಿಂದ ಪ್ರಭಾವಿತರಾಗಿ ಶರಣರಾದವರನ್ನು ಕುರಿತು ನಿಂದಿಸುವವರನ್ನು ಮಾತ್ರ ಅಕ್ಕ ಈ ರೀತಿ ವಿಮರ್ಶಿಸುತ್ತಾಳೆ.

'ಫಲವಾದ ಮರನ ಇಡುವುದೊಂದು ಕೋಟಿ
ಯಲವದ ಮರನ ಇಡುವವರೊಬ್ಬರನು ಕಾಣೆ
ಭಕ್ತಿಯುಳ್ಳವರ ಬೈವವರುವೊಂದುಕೋಟಿ
ಭಕ್ತಿ ಇಲ್ಲದವರ ಬೈವವರೊಬ್ಬರ ಕಾಣೆ'[4]

ಶರಣ ಚಳುವಳಿಯ ಬಹುಮುಖ್ಯ ತತ್ವವೆಂದರೆ 'ಅಹಿಂಸೆ'. ಅದಕ್ಕಾಗಿ ಬಸವಣ್ಣ 'ಹೊಲಸು ತಿಂಬುವವನೇ ಹೊಲೆಯ' ಎಂದು ಹೇಳಿ ದಲಿತ ವರ್ಗದವರನ್ನು ಮೇಲೆತ್ತುವ ಹಾಗೂ ಸವರ್ಣೀಯರೊಂದಿಗೆ ಸಮೀಕರಿಸುವ; ಸರಿಸಮಾನವಾಗಿ ಶರಣರನ್ನು ಬೆಳೆಸಲು ಹಿಂಸೆಯ ಮಾರ್ಗವನ್ನು ತ್ಯಜಿಸಲು ಹೇಳುತ್ತಾರೆ.

ಈ ನಿಟ್ಟಿನಲ್ಲಿ ನೋಡಿದಾಗ ಸಮಾಜದಲ್ಲಿ ಒಂದು 'ಸಸ್ಯಹಾರಿ'ಗಳಾದ ಮೇಲ್ವರ್ಗ ಹಾಗೂ 'ಮಾಂಸಾಹಾರಿ'ಗಳಾದ ಕೆಳವರ್ಗವೊಂದು ಗೋಚರಿಸುತ್ತಾ ಹೋಗುತ್ತದೆ. ಸಸ್ಯಹಾರಿಗಳಾದ ಸವರ್ಣೀಯರು ಬುದ್ಧಿ ಜೀವಿಗಳಾಗಿ, ಸಮಾಜವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಹಾಗೂ ಮಾಂಸಹಾರಿಗಳಾದ ಕೆಳವರ್ಗದಲ್ಲಿಯೇ ಮತ್ತೆ ಶ್ರೇಷ್ಠ ಹಾಗೂ ಕನಿಷ್ಠ ಎಂಬ ಮನೋಭಾವ ಬೆಳೆಸಿ ಅವರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡು ದೇವನೊಬ್ಬ ನಾಮ ಹಲವು ಎಂದು ತಿಳಿಸಿದರೂ ಕೂಡ ಆ ದೇವರಿಗೆ ವಿವಿಧ ರೂಪ, ಆಕೃತಿ, ಮಹಿಮೆ, ಪವಾಡ, ಶಕ್ತಿ ಎಲ್ಲವನ್ನು ಆರೋಪಿಸಿ ಆ ದೇವಸ್ಥಾನದ ಹಾಗೂ ದೇವರ ಪಾರುಪತ್ಯವನ್ನು ಕೂಡ ತನ್ನ ಹಿಡಿತದಲ್ಲಿಯೇ ಇಟ್ಟುಕೊಳ್ಳುತ್ತಾರೆ.

ಕೇವಲ ಮೇಲ್ವರ್ಗದ ಪುರುಷರಷ್ಟೇ ಮೋಕ್ಷಕ್ಕೆ ಅರ್ಹರು ಎಂಬ ವಿಚಾರಗಳನ್ನು ಹೇಳುತ್ತಾ ಇಡೀ ಸಮಾಜವನ್ನು ತಮ್ಮ ಕಪಿಮುಷ್ಟಿಯಲ್ಲಿ ಬಂಧಿಸಿರುತ್ತಾರೆ. ಆದರೆ, ಮೋಕ್ಷಕ್ಕೆ ಮೇಲು-ಕೀಳು ಎಂಬ ಭೇದವಿಲ್ಲ ಎಂದು ಹೇಳಿ ಇಡೀ ಸಮಾಜವನ್ನೇ ಒಂದು ವರ್ಗವಾಗಿ ನಿರ್ಮಿಸಲು ಹೊರಟವರು ಶರಣರು. ಹಾಗಾಗಿ ಈ ತಾರತಮ್ಯ ನೀತಿ ಹೋಗಲಾಡಿಸಲು ಆಹಾರ ಪದ್ಧತಿಯಲ್ಲೂ ಕೂಡ ಕೆಲವೊಂದು ವ್ಯತ್ಯಾಸಗಳನ್ನು ಮಾಡಲಾಯಿತು.

ಈ ರೀತಿ ಮಾಡುವಾಗ ಸಂಸ್ಕೃತೀಕರಣಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಸಂಸ್ಕೃತೀಕರಣವನ್ನು ವಚನಕಾರರ ಹಿನ್ನಲೆಯಲ್ಲಿ ತಿಳಿಯಲು ಹೊರಟರೆ ಇಲ್ಲಿ ವಚನಕಾರರು ಪ್ರಧಾನ ಸಂಸ್ಕೃತಿಯಾದ ಸವಣೀಯರ ಸಂಸ್ಕೃತಿಯನ್ನೇ ಅನುಸರಿಸಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಯಾವಾಗಲೂ ಕೂಡ ನಾವು ನಂಬಿದ ಪ್ರಧಾನ ಸಂಸ್ಕೃತಿ ಶ್ರೇಷ್ಠ ಎಂದು, ಅವರ ಚಿಂತನೆ, ಜೀವನ ಶೈಲಿ, ಬದುಕು, ಬರಹ, ಆಲೋಚನೆ, ಆಹಾರ ಪದ್ಧತಿ ಇವುಗಳೆಲ್ಲವನ್ನೂ ಕೂಡ ಅನುಸರಿಸಲು ಶರಣರು ಮುಂದಾಗುತ್ತಾರೆ.

ಹಾಗಾಗಿ ಒಬ್ಬ ವ್ಯಕ್ತಿ ತನ್ನನ್ನು ತಾನು ಹೊಲೆಯ ಎಂದು ಗುರುತಿಸಿಕೊಳ್ಳಲಾಗದೇ ಸವರ್ಣೀಯನೊಬ್ಬನ ಜತೆ ತನ್ನನ್ನು ತಾನು ಸಮೀಕರಿಸಿಕೊಳ್ಳಲು ಶರಣನಾಗಿ ಬದಲಾಗಿ ಮುಂದಾಗುತ್ತಾನೆ. ಹೀಗೆ ಮುಂದಾಗುವಂಥ ಹಂತದಲ್ಲಿ ತನ್ನನಷ್ಟೇ ಅಲ್ಲದೆ, ಇಡೀ ತನ್ನ ಸಮುದಾಯವನ್ನೂ ಕೂಡ ಶ್ರೇಷ್ಠತೆಯ ಮಟ್ಟಕ್ಕೆ ಕರೆದೊಯ್ಯಲು ಪ್ರಯತ್ನಿಸುತ್ತಾನೆ. ಈ ಎಲ್ಲಾ ಪ್ರಯತ್ನಗಳು ಒಬ್ಬ ಮುಖಂಡನಿಗಾಗಿ ಕಾದಿದ್ದು, ಇಂಥ ಮುಖಂಡತ್ವ ವಚನಯುಗದಲ್ಲಿ ಕಂಡುಬರುತ್ತದೆ. ಹಾಗಾಗಿಯೇ 'ಕೊಲುವವನೇ ಮಾದಿಗ' ಎಂಬ ಬಸವಣ್ಣನ ನುಡಿಗಳು ಕೆಳಜಾತಿಯವರ ಮಾನಸಿಕ ಸ್ಥಿತಿಯನ್ನು ಬದಲಿಸುವ ರೀತಿ ಕಂಡುಬರುತ್ತವೆ.

ಒಬ್ಬ ಅನಕ್ಷರಸ್ಥ ಅಕ್ಷರಸ್ಥನ ನಡುವಳಿಕೆಗೆ ಅಂಜುವಂತೆ ತನ್ನನ್ನು ಅಕ್ಷರಸ್ಥನ ಜತೆ ಗುರುತಿಸಿಕೊಳ್ಳಲು ತವಕಿಸುವಂತೆ; ಹಳ್ಳಿಗನೊಬ್ಬ ನಾಗರೀಕತೆಯನ್ನು ಮೈಗೂಡಿಸಿಕೊಳ್ಳುವಂತೆ ಹನ್ನೆರಡನೇ ಶತಮಾನದ ವಚನಕಾರರು ತಮ್ಮನ್ನು ತಾವು, ಶ್ರೇಷ್ಠರೆಂದುಕೊಂಡವರ ಜತೆ ಗುರುತಿಸಿಕೊಳ್ಳಲು ಪ್ರಯತ್ನಿಸಿದರು. ವಚನ ಕಾಲದ 'ಕಾಯಕವೇ ಕೈಲಾಸ' ಎಂಬ ತತ್ವ ಸರ್ವಕಾಲಕ್ಕೂ, ಸರ್ವದೇಶಕ್ಕೂ ಒಪ್ಪಿತವಾದಂಥ ವಿಚಾರವಾದರೂ ಕೂಡ ಶರಣನೊಬ್ಬನನ್ನು ಮೊದಲಿನ ವ್ಯಕ್ತಿತ್ವದಿಂದ ನೋಡಲೊಲ್ಲದೇ ತಮಗೆ ಬೇಕಾದ ಹಾಗೇ ಶರಣರ ವ್ಯಕ್ತಿತ್ವಗಳನ್ನು ಬಸವಣ್ಣನಂಥವರು ಬದಲಿಸಲು ಪ್ರಯತ್ನಿಸಿ, ಯಶಸ್ವೀ ಕೂಡ ಆಗುತ್ತಾರೆ.

ಬಹುಶಃ ಬಸವಣ್ಣನ ಈ ಯಶಸ್ವಿಗೆ ಸರ್ವಣೀಯರ ಕಟು ಧೋರಣೆಗಳೇ ನೀತಿಗಳೇ ಕಾರಣವೆನಿಸುತ್ತವೆ. ಶತಮಾನಗಳಿಂದ ತುಳಿತಕ್ಕೆ ಒಳಗಾದ ಜನ ಶೋಷಣೆಯಿಂದ ತಪ್ಪಿಸಿಕೊಳ್ಳಲು ಶ್ರೇಷ್ಠ ಚಿಂತಕ ಹಾಗೂ ಮನಃಶಾಸ್ತ್ರಜ್ಞನೊಬ್ಬನಿಗೆ ಇಡೀ ಕೆಳವರ್ಗದ ಸಮುದಾಯವೇ ತಲೆಬಾಗಿ ಒಪ್ಪಿ ನಡೆದಂತೆ ಕಾಣಿಸುತ್ತದೆ.

ಹೀಗೆ ಶರಣರಿಗೆ ಹೊಸ ಸಮಾಜವೊಂದನ್ನು ಕಟ್ಟಲು; ದಲಿತರನ್ನು ಉದ್ಧರಿಸುವ ಆಲೋಚನೆ ಇದ್ದೀತೆ ಹೊರತು ಸ್ತ್ರೀಯರನ್ನು ಉದ್ಧರಿಸುವ ಆಲೋಚನೆ ಇದ್ದಂತೆ ಕಾಣುವುದಿಲ್ಲ. ಆದರೂ ದಲಿತರಷ್ಟೇ ಶೋಷಣೆಗೆ ಒಳಗಾದ ಸ್ತ್ರೀಯರು ತಮ್ಮನ್ನು ತಾವು

ದಲಿತ ವಚನಕಾರರ ಜತೆಗೆ ಗುರುತಿಸಿಕೊಳ್ಳಲು ಮುಂದಾದರು. ಹೀಗೆ ಮುಂದಾದವರು, ಶರಣರಿಗೆ ವಿಧಿಸಿದ ನಿಯಮಗಳನ್ನೇ ತಮ್ಮ ಮೇಲೆ ಅನ್ವಯಿಸಿಕೊಂಡು ತಾವು ಶರಣೆಯರಾದರು. ಹೀಗೆ ಶರಣೆಯರಾದವರು ಅಹಿಂಸಾ ತತ್ವವನ್ನು ಒಪ್ಪಿಕೊಂಡರು. ಇದಕ್ಕೆ ಉದಾಹರಣೆ ಎಂಬಂತೆ ಅಕ್ಕ ತನ್ನ ಒಂದು ವಚನದಲ್ಲಿ

'ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ,
ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ.
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರುಗವಂತೆ ಅವಕೇಕೆ ಮರುಗ?
ಅದೆಂತೆಂದಡೆ:
"ಸ್ವಾತ್ಮಾನಮಿತರಂ ಚೇತಿ ಭಿನ್ನತಾ ನೈವ ದೃಶ್ಯತಾಂ।
ಸರ್ವಂ ಚಿಜ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ॥"
ಎಂದುದಾಗಿ,
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ.
ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವಹಿಂಸೆ ಮಾಡುವ ಮಾದಿಗರನೇನೆಂಬೆನಯ್ಯಾ?'[5]

ಎಂಬಲ್ಲಿ ಅಹಿಂಸೆ ಎಂಬುದು ಮನುಷ್ಯ ಮನುಷ್ಯರ ನಡುವೆ ಮಾತ್ರವಲ್ಲ; ಪ್ರಾಣಿಗಳಿಗೂ ಅನ್ವಯಿಸುತ್ತದೆ. ಪ್ರಾಣಿಗಳನ್ನು ಮನುಷ್ಯ ಮಾನವೀಯ ದೃಷ್ಟಿಯಿಂದಲೇ ನೋಡಬೇಕು ಎಂದು ತಿಳಿಸಿದರೂ ಮಾಂಸಾಹಾರಿಗಳನ್ನು ಅಕ್ಕನು ಕೂಡ ಮಾದಿಗರೆಂದೇ ಕರೆದಿರುವಲ್ಲಿ ಬಸವಣ್ಣನ ಪ್ರಭಾವ ಇರುವುದು ಕಂಡುಬರುತ್ತದೆ. ಇಲ್ಲೆಲ್ಲಾ ನೋಡಿದರೆ ಬಹುಶಃ ಶರಣ ಹಾಗೂ ಶರಣೆಯರು ತಮ್ಮ ಕಾಲಘಟ್ಟದ ಸಮಾಜವನ್ನು ಮಾಂಸಾಹಾರಿ ಹಾಗೂ ಸಸ್ಯಹಾರಿ ಎಂದು ವರ್ಗೀಕರಿಸಿರುವುದನ್ನು ಕಾಣಬಹುದು. ಅಲ್ಲದೆ, ಮಾಂಸಾಹಾರಿಗಳನ್ನು ಕೆಳವರ್ಗದವರೆಂದೇ ಪರಿಗಣಿಸಿ ಅವರನ್ನು ಸಸ್ಯಹಾರಿಗಳಾಗಿಸುವ 'ಅಹಿಂಸಾ ತತ್ವವನ್ನು ಒಪ್ಪಿ ನಡೆಯುವಂತೆ ಮಾಡಿರುವುದು ಕಂಡುಬರುತ್ತದೆ.

ಹೀಗೆ ಒಪ್ಪಿ ನಡೆಯುವಾಗ ಪ್ರಧಾನ ಸಂಸ್ಕೃತಿಯನ್ನೇ ಮತ್ತೆ ಮತ್ತೆ ಶ್ರೇಷ್ಠ ಎಂದು ಒಪ್ಪಿದಂತೆ, ಅಧೀನ ಸಂಸ್ಕೃತಿಗಳು ಕನಿಷ್ಠ ಎಂಬ ಭಾವನೆಯ ಜತೆಗೆ ನೆಲ ಸಂಸ್ಕೃತಿಯಿಂದ ನಾಗರೀಕತೆಯ ಕಡೆಗೆ ವಾಲಿರುವುದು ಕಂಡುಬರುತ್ತದೆ. ಆದರೆ, ವಚನಕಾರ್ತಿಯರು ಬಂದಿರಬಹುದಾದ ಸಾಮಾಜಿಕ ನೆಲೆಗಳು, ಅವರ ಭಾಷೆ, ಭಾವಾಭಿವ್ಯಕ್ತಿ, ಅವರು ಸೃಷ್ಟಿಸುವ ಪ್ರತಿಮೆಗಳು, ಅನುಭವ ಲೋಕವನ್ನು ಪ್ರಭಾವಿಸಿರುತ್ತವೆ. ಮೇಲುವರ್ಗದ ವಚನಕಾರ್ತಿಯರಿಗಿಂತ ಕೆಳವರ್ಗದಿಂದ ಬಂದ ವಚನಕಾರ್ತಿಯರು ವಚನಯುಗದ ಸಂಕೀರ್ಣವಾದ ಸ್ತ್ರೀಯರ ಸ್ಥಿತಿಯನ್ನು ಪ್ರತಿನಿಧಿಸುತ್ತಾರೆ.

ಅಕ್ಕಮಹಾದೇವಿಯಂಥವಳು ಅಹಿಂಸಾ ತತ್ವವನ್ನು ಯಾವುದೇ ಅಡೆತಡೆ ಇಲ್ಲದೆ, ಬೇರೊಂದು ಆಲೋಚನೆ ಇಲ್ಲದೆ ಒಪ್ಪಿ ನಡೆಯುತ್ತಾಳೆ. ಹೀಗೆ ಒಪ್ಪಿ ನಡೆವ ಅಕ್ಕನಿಗೆ ಯಾವುದೇ ಸಮಸ್ಯೆಗಳು ಎದುರಾಗುವುದಿಲ್ಲ. ಅಲ್ಲದೆ, ಯಾವ ಜಾತಿಯ ಕಟ್ಟುಪಾಡುಗಳು ಬಂಧಿಸುವುದಿಲ್ಲ. ಆದರೆ, ಕೆಳವರ್ಗದಿಂದ ಬಂದ ವಚನಕಾರ್ತಿಯರು ತಾವು ಬಂದಂತಹ

ವರ್ಗ ಹಾಗೂ ಜಾತಿ ವ್ಯವಸ್ಥೆಯ ಸಮಾಜದಲ್ಲಿ ಅನೇಕ ಅಪಮಾನಗಳಿಗೆ ತುತ್ತಾಗುತ್ತಾರೆ. ಈ ಅವಮಾನ ಹಾಗೂ ವೈದಿಕ ಧರ್ಮದ ಶ್ರೇಣೀಕರಣ ವ್ಯವಸ್ಥೆಯನ್ನು ದಿಟ್ಟವಾಗಿ ಪ್ರಶ್ನಿಸುತ್ತಾಳೆ, ವಚನಕಾರ್ತಿ ಉರಿಲಿಂಗ ಪೆದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆ. ಈಕೆಯ ವಚನಗಳಲ್ಲಿ ವಿಪುಲವಾದ ಸಂಸ್ಕೃತ ಅಥವಾ ಉಕ್ತಿಗಳ ಉಲ್ಲೇಖ ಕಾಣಿಸಿಕೊಳ್ಳುತ್ತದೆ.

ಬ್ರಾಹ್ಮಣ ವರ್ಗದಿಂದ ತಿರಸ್ಕರಿಸಲ್ಪಟ್ಟ ಜಾತಿಯ ಅಪಮಾನ, ನೋವು ಉರಿಲಿಂಗಪೆದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ವಚನಗಳಲ್ಲಿ ಕ್ರೋಧವಾಗಿ, ಜಾತಿ ವಿಮರ್ಶೆಯಾಗಿ ಕಾಣಿಸಿಕೊಳ್ಳುತ್ತದೆ.

> 'ಕುರಿ ಕೋಳಿ ಕರಿಮೀನ ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು.
> ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು
> ಜಾತಿಯೆಂಬರು.
> ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೋ?
> ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು.
> ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.
> ಅದೆಂತೆಂದಡೆ : ಸಿದ್ಧಲಿಕೆಯಾಯಿತು, ಸಗ್ಗಳೆಯಾಯಿತು.
> ಸಿದ್ಧಲಿಕೆಯ ತುಪ್ಪವನು, ಸಗ್ಗಳೆಯ ನೀರನು
> ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ.
> ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ'[6]

ಇಲ್ಲಿ ಮಾಂಸಹಾರಿಗಳನ್ನು ಕುಲಜ-ಕುಲಜ ಎಂದು ಕರೆದು ಇದರ ಜತೆ ಜಾತಿ ಪದ್ಧತಿಯನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಅಂದರೆ, ಮಾಂಸಹಾರಿಗಳನ್ನೇ ಮತ್ತೆ ಇಬ್ಭಾಗ ಮಾಡಿ ಕುರಿ, ಕೋಳಿ, ಕರಿಮೀನು ತಿನ್ನುವವರನು ಶ್ರೇಷ್ಠರೆಂದು ಪಶುವ ತಿನ್ನುವವರನ್ನು ಮಾತ್ರ ಮಾದಿಗ ಕೀಳು ಜಾತಿ ಎಂದು ಕರೆವ ಜನಸಮುದಾಯವನ್ನೇ ಇಲ್ಲಿ ಕಾಳವ್ವೆ ಪ್ರಶ್ನಿಸುತ್ತಿದ್ದಾಳೆ. ಬ್ರಾಹ್ಮಣ ಶ್ರೇಷ್ಠ ಹಾಗೂ ಅವರ ಸಂಸ್ಕೃತಿಯೇ ಪ್ರಧಾನ.

ಇದರ ಜತೆಗೆ ಕುರಿ ಕೋಳಿ ತಿನ್ನುವವರು ಪಶು ತಿನ್ನುವವರಿಗಿಂತ ಶ್ರೇಷ್ಠ. ಆದರೆ, ಪಶು ತಿನ್ನುವವ ಇವರೆಲ್ಲರಿಗಿಂತ ಕನಿಷ್ಠನೇ? ಈ ರೀತಿಯ ಜಾತಿ ಮಾಡಿದವರನ್ನು ಪ್ರಶ್ನಿಸುವ ಜತೆಗೆ ಜಾತಿಗಳು ತಾವಾಗಿ ಏಕೆ ಕೀಳಾದಿರೆಂದು ಪ್ರಶ್ನಿಸುವ ಆತ್ಮಸ್ಥೈರ್ಯ ಹಾಗೂ ಬ್ರಾಹ್ಮಣ ಉಂಡ ಊಟ ನಾಯಿ ನೆಕ್ಕಿತು. ಆದರೆ, ಮಾದಿಗ ತಿನ್ನುವ ಪಶು ಮಾತ್ರ ಬ್ರಾಹ್ಮಣನಿಗೆ ಶೋಭಿತವಾಯಿತು. ಹಾಗಾಗಿ ಈ ಜಾತಿ ಹೇಗೆ ಕೀಳಾಯಿತು ಎಂದು ಪ್ರಶ್ನಿಸುತ್ತಾಳೆ.

ಅಲ್ಲದೆ, ಈಕೆ ಶರಣರು ಕಟ್ಟಬಯಸಿದ ಸಮಾಜದ ಸಂಸ್ಕೃತೀಕರಣಕ್ಕೆ ಒಳಗಾದರೂ ಕೂಡ ಅಧೀನ ಸಂಸ್ಕೃತಿಯ ವಿಚಾರ ಹೇಗೆ ಕನಿಷ್ಠವಾಗುತ್ತವೆ ಎಂದು ಅಲ್ಲದೆ, ಆ ವಿಚಾರಗಳನ್ನೇ ಮತ್ತೆ ಪ್ರಧಾನ ಸಂಸ್ಕೃತಿಯ ಜತೆ ಗುರುತಿಸಿಕೊಳ್ಳುವ ಸಮೀಕರಿಸಿ ನೋಡುವ ಅಲ್ಲದೆ, ಕೀಳು ಜಾತಿಯನ್ನೇ ಶ್ರೇಷ್ಠತೆಯ ಮಟ್ಟಕ್ಕೆ ಏರಿಸುವ ಅದನ್ನು ಒಪ್ಪಿಕೊಳ್ಳುವ ಹಾಗೂ ಆ ಆಚಾರದಿಂದಲೇ ಗುರುತಿಸಿಕೊಳ್ಳುವ ಅಭಿವ್ಯಕ್ತಿ ಕಂಡುಬರುತ್ತದೆ. ಇಲ್ಲಿ

ಸಂಸ್ಕೃತೀಕರಣ ಅಧೀನ ಸಂಸ್ಕೃತಿಯ ಶ್ರೇಷ್ಠತೆ ಸಾರುವಂತೆ ಕಾಳವ್ವೆಯ ವಚನದಲ್ಲಿ ಕಂಡುಬರುತ್ತದೆ.

ಅಲ್ಲದೆ ಪಶು ತಿಂಬುವರನ್ನು ಕೀಳು ಜಾತಿ ಮಾದಿಗ ಎಂದು ಪ್ರಶ್ನಿಸುವ, ಶ್ರೇಷ್ಠರೆಂದು ಕುಣಿಯುವ ವಿಪ್ರರನ್ನು ಕುರಿತು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಪ್ರಶ್ನಿಸುತ್ತಾಳೆ. ಮಾದಿಗರೇನೋ ಪಶು ಕೊಂದು ತಿಂಬುವರು. ಹಾಗಾಗಿ ಇವರುಗಳು ಕೀಳು ಜಾತಿಗಳಾದರು. ಆದರೆ, ಬ್ರಾಹ್ಮಣರು ಮಾಡಿದ ಹಿಂಸೆಯ ಮಾರ್ಗ ಎಂಥಹುದು ಎಂದು ತನ್ನ ಒಂದು ವಚನದಲ್ಲಿ ತಿಳಿಸುತ್ತಾಳೆ.

> ಕೃತಯುಗ ಮೂವತ್ತೆರಡುಲಕ್ಷವರುಷದಲ್ಲಿ ಹೋಮವನ್ನಿಕ್ಕುವಾಗ
> ಕುಂಜರನೆಂನ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹಣರು.
> ತ್ರೇತಾಯುಗ ಹದಿನಾರುಲಕ್ಷವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಗ
> ಮಹಿಷನೆಂಬ ಕರಿ ಎಮ್ಮೆಯ ಮಗನ ಕೊಂದು ಹೋಮವನಿಕ್ಕಿದರು.
> ದ್ವಾಪರಯುಗ ಎಂಟುಲಕ್ಷವರುಷದಲ್ಲಿ ಹೋಮವನಿಕ್ಕುವಾಗ
> ಅಶ್ವನೆಂಬ ಕುದುರೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.
> ಕಲಿಯುಗ ನಾಲ್ಕು ಲಕ್ಷವರುಷದಲ್ಲಿ ಹೋಮವನಿಕ್ಕುವಾಗ
> ಜಾತಿಯಾದಿನ ಮಗ ಹೋತನಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.
> "ಅಣೋರಣೀಯಾನ್ ಮಹತೋ ಮಹೀಯಾನ್" ಎಂಬುದಾಗಿ,
> ಶಿವಭಕ್ತ ಹೊತ್ತಾರೆಯೆದ್ದು ಗುರುಲಿಂಗಜಂಗಮಕ್ಕೆ ಶರಣೆನ್ನದೆ
> ಮುನ್ನ ಒಂಟಿಬ್ರಾಹ್ಮಣನ ಕಂಡು ಶರಣಾರ್ಥಿ ಎಂದಡೆ
> ಎಂಬತ್ತುನಾಲ್ಕು ಲಕ್ಷ ಯೋನಿಯಲ್ಲಿ
> ಹಂದಿಯ ಬಸುರಲ್ಲಿ ಬಪ್ಪುದು ತಪ್ಪದು ಕಾಣಾ.
> ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ[7]

ಎಂದು ವಚನದಲ್ಲಿ ತಿಳಿಸುತ್ತಾಳೆ.

ಕೃತಯುಗದಿಂದ ಹೋಮಕ್ಕಾಗಿ ವಿವಿಧ ಪ್ರಾಣಿಗಳನ್ನು ಬಲಿಕೊಡುತ್ತಾ ಬಂದ ಬ್ರಾಹ್ಮಣರನ್ನು ಕಾಳವ್ವೆ ಇಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಹೀಗೆ ತರಾಟೆಗೆ ತೆಗೆದುಕೊಳ್ಳುವಾಗ ಕಾಳವ್ವೆ ಕೃತಯುಗದಲ್ಲಿ 32 ಲಕ್ಷ ವರುಷಗಳ ಹಿಂದೆ ಹೋಮಕ್ಕಾಗಿ ಕುಂಜರ ಎಂಬ ಆನೆಯನ್ನು ಕೊಲ್ಲುತ್ತಾರೆ ಬ್ರಾಹ್ಮಣರು. ಅಲ್ಲದೆ, ತೇತ್ರಾಯುಗ ಹದಿನಾರು ಲಕ್ಷ ವರುಷದಲ್ಲಿ ಮಹಿಷನೆಂಬ ಕರಿ ಎಮ್ಮೆಯ ಮಗನನ್ನು ಕೊಂದು ಹೋಮವನ್ನಿಕ್ಕುತ್ತಾರೆ. ಹಾಗೇ ದ್ವಾಪರಯುಗದಲ್ಲಿ ಎಂಟು ಲಕ್ಷ ವರುಷದಲ್ಲಿ ಅಶ್ವವೆಂಬ ಕುದುರೆಯ ಕೊಂದು ಹೋಮವನ್ನಿಕ್ಕುತ್ತಾರೆ. ಕಲಿಯುಗ ನಾಲ್ಕು ಲಕ್ಷ ವರುಷದಲ್ಲಿ ಹೋಮವನ್ನಿಕ್ಕುವಾಗ ಜಾತಿಯ ಆಡಿನ ಮಗನಾದ ಹೋತವನ್ನು ಬಲಿ ಕೊಡುತ್ತಾರೆ.

ಹೀಗೆ ಒಂದೊಂದು ಯುಗಕ್ಕೆ ಒಂದೊಂದು ಪ್ರಾಣಿಯನ್ನು ಕೊಲ್ಲುತ್ತಾ-ಬಲಿಕೊಡುತ್ತಾ ಬಂದಂಥ ಬ್ರಾಹ್ಮಣರನ್ನು, ಶಿವಶರಣರು ಹೊತ್ತಾರೆ ಎದ್ದು ಗುರು ಲಿಂಗ ಜಂಗಮಕ್ಕೆ ಶರಣೆನ್ನದೆ ಬ್ರಾಹ್ಮಣನಿಗೆ ಶರಣೆಂದರೆ ಎಂಬತ್ತು ನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ ಅಂಥವರು ಹುಟ್ಟುತ್ತಾರೆ ಎಂದು ಕಾಳವ್ವೆ ತಿಳಿಸುತ್ತಾಳೆ. ಅಂದರೆ ಕೇವಲ ಪಶು

ತಿಂಬುವವರನ್ನು ಮಾದಿಗ ಅಥವಾ ಕೀಳು ಜಾತಿ ಎಂದು ಹೀಗಳೆವ ಬ್ರಾಹ್ಮಣರು, ವಿವಿಧ ಪ್ರಾಣಿಗಳನ್ನು ಬಲಿಕೊಟ್ಟಾಗ ಅಹಿಂಸೆಯ ತತ್ವ ಮರೆಯಾದುದನ್ನು ಗುರುತಿಸುತ್ತಾಳೆ. ಇದರ ಜತೆಗೆ ಇಂತಹ ಜಾತಿಯಲ್ಲಿ ಹುಟ್ಟಿದ ಒಂಟಿ ಬ್ರಾಹ್ಮಣನನ್ನು ಕಂಡು ನಮಸ್ಕರಿಸಿದರೆ ಮೋಕ್ಷ ಪ್ರಾಪ್ತಿ ಇಲ್ಲವೆಂದು ತಿಳಿಸುತ್ತಾಳೆ.

ಒಂಟಿ ಬ್ರಾಹ್ಮಣನನ್ನು ಇಂದೂ ಕೂಡ ಶುಭ ಸಮಾರಂಭಕ್ಕೆ ಹೋಗುವಾಗ ನೋಡಿದರೆ ಅಪಶಕುನ ಎಂಬ ಮನೋಭಾವ ಬ್ರಾಹ್ಮಣೇತರ ಜಾತಿಗಳಲ್ಲಿ ರೂಢಿಯಲ್ಲಿದೆ. ಆದರೆ, ಚೆನ್ನಬಸವಣ್ಣ ಕೆಳ ಜಾತಿಯಿಂದ ಪರಿವರ್ತಿತವಾಗಿ ಬಂದು ಶರಣರಾದ ವರ್ಗದ ಬಗ್ಗೆ ಸಂದೇಹ–ಶಂಕೆ ವ್ಯಕ್ತಪಡಿಸಿದ್ದಾನೆ. ಕೆಳ ಜಾತಿ ವರ್ಗಗಳಿಂದ ಬಂದು ಭಕ್ತರು–ಶರಣರು ಆದವರಿಗೆ ತಮ್ಮ ಪೂರ್ವಾಶ್ರಮದ ಆಚರಣೆ–ಸಂಪ್ರದಾಯಗಳನ್ನು, ವಿಧಿ, ಆಚರಣೆಗಳನ್ನು ಬಿಟ್ಟುಕೊಡುವುದು ಅಶಕ್ಯ ಎಂಬುದು ಚೆನ್ನಬಸವಣ್ಣನ ನಂಬಿಕೆಯಾಗಿದೆ.

ಅಂಥವರು ಭಕ್ತರು–ಶರಣರು ಆಗಬೇಕಾದರೆ, ಅವರಿಗೆ ಕಾಲದ ಗಡುವು–ಪ್ರವೇಶ ಪರೀಕ್ಷೆಗಳನ್ನು ಚೆನ್ನಬಸವಣ್ಣ ನಿಯಮಿಸುತ್ತಾನೆ. ವಚನ ಸಂಸ್ಕೃತಿಗೊಂದು ಸಂಹಿತೆಯನ್ನು, ವಿಧಿ–ನಿಷೇಧಗಳನ್ನು ಚೆನ್ನಬಸವಣ್ಣ ರೂಪಿಸುತ್ತಾನೆ. ಮುಕ್ತ ಸಂಸ್ಕೃತಿಯೊಂದು 'ಸಂಘಟಿತ ಧರ್ಮ'ವಾದ ಬಗೆ ಇದು:

'ಶ್ರೀ ಗುರುವಾದಾತನು ಸಕಾಲಗಮಂಗಳ ಹೃದಯವನರಿತು ತನ್ನತಾ
ನರಿದು ಸರ್ವಾಚಾರ ತನ್ನಲ್ಲಿ ನೆಲೆಗೊಂಡು
ಉಪದೇಶವ ಮಾಡುವ ಕ್ರಮವೆಂತೆಂದೆಡೆ:
ಬ್ರಾಹ್ಮಣನ ಮೂರು ವರ್ಷ ನೋಡಬೇಕು
ಕ್ಷತ್ರಿಯನ ಆರು ವರ್ಷ ನೋಡಬೇಕು.
ವೈಶ್ಯನ ಒಂಬತ್ತು ವರ್ಷ ನೋಡಬೇಕು
ಶೂದ್ರನ ಹನ್ನೆರಡು ವರ್ಷ ನೋಡಬೇಕು
ನೋಡಿದಲ್ಲದೆ ದೀಕ್ಷೆಯ ಕೊಡಬಾರದು.
ಬ್ರಾಹ್ಮಣಂ ತ್ರೀಣಿ ವರ್ಷಾಣಿ: ಷಡಬ್ದಂ ಕ್ಷತ್ರಿಯಂ ತಥಾ।
ವೈಶ್ಯಂ ನವಾಬ್ದಮಾಖ್ಯಾತಂ ಶೂದ್ರಂ ದ್ವಾದಶ ವರ್ಷಕಂ॥
ಈ ಕ್ರಮನರಿಯದೆ, ಉಪಾದಿವಿಡಿದು ಮಾಡುವಾತ ಗುರುವಲ್ಲ
ಉಪಾದಿವಿಡಿದು ಮಾಡಿಸಿಕೊಂಬಾತ ಶಿಷ್ಯನಲ್ಲ.
ಇವರಿಬ್ಬರ ನಿಲುವ ಒಂದೆ: ಠಕ್ಕನ ಮನೆಗೆ ಠಕ್ಕಬಿದ್ದಿನವ ಬಂದಂತೆ
ಈ ಗುರು ಶಿಷ್ಯರನ್ನು ರೌರವ ನರಕದಲ್ಲಿಕ್ಕುವ
ಕೂಡಲ ಚೆನ್ನಸಂಗಯ್ಯ.'[8]

ಚಲನಶೀಲವೂ ಪುರೋಗಾಮಿಯೂ ಆಗಿದ್ದ ವಚನ ಸಂಸ್ಕೃತಿಯು ಚೆನ್ನಬಸವಣ್ಣನ ನೇತೃತ್ವದಲ್ಲಿ ಸ್ಥಾವರವು, ಯಥಾಸ್ಥಿತಿ ವಾದವು ಮೊದಲಿನ ಸ್ವರೂಪವನ್ನೇ ಪಡೆದುಕೊಂಡು ಬಿಟ್ಟಿತ್ತು. ಇದಲ್ಲದೆ, ದೀಕ್ಷೆಯಂಥ ಸಂಘಟಿತ ಧರ್ಮಾಚರಣೆಯನ್ನು ವೈದಿಕ ಆಚರಣೆಗೆ ಸರಿಸಮಾನವಾದ ವಿಧಿಯೊಂದನ್ನು ಚೆನ್ನಬಸವಣ್ಣನು ರೂಪಿಸಿದನು.

'ಆಕಳ ಹೊಟ್ಟೆಯಲ್ಲಿ ಹೋರಿ ಹುಟ್ಟಿದಡೇನು?
ಲಿಂಗ ಮುದ್ರೆಯನೊತ್ತುವನಕ್ಕ ಬಸವನಲ್ಲ.
ಜಂಗಮನ ಆತ್ಮದಲ್ಲಿ ಪಿಂಡ ಉತ್ಪತ್ತಿಯಾದಡೇನು?
ದೀಕ್ಷಿತನಾಗದನ್ನಕ್ಕ ಜಂಗಮದೇವನಲ್ಲ.
ದೀಕ್ಷೆ ಇಲ್ಲದೆ ಹೋಗಿ ಭಕ್ತರಲ್ಲಿ ಅಗ್ಗಣಿಯ ಮುಕ್ಕಳಿಸಿದಡೆ
ಹಾದಿಗೊಂಡು ಹೋಗುವ ನಾಯಿ
ಗಿಡದ ಮೇಲೆ ಉಚ್ಚೆಯ ಹೊಯ್ದಂತಾಯಿತು ಕಾಣಾ
ಕೂಡಲ ಚೆನ್ನಸಂಗಮದೇವಾ'.

ಹೀಗೆ ದೀಕ್ಷೆ, ನಿಬಂಧನೆ, ಏಣಿ ಶ್ರೇಣಿ ಮುಂತಾದ ವೈದಿಕವಾದಿ ಸ್ಥಾವರ ರೂಪಿ ಆಚರಣೆಗಳು ವಚನ ಸಂಸ್ಕೃತಿಯೊಳಗೆ ಪ್ರವೇಶಿಸಿದವು.[9]

ಆದರೆ ಬಸವಣ್ಣನ ಪ್ರಭಾವಕ್ಕೆ ಒಳಗಾದ ಶರಣ-ಶರಣೆಯರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮುಂದಾದರು. ಹಾಗಾಗಿ ಕದಿರ ರೆಮ್ಮವ್ವೆಯಂಥವಳು ಕೂಡ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ರೀತಿಯೇ ತಾನು ಮುಂದುವರೆದು ಕಾಯಕವನ್ನು ಜಾತಿಗೆ ವಿಸ್ತರಿಸಿಕೊಂಡು ನೋಡುವವರನ್ನು ಕುರಿತು ಟೀಕಿಸುತ್ತಾಳೆ. ಅದಕ್ಕೆ ಪ್ರತಿಯಾಗಿ ತನ್ನ ಕಾಯಕದಿಂದಲೇ ಉತ್ತರಿಸುವ ಪರಿಯನ್ನು ಕಾಣಬಹುದು.

'ನಾ ತಿರುಗುವ ರಾಟೆಯ ಕುಲಜಾತಿಯ ಕೇಳಿರಣ್ಣಾ :
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ.
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,
ಸುತ್ತಿತ್ತು ನೂಲು ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ-ಎನ್ನಗಂಡ ಕುಟ್ಟಿಹ;
ಇನ್ನಿವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?[10]

ಎಂಬಲ್ಲಿ ವೃತ್ತಿ ಕಾಯಕ ನೆಲೆಯನ್ನು ತಲುಪಿದಾಗ ಅಲ್ಲಿ ಜಾತಿಯ ಸೂತಕವನ್ನು ಕಳೆದುಕೊಂಡು ಶ್ರೇಷ್ಠತೆಯ ಮಟ್ಟವನ್ನು ತಲುಪುತ್ತದೆ. ಅಲ್ಲದೆ, ಜಾತಿಯ ಕಲ್ಪನೆ ಇರುವುದು ಕೇವಲ ಮನುಷ್ಯ ವರ್ಗಕ್ಕೆ ಮಾತ್ರವೇ ಹೊರತು ಅದರಾಚೆಗಿನ ಕಾಯಕಕ್ಕೆ ಬಳಸುವ ಸಲಕರಣೆಗೆ ಜಾತಿಯ ಸೀಮಿತತೆ ತಟ್ಟುವುದಿಲ್ಲ. 'ಕಾಯಕವೇ ಕೈಲಾಸ' ಎಂಬುದನ್ನು ಒಪ್ಪಿಕೊಂಡ ಮೇಲೆ ಹುಟ್ಟಿದುದು ಜಾತಿಯೊಂದೆ. ಅದು ದುಡಿಯುವ ವರ್ಗ ಮಾತ್ರ. ಹಾಗಾಗಿ ಶರಣರಾಗಿ ಬದಲಾದ ಮೇಲೆ ತಮ್ಮ ಮೂಲ ಜಾತಿಗಳನ್ನೇ ಹಿಡಿದು ನಿಂದಿಸುವವರನ್ನು ಕದಿರೆ ರೆಮ್ಮವ್ವೆ 'ನಾ ತಿರುಹುವ ರಾಟೆಯನ್ನು ನಿನ್ನ ಕುಲಜಾತಿ ಯಾವುದೆಂದು ಕೇಳಿ' ಎಂದು ಹೇಳುತ್ತಾಳೆ.

ಹೀಗೆ ಹೇಳುವಾಗ ತನ್ನ ವೃತ್ತಿಯ ಬಗೆಗೆ ಇರುವ ಅಭಿಮಾನ, ಜಾತಿಯಿಂದಲೇ ನೋಡುವವರ ಮೇಲೆ ಆಕ್ರೋಶ ಹಾಗೂ ಸಮಾಧಾನಿಯವಾದ ತೀಕ್ಷ್ಣವಾದ ಉತ್ತರಗಳನ್ನು

ನೀಡುತ್ತಾಳೆ. ಜಾತಿಯನ್ನು ಕುರಿತು ನಿಂದಿಸುವವರನ್ನು ಬೊಂತಾದೇವಿ ತನ್ನ ವಚನಗಳಲ್ಲಿ ಜಾತಿ ಎಂಬುದು ಎಲ್ಲಿದೆ ಎಂದು ಪ್ರಶ್ನಿಸುವ ರೀತಿ ಭಿನ್ನವಾಗಿದೆ.

'ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ
ಬಯಲೆಂದುಂಟೆ?
ಎಲ್ಲಿ ನೋಡಿದೆಡೆ ಬಯಲೊಂದೆ;
ಭಿತ್ತಿಯಿಂದ ಒಳ ಹೊರಗೆಂಬ ನಾಮವೈಸೆ.
ಎಲ್ಲಿ ನೋಡಿದಡೆ ಕರೆದೆಡೆ ಓ ಎಂಬಾತನೆ ಬಿಡಾಡಿ[11]

ಎಂಬಲ್ಲಿ ಬಯಲು ಊರ ಹೊರಗೆ ಊರ ಒಳಗೆ ಬೇರೆ ಬೇರೆ ವ್ಯತ್ಯಾಸವಾಗಿರುವುದಿಲ್ಲ. ಹಾಗಾಗಿ ಒಂದು ಬಯಲು ಬ್ರಾಹ್ಮಣರಿಗಾಗಿ ಇನ್ನೊಂದು ಬಯಲು ಹೊಲೆಯರಿಗಾಗಿ ಎಂದು ನಿರ್ಮಿತವಾಗಿಲ್ಲ. ಇರುವ ಬಯಲೊಂದನ್ನೇ ಬ್ರಾಹ್ಮಣ ಹಾಗೂ ಹೊಲೆಯರ ಬಯಲು ಎಂದು ಗುರುತಿಸಲು ಆಗುವುದಿಲ್ಲ. ಹಾಗಾಗಿ ಬಯಲನ್ನು ಒಂದೇ ಆಗಿ ನೋಡಬೇಕು ಎಂಬಲ್ಲಿ ಮನುಷ್ಯನೊಬ್ಬನನ್ನು ಹೊಲೆಯ ಹಾಗೂ ಬ್ರಾಹ್ಮಣ ಜಾತಿ ಎಂದು ವಿಂಗಡಿಸದೇ ಮನುಷ್ಯರಾಗಿ ನೋಡುವುದನ್ನು ಕಲಿಯಬೇಕು ಎನ್ನುತ್ತಾಳೆ.

ಅದೇ ರೀತಿ ಅಮ್ಮುಗೆ ರಾಯಮ್ಮ ಕೂಡ ಜಾತಿಯನ್ನು ಹಿಡಿದು ನಿಂದಿಸುವವರನ್ನು ಕುರಿತು ವಚನವೊಂದರಲ್ಲಿ ಸೂರ್ಯ ಅಲ್ಲಿ ಇಲ್ಲಿ ಎಂಬ ಸಂದೇಹವನ್ನು ಬಿಟ್ಟು ಎಲ್ಲೆಲ್ಲಿಯೂ ಕೂಡ ತನ್ನ ಪ್ರಭೆಯನ್ನು ಬೀರುತ್ತಾನೆ. ಹೀಗಿದ್ದು ಕೂಡ ಜಾತಿ ನಿಂದಿಸುವವರನ್ನು ಆಕೆ, ಪ್ರಶ್ನಿಸುತ್ತಾಳೆ.

'ಸೂರ್ಯಂಗೆ ಅಲ್ಲಿ ಇಲ್ಲಿ ಎಂಬ ಸಂದೇಹವುಂಟೆ?
ಎಲ್ಲೆಲ್ಲಿಯೂ ತನ್ನ ಪ್ರಭೆಯ ಬೀರುತಿರ್ಪುದು
ಬಲ್ಲ ಘನಮಹಿಮನ ಎಲ್ಲರೂ ಜರಿದಡೇನು ಕಿಂಕಿಲನೆ?'[12]

ಅಮ್ಮುಗೆ ರಾಯಮ್ಮ ಮುಂದುವರೆದು ಶರಣೆಯರನ್ನು ನಿಂದಿಸುವುದನ್ನು ಕುರಿತು ಮತ್ತೆ ಜಾತಿಯ ಪರಿಕಲ್ಪನೆ ಹಿಡಿದು ಮಾತನಾಡುವುದು ಹೀಗೆ–

'ಹೆದರದಿರು ಮನವೆ ಹಿಮ್ಮೆಟ್ಟದಿರು ಮನವೆ,
ಹಿಡಿದ ಛಲವ ಬಿಡದಿರು ಮನವೆ.
ಜರಿದರೆಂದು ಝುಂಕಿಸಿದರೆಂದು
ಶಾಸ್ತ್ರ ಸಮಾಧಿ ನೀರು ನೇಣು ವಿಷ ಔಷಧದಲ್ಲಿ ಘಟವ ಬಿಡದೆ
ಗುರುವಾದಡು ಲಿಂಗವಾದಡು ಜಂಗಮವಾದಡು
ನೊಸಲಲ್ಲಿ ಕಣ್ಣುಳ್ಳ ಪಶುಪತಿಯಾದಡು
ತೆತ್ತಿಗರು ಕಂಡು ಒತ್ತಿ ನುಡಿದರೆಂದು ಘಟವ ಬಿಡುವ ಘಟ ಕರ್ಮಿಗಳು
ಏಳೇಳು ಜನ್ಮದಲಿ, ಸೂಕರನ ಹೊಟ್ಟೆಯಲ್ಲಿ ಹುಟ್ಟಿ,
ನೂರೊಂದು ಕುಲ ಹದಿನೆಂಟು ಜಾತಿಯ ಅಮೇಧ್ಯವ ತಿಂದು

ಹೊಲೆಯರ ಮನೆಯ ಹೊಸ್ತಿಲ ಕಾಯ್ದುಕೊಂಡಿಪ್ಪರಯ್ಯಾ:
ಅಮುಗೇಶ್ವರಲಿಂಗವೆ ನಿಮ್ಮಾಣೆ, ನಿಮ್ಮ ಪ್ರಥಮರಾಣೆ'[13].

ಇಲ್ಲಿ ಶರಣರನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಕೂಡ ಜಾತಿಯ ಪರಿಕಲ್ಪನೆಯಲ್ಲೇ ನೋಡುವ ಪರಿ ಏನೂ ಕೂಡ ಬದಲಾದಂತೆ ತೋರಿಸುವುದಿಲ್ಲ. ಹೀಗೆ ಮಾಡುವಲ್ಲಿ ಮತ್ತೆ ಶರಣರು ಎಲ್ಲೋ ಒಂದು ಕಡೆ ಭವಿ-ಭಕ್ತ ಎಂಬ ಹೊಸ ಜಾತಿ ವ್ಯವಸ್ಥೆಯೊಂದನ್ನು ತಮ್ಮೊಳಗೆ ಹುಟ್ಟುಹಾಕಿಕೊಂಡಂತೆ ಕಾಣಿಸುತ್ತದೆ. ಶರಣರಲ್ಲಿ ಜಾತಿಯ ವ್ಯವಸ್ಥೆಯೊಂದನ್ನು ಧಿಕ್ಕರಿಸಿ ಬಂದವರು ಹೊಸ ಜಾತಿಯ ಕಲ್ಪನೆಯನ್ನು ಕಟ್ಟಲು ಮುಂದಾಗುತ್ತಾರೆ.

ದಲಿತರ ಜತೆ ಗುರುತಿಸಿಕೊಂಡು ಬಂದಂತಹ ವಚನಕಾರ್ತಿಯರು ಬಹುಶಃ ಹೆಚ್ಚಾಗಿ ಪತಿಯೊಬ್ಬ ಶರಣನಾಗಿ ಪರಿವರ್ತನೆ ಹೊಂದಿದ್ದರಿಂದಲೇ. ಗಜೇಶಮಸಣ್ಣಯ್ಯಗಳ ಪುಣ್ಯಸ್ತ್ರೀ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಎಡೆಮಠನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣ್ಣಮ್ಮ, ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಗಂಗಾಂಬಿಕೆ, ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ, ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಮೋಳಿಗೆ ಮಹಾದೇವಿ, ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ, ರೇವಣ್ಣಸಿದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಹಡದಪ್ಪಗಳ ಪುಣ್ಯಸ್ತ್ರೀ ಲಿಂಗಮ್ಮ, ಹಾದರ ಕಾಯಕದ ಮಾದಯ್ಯ ಪುಣ್ಯಸ್ತ್ರೀ ಗಂಗಮ್ಮ -ಇವರೆಲ್ಲರೂ ಕೂಡ ಪುಣ್ಯಸ್ತ್ರೀಗಳಾಗಿ ಗುರುತಿಸಿಕೊಂಡಿರುವುದನ್ನು ನೋಡಿದರೆ, ಪತಿಯ ಮಾರ್ಗವನ್ನೇ ಇವರೆಲ್ಲ ಅನುಸರಿಸಿರುವುದು ಕಂಡುಬರುತ್ತದೆ.

ಸ್ತ್ರೀಯರು ಅದರಲ್ಲೂ ಕೆಳವರ್ಗದ ಶರಣೆಯರು ನೇರವಾಗಿ ಶರಣತ್ವಕ್ಕೆ ಭಾಗಿಯಾಗದೇ ತಮ್ಮ ಪತಿಗಳ ಮೂಲಕ ಶರಣತ್ವವನ್ನು ಒಪ್ಪಿಕೊಂಡಂತೆ ಕಾಣಿಸುತ್ತದೆ. ಹಾಗಾಗಿ ಶರಣರ ಅಭಿಪ್ರಾಯಗಳನ್ನು ಒಪ್ಪಿ ಮಹಾಶರಣೆಯರಾಗಿ ಆ ಶರಣತ್ವದ ಲಕ್ಷಣಗಳನ್ನು ತಮ್ಮ ಪತಿಗಳಿಗೆ ತಿಳಿಸಿ ಹೇಳುವ ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿಯಂಥವರು, ಶರಣೆಯರಾಗುವುದಕ್ಕಿಂತ ಹೆಚ್ಚಾಗಿ ತಮ್ಮ ಮನಸ್ಸಿನಲ್ಲಿ ಶರಣರಾಗಿ ಉಳಿದು ಬಿಟ್ಟಿರುತ್ತಾರೆ.

ಬಸವಣ್ಣನು ಶರಣರನ್ನು 'ಜಾತಿ ಸಂಕರರು' ಎಂದು ಕರೆದರೆ ಸಿದ್ಧರಾಮನು ಅವರನ್ನು 'ವರ್ಣಾತೀತರು' ಎಂದು ಕರೆದಿದ್ದಾನೆ. ಅಲ್ಲಮನು 'ಜಾತಿ, ವರ್ಣ, ಪಂಚಸೂತಕ'ಗಳಿಂದ ಮುಕ್ತರಾದವರೇ ಶರಣರು ಎನ್ನುತ್ತಾನೆ. ವಚನ ಸಂಸ್ಕೃತಿಗೆ ಸಂಬಂಧಿಸಿದಂತೆ ಕೂಡ ಜಾತಿ ವಿನಾಶ ಹಾಗೂ ಹೆಣ್ಣಿನ ಬಿಡುಗಡೆಗಳೆರಡು ಅಭಿನ್ನವಾದವು ಎಂಬುದನ್ನು ನಾವು ಗುರುತಿಸಬೇಕಾಗಿದೆ.

'ಆವ ಕುಲವಾದಡೇನು?
ಶಿವಲಿಂಗವಿದ್ದವನೇ ಕುಲಜನು
ಕುಲವನರಸುವರೇ ಶರಣನಲ್ಲಿ, ಜಾತಿ ಶಂಕರನಾದ ಬಳಿಕ?
"ಶಿವಧರ್ಮ ಕುಲೇಜಾತಃ ಪುನರ್‍ಜನ್ಮ ವಿವರ್ಜಿತಃ

ಉಮಾ ಮಾತಾ ಪಿತಾರುದ್ರ ಐಶ್ವರ್ಯಂ ಕುಲವೇವಚ॥
ಎಂಬುದಾಗಿ
ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ
ಕೂಡಲಸಂಗಮದೇವಾ ನಂಬುವೆ ನಿಮ್ಮ ಶರಣರನು'.

ಎಂಬಲ್ಲಿ ಜಾತಿ ಮೀರಿದ ಸಮಾಜವೊಂದನ್ನು ನಿರ್ಮಿಸಲು ಬಸವಣ್ಣ ಹೊರಡುತ್ತಾನೆ.[14]

ಹೆಣ್ಣು, ಹೊನ್ನು, ಮಣ್ಣು ಇವುಗಳು ಮಾಯೆ ಎಂದು ಅಲ್ಲಮ ಪ್ರಭು
ಹೊನ್ನು ಮಾಯೆಯೆಂಬರು, ಹೊನ್ನುಮಾಯೆಯಲ್ಲ.
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ.
ಮಣ್ಣು ಮಾಯೆಯೆಂಬರು, ಮಣ್ಣುಮಾಯೆಯಲ್ಲ.
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ."[15]

ಎಂದು ಹೇಳಿದರೆ,

"ಇಲ್ಲದ ಮಾಯೆಯನ್ನುಂಟು ಮಾಡಿಕೊಂಡು
ಬಲ್ಲತನಕೆ ಬಾಯಿ ಬಿಡಲೇಕೋ?"[16]

ಎಂದು ಚೆನ್ನಬಸವಣ್ಣ ಕೇಳುತ್ತಾನೆ.

'ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣು ಅಲ್ಲ ಗಂಡು ಅಲ್ಲ ಕಾಣಾ ರಾಮನಾಥ'[17]

ಎಂದು ಜೇಡರ ದಾಸಿಮಯ್ಯ ಆತ್ಮಕ್ಕೆ ಲಿಂಗಭೇದವಿಲ್ಲ ಎಂದು ಸಾರಿದರೆ

'ಶುಕ್ಲ ಶೋಣಿತ ಪಿಂಡೈಕ್ಯನ ಚಿತ್ತ ವಾಯು
ಆರುದಳದ ಪದ್ಮದಲ್ಲಿಹುದು.
ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಗಡ್ಡಮೀಸೆ ಬಂದಡೆ ಆ ಪಿಂಡವನು ಗಂಡೆಂಬರು
ನಡುವೆ ಸುಳಿವಾತ್ಮನು ಹೆಣ್ಣೂ ಅಲ್ಲ, ಗಂಡೂ ಅಲ್ಲ.
ಇದರಂತುವ ತಿಳಿದು ನೋಡಿಹೆನೆಂದೆಡೆ
ಶ್ರುತಿಗಗೋಚರವೆಂದಾತನಂಬಿಗ ಚೌಡಯ್ಯ'[18]

ಎಂದು ದಾಸಿಮಯ್ಯನ ಅಭಿಪ್ರಾಯವನ್ನು ಸಮರ್ಥಿಸುತ್ತಾನೆ ಅಂಬಿಗರ ಚೌಡಯ್ಯ.

ಚಂದಿಮರಸ "ಸ್ತ್ರೀಯಲ್ಲ ಪರುಷನಲ್ಲ ನಪುಂಸಕನಲ್ಲ
ಆತ್ಮನೆಂದರಿಯಬಹುದಲ್ಲದೆ ಕಾಣಿಸಬಾರದು"[19]

ಎಂದು ಒಡನುಡಿಯುತ್ತಾನೆ. ಇಲ್ಲೆಲ್ಲಾ ವಚನಕಾರರು 'ಮಾಯೆ'ಯಾಗಿ ಕಾಡುವ ಹೆಣ್ಣನ್ನು ಹಾಗೂ ಒಳಗೆ ಸುಳಿವಾತ್ಮವನ್ನು ಯಾವ ಲಿಂಗ ಎಂದು ಪ್ರಶ್ನಿಸುತಾರೆ. ಈ ಚಿಂತನೆಗಳು ಶ್ರೇಷ್ಠವಾದವುಗಳೇ ಹಾಗಾಗಿ ಹನ್ನೆರಡನೇ ಶತಮಾನದ ವಚನಕಾರರಾದಿಯಾಗಿ ಎಲ್ಲರೂ ಕೂಡ ಒಪ್ಪಬಹುದಾದ ಮಾತುಗಳಾಗಿವೆ. ಹಾಗಾಗಿಯೇ ಶರಣೆಯರು ಕೂಡ ಇವರ ಚಿಂತನೆಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದ್ದರಿಂದಲೇ ಆಧುನಿಕಯುಗದಲ್ಲೂ ಕೂಡ ಸಾಹಿತ್ಯ ರಚಿಸಲು ಹಿಂದು ಮುಂದು ನೋಡುವ ಸ್ತ್ರೀ ಲೇಖಕಿಯರಿಗಿಂತ ವಚನಯುಗದಲ್ಲಿ ವಚನಕಾರ್ತಿಯರ ಸಂಖ್ಯೆ ಹೆಚ್ಚಾಗಿ ಕಂಡುಬಂದಿದೆ.

ಇಲ್ಲಿ ತಮ್ಮನ್ನು ವಚನ ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ಬಹುಶಃ ವಚನಕಾರರ ಈ ಮೇಲಿನ ಮಾತುಗಳೇ ಪ್ರೇರಕವಾಗಿರಬಹುದು. ಹೀಗೆ ಬಂದು ಗುರುತಿಸಿಕೊಂಡ ಕೆಲವೊಂದು ವಚನಕಾರ್ತಿಯರು ತಮ್ಮ ವಚನಗಳಲ್ಲಿ ಶರಣರ ರೀತಿಯೇ ವಚನಗಳನ್ನು ರಚಿಸಿರುವುದು ಕಂಡುಬರುತ್ತದೆ.

ಗೊಗ್ಗವ್ವೆ ಜ್ಞಾನಕ್ಕೆ ಹೆಣ್ಣು-ಗಂಡು ಎಂಬ ಭೇದವಿಲ್ಲ ಎಂದು ಹೇಳಿ

'ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ ಹೆಣ್ಣೊ ಗಂಡೊ ನಾಸ್ತಿನಾಥಾ?'[20]

ಎಂದು ಹೇಳಿದರೆ,

ಸತ್ಯಕ್ಕ

'ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ.
ಕಾಸೆ ಮೀಸೆ ಕಠಾರಿ ಇದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ.
ಅದು ಜಗ ಹಾಹೆ; ಬಲ್ಲವರ ನೀತಿಯಲ್ಲ.
ಏತರ ಹಣ್ಣಾದಡು ಮಧುರವೆ ಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರಂದವ ನೀನೆ ಬಲ್ಲೆ ಶಂಭುಜಕೇಶ್ವರಾ'[21]

ಎಂದು ಹೆಣ್ಣಿನಲ್ಲಿಯ ಮಧುರದಂತೆ, ಪುಷ್ಪದಲ್ಲಿಯ ವಾಸನೆಯಂತೆ, ದೇಹದಲ್ಲಿ ಅಡಗಿರುವ ಆತ್ಮನಿಗೆ ಗಂಡು-ಹೆಣ್ಣು ಎಂಬ ಭೇದ ಕಲ್ಪಿಸುವುದು ಬಲ್ಲವರ ನೀತಿಯಲ್ಲ ಎಂದು ನುಡಿಯುತ್ತಾಳೆ.

ಹೀಗೆ ಗೊಗ್ಗವ್ವೆ, ಸತ್ಯಕ್ಕ ಇವರೆಲ್ಲಾ ನಿರೂಪಿಸುವಾಗ ಶರಣರ ಭಾಷೆ-ಪುರುಷರ ನಿರ್ಮಿತ ಭಾಷೆಯನ್ನೇ ಬಳಸಿರುವುದು ಕಂಡುಬರುತ್ತದೆ. ಅಂದರೆ, ಇಲ್ಲಿ ಸತ್ಯಕ್ಕ, ಗೊಗ್ಗವ್ವೆ ಇವರುಗಳು ಪುರುಷನ ಭಾಷೆಯಲ್ಲೇ ಹೆಣ್ಣನ್ನು ಸಮರ್ಥಿಸಲಿಕ್ಕೆ ಹೊರಟಿದ್ದಾರೆಯೆ ಹೊರತು, ತಮ್ಮದೊಂದು ಭಾಷೆಯನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡಿದಂತೆ ಕಾಣಿಸುವುದಿಲ್ಲ. ಆದರೆ, ಇತರ ವಚನಕಾರ್ತಿಯರಿಗಿಂತ ಶರಣ ಸಮುದಾಯದ ಎಷ್ಟೋ ತತ್ವಗಳನ್ನು ಒಪ್ಪಿಕೊಳ್ಳದಂತಹ, ಅಳವಡಿಸಿಕೊಳ್ಳದಂತಹ ಅಕ್ಕಮಹಾದೇವಿ ಮಾತ್ರ, ಸ್ತ್ರೀ ನಿರ್ಮಿತ ಭಾಷೆಯೊಂದನ್ನು ಕಟ್ಟುವ ಪ್ರಯತ್ನವನ್ನು ಮೊಟ್ಟ ಮೊದಲ ಬಾರಿಗೆ ಮಾಡುತ್ತಾಳೆ.

ಹಾಗಾಗಿಯೇ ಮಹಾದೇವಿಯಕ್ಕ ಪುರುಷ ನಿರ್ಮಿತ ಭಾಷೆಯನ್ನು ಒಡೆದು ಕಟ್ಟುವುದರ ಜತೆಗೆ ಸ್ತ್ರೀಯಾಗಿಯೇ ನಿಂತು ಯೋಚಿಸುತ್ತಾಳೆ. ಈ ನೆಲೆಯಲ್ಲಿ ಅಕ್ಕಮಹಾದೇವಿ ಉಳಿದ ವಚನಕಾರ್ತಿಯರಿಗಿಂತ ಭಿನ್ನಳಾಗಿ ಕಾಣುತ್ತಾಳೆ. ಅಲ್ಲದೆ, ಪುರುಷ ಸಮಾಜವೊಂದು ಸ್ತ್ರೀಯನ್ನು ಮಾಯೆ ಎಂದು ಚಿತ್ರಿಸಿ ಸ್ತ್ರೀಯನ್ನು ಅದರಾಚೆಗೆ ತರುವ ಪ್ರಯತ್ನದಲ್ಲಿದ್ದಾಗ ಅದಕ್ಕೆ ವಚನಕಾರ್ತಿಯರು ಕೂಡ ಬೆಂಬಲವನ್ನು ಕೊಟ್ಟಂತಹ ಸಂದರ್ಭದಲ್ಲಿ ಅಕ್ಕಮಹಾದೇವಿ ಮಾತ್ರ 'ಮಾಯೆ'ಯ ಪರಿಕಲ್ಪನೆಯನ್ನು ಹೆಣ್ಣಿನ ದೃಷ್ಟಿಯಿಂದಲೇ ಪರಿಶೀಲಿಸುವ ಯತ್ನ ಕಂಡುಬರುತ್ತದೆ.

'ಪುರುಷನ ಮುಂದೆ ಮಾಯೆ
ಸ್ತ್ರೀ ಎಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ
ಮರುಳಾಗಿ ತೋರುವುದು.
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ[22].

ಎಂದು ಹೇಳುತ್ತಾಳೆ. ಹೀಗೆ ಹೇಳುವಾಗ ಸ್ತ್ರೀಗೆ ಪುರುಷ ಮಾಯೆಯಾಗಿ ಪುರುಷನಿಗೆ ಸ್ತ್ರೀ ಮಾಯೆಯಾಗಿ ಕಾಡುವ ವಿಚಾರಗಳನ್ನು ಅಕ್ಕ ಸ್ತ್ರೀ ದೃಷ್ಟಿಕೋನದಲ್ಲಿ ಮೊದಲಿಗೆ ವಿವೇಚಿಸಿರುವುದು ಹಾಗೂ ಸ್ತ್ರೀ ಭಾಷೆಯೊಂದನ್ನು ಜತೆಗೆ ಸ್ತ್ರೀ ಆಲೋಚನೆಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ತಾತ್ವಿಕವಾದ ಕೆಲವು ವಿಚಾರಗಳಲ್ಲಿ ಶಿವಶರಣಯುಗದ ಚಿಂತನೆಗೆ ಸ್ತ್ರೀಯ ನೆಲೆಯಿಂದ ಕೆಲವಾದರೂ ಹೊಸ ಅಂಶಗಳನ್ನು ಒದಗಿಸಿಕೊಟ್ಟಾಕೆ ಅಕ್ಕ ಎನ್ನಬಹುದು.

ಅಕ್ಕ ನಾಗಮ್ಮ, ಮುಕ್ತಾಯಕ್ಕ ಮುಂತಾದವರ ಚಿಂತನೆಗಳು, ಶರಣರು ಪ್ರಚಲಿತಗೊಳಿಸಿದ ಸ್ತ್ರೀ ಸಂಬಂಧಿತ ತಾತ್ವಿಕೆ ನೆಲೆಯನ್ನು ಒಪ್ಪಿದಂತೆ ಹಾಗೂ ಹೊಂದಿಸಿಕೊಳ್ಳುವಂತೆ ತೋರಿದರೆ; ಮುಕ್ತಾಯಕ್ಕರವರಿಗಿಂತ ಕೆಳವರ್ಗದಿಂದ ಬಂದಂಥ ವಚನಕಾರ್ತಿಯರ ಚಿಂತನೆಗಳು ಅವರವರ ಪರಿಸರ, ಜೀವನ ವಿಧಾನ, ವೃತ್ತಿ ಮೂಲವಾದ ಅನುಭವಗಳಿಂದ ಹೆಚ್ಚು ಸತ್ವ ಪಡೆದಂತೆ ಕಂಡುಬರುತ್ತದೆ[23].

ಪತಿಯ ಪ್ರತೀಕದಲ್ಲಿ ಪರಮಾತ್ಮನ ಅನುಸಂಧಾನ ನಡೆಸುತ್ತಾಳೆ ಕದಿರ ರೆಮ್ಮವ್ವೆ. ಈಕೆಯ ಸತಿಪತಿ ಭಾವದ ಎರಡು ಮುಖಗಳಲ್ಲಿ ಲೋಕದ ಗಂಡರ ಪ್ರಾಕೃತಿಕ ಮಿತಿಗಳ ಸ್ಥಾಪನೆ ಮತ್ತು ಇದಕ್ಕೆ ವಿರುದ್ಧವಾಗಿರುವ ಪರದ ಗಂಡನ 'ಅತಿ ಮಾನವತೆ' ವಿವರಣೆಯಲ್ಲಿ ಲೌಕಿಕ ಸಂಸಾರದ ಅನುಭವದ ಅಂಶಗಳನ್ನೇ ಬಳಸಿಕೊಳ್ಳುತ್ತಾ ರೆಮ್ಮವ್ವೆ ಆಧ್ಯಾತ್ಮಿಕ ಅನುಭವಗಳನ್ನು ಹೇಳುತ್ತಾಳೆ.

ಎಲ್ಲರ ಹೆಂಡಿರು ತೊಳಸಿಕ್ಕುವುದು;
ಎನ್ನ ಗಂಡಂಗೆ ತೊಳಸುವುದಿಲ್ಲ,
ಎಲ್ಲರ ಗಂಡಂದಿರಿಗೆ ಬಸಿವರು;
ಎನ್ನ ಗಂಡಂತೆ ಬಸಿಯುವುದಿಲ್ಲ.
ಎಲ್ಲರ ಗಂಡಂದಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ;
ಎನ್ನ ಗಂಡ ಕೆಳಗೆ, ನಾ ಮೇಲೆ.
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ[24].

ಎಂಬಲ್ಲಿ ಪುರುಷ ಸಮಾಜದ ನೆಲೆಗಳನ್ನೇ ಪ್ರಶ್ನಿಸಿ ಸ್ತ್ರೀಯ ಪರಿಸರವೊಂದನ್ನು ನಿರ್ಮಿಸುವ ಆಲೋಚನೆ ಆಧ್ಯಾತ್ಮಿಕ ನೆಲಗಟ್ಟಿನಿಂದಾಚೆಗೆ ಚಿಮ್ಮಿವೆ. ಅಕ್ಕಮ್ಮ ಕೂಡ ಉರಿಲಿಂಗ ಪೆದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ರೀತಿಯೇ ವಿಪ್ರರನ್ನು ಕುರಿತು ಆಕ್ರೋಶಕ್ಕೆ ಒಳಗಾಗುತ್ತಾಳೆ. 'ವಿಪ್ರಂಗೆ ವೇದಮಂತ್ರವ ಬಿಟ್ಟು ವಿಜಾತಿಯಲ್ಲಿ ಬೆರಸಲಿಕ್ಕೆ ಸುಜಾತಿಗೆ ಹೊರಗಪ್ಪರು ನೋಡಾ'.[25] ಎಂಬಲ್ಲಿ ವಿಪ್ರರನ್ನು ಹಾಗೂ ಶರಣರನ್ನು ಬೆರೆಸಲಿಕ್ಕೆ ಸಾಧ್ಯವಿಲ್ಲ ಎನ್ನುತ್ತಾಳೆ. ಅಷ್ಟೇ ಅಲ್ಲದೆ,

'ವೇಷ ಎಲ್ಲಿರದು?
ಸೂಳೆಯಲ್ಲಿ, ಡೊಂಬನಲ್ಲಿ, ಬೈರೂಪನಲ್ಲಿರದೆ?
ವೇಷವ ತೋರಿ ಒಡಲು ಹೊರೆವ
ದಾಸಿ ವೇಶಿಯ ಮಕ್ಕಳಿಗೆ ನಿಜ ಭಕ್ತಿ ಎಲ್ಲಿಯದೊ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ?'[26]

ವೇಷ ಎಂಬುದು ಸೂಳೆಯಲ್ಲಿ, ಡೊಂಬನಲ್ಲಿ, ಬೈರಾಗಿಯಲ್ಲಿ ಎಲ್ಲರಲ್ಲೂ ಕೂಡ ಇರುತ್ತದೆ. ಆದರೆ, ವೇಷವನ್ನು ತೋರಿಸಿ ಒಡಲನ್ನು ಹೊರೆವ ವೇಶ್ಯೆಯ ಮಕ್ಕಳಿಗೆ ಎಂದಿಗೂ ಕೂಡ ನಿಜವಾದ ಭಕ್ತಿ ಬರುವುದಿಲ್ಲ ಎಂದು ಹೇಳುತ್ತಾಳೆ ಹೀಗೆ ಹೇಳುವಾಗ ಚೆನ್ನ ಬಸವಣ್ಣನ ಪ್ರಭಾವ ಇದ್ದಂತೆ ಕಾಣಿಸುತ್ತದೆ. ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯು ಕೂಡ ಪುರುಷ ಭಾಷೆಯಲ್ಲಿಯೇ ತನ್ನ ವಚನದಲ್ಲಿ ಆಲೋಚನೆಗಳನ್ನು ವಿವರಿಸಿದ್ದಾಳೆ. ಹೀಗೆ ವಿವರಿಸುವಾಗ ಹೆಣ್ಣು ಹೆಣ್ಣೊಬ್ಬಳನ್ನು ಅಸ್ಪೃಶ್ಯಳಾಗಿಯೇ ಕಾಣುವ ಮನೋಭಾವ ಕಂಡುಬರುತ್ತದೆ. ಹಾಗಾಗಿ ತನ್ನ ವಚನವೊಂದರಲ್ಲಿ

ಅಯ್ಯಾ, ಸೂಳೆಗೆ ಹುಟ್ಟಿದ ಮಕ್ಕಳಿಗೆ,
ಕೊಟ್ಟವರೊಳು ಸಮ್ಮೇಳ, ಕೊಡುವವರೊಳು ಕ್ರೋಧ.
ವ್ರತಹೀನರೊಳು ಮೇಳ, ವ್ರತನಾಯಕರೊಳು ಅಮೇಳ.
ಸುಡು ಸುಡು! ಅವರ ಕೂಡಿದಡೆ ಉರಿಲಿಂಗಪೆದ್ದಿಗಳ
ಅರಸನೊಲ್ಲನವ್ವಾ.[27]

ಇಲ್ಲಿ ಕಾಳವ್ವೆ ಸೂಳೆಗೆ ಹುಟ್ಟಿದ ಮಕ್ಕಳ ಜತೆ ಸಂಬಂಧವನ್ನು ವ್ರತಹೀನರ ಜತೆಗೆ ಹೋಲಿಸಿ ಮಾತನಾಡುತ್ತಾಳೆ. ಹಾಗಾಗಿಯೇ ಇವಳ ಪಾಲಿಗೆ ವ್ರತವೆಂಬುದು ನಾಯಕರತ್ನ. ಆದ್ದರಿಂದ ಸೂಳೆಯ ಮಕ್ಕಳ ಕೂಡಿದಡೆ ಅವರನ್ನು ಸುಡಬೇಕು ಎನ್ನುತ್ತಾಳೆ. ಇವರೆಲ್ಲ ಒಂದು ಕಡೆ ಶರಣರ ತತ್ವಗಳನ್ನು ಒಪ್ಪಿಕೊಂಡಂತೆ ಕಂಡರು ಇನ್ನೊಂದು ಕಡೆ ಧಿಕ್ಕರಿಸಿ ನಿಂತಂತೆ ಕಾಣುತ್ತದೆ. ಹೀಗೆ ಧಿಕ್ಕರಿಸಿದ್ದರಿಂದಲೋ ಏನೋ ಮತ್ತೆ ಬಸವಯುಗದ ನಂತರ ಸ್ತ್ರೀಯರ ಮೌಲ್ಯಗಳು ಅಧಃಪತನದ ಸ್ಥಿತಿಗೆ ಇಳಿದುಬಿಡುತ್ತದೆ.

'ಹೆಣ್ಣು ಹೊನ್ನು ಮಣ್ಣಿಗಾಗಿ ವ್ರತವೆಂಬ ನೇಮವ ಮಾಡಿಕೊಳ್ಳಬಹುದೆ?
ಕೂಲಿಗೆ ಬಳಿ ನೀರ ಕುಡಿದಡೆ ಅದಾರ ಮುಟ್ಟುವುದು?
ವಾಸಿಗೆ ಮೂಗನರಿದುಕೊಂಡಡೆ ನಾಚಿಕೆ ಯಾರಿಗೆಂಬುದನರಿದ ಮತ್ತೆ
ಇಂತಿವ ಹೇಸಿ ಶೀಲವಂತನಾಗಬೇಕು'[28]

ಎಂದು ಅಕ್ಕಮ್ಮ ಹೇಳುವಾಗ ಹೆಣ್ಣು ಹೊನ್ನು ಮಣ್ಣು ಎಂಬುದನ್ನು ಮಾಯೆ ಎಂಬ ಕಲ್ಪನೆಯಿಂದ ಹೊರಬರಲು ಶರಣನಾದವನು ವ್ರತವನ್ನು, ನೇಮವನ್ನು ಮಾಡಿಕೊಳ್ಳಬಹುದೆ? ಈ ಕಲ್ಪನೆಯನ್ನು ಮೀರಿದವನು ಮಾತ್ರ ನಿಜವಾದ ಶರಣನಾಗುತ್ತಾನೆ ಎಂದು ಹೇಳುತ್ತಾಳೆ. ಇದರ ಜತೆಗೆ ಗಡ್ಡ ನೆರತು ಹಿರಿಯರಾದ ತಕ್ಷಣ ಅವರು, ಅನುಭವದಲ್ಲೂ ಹಿರಿಯರು ಅಂದುಕೊಳ್ಳಲಾಗುವುದಿಲ್ಲ. ಅಂಥವರು ಆಚಾರವನ್ನು ಬಿಟ್ಟು ಅನಾಚಾರವನ್ನು ಕೈಗೊಂಡರೆ ನರಕಕ್ಕೆ ಹೋಗುತ್ತಾರೆ ಎಂದು ತಿಳಿಸುತ್ತಾಳೆ.

'ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ.
ಬಿಡಾರ ಬಿಡಾರವೆಂದು ಹಿರತನಕ್ಕೆ ಅಹಂಕರಿಸಿ.
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ,
ಭಕ್ತರೊಳು ಕ್ರೋಧ, ಭ್ರಷ್ಟರೊಳು ಮೇಳ–
ಇವರು ನರಕಕ್ಕೆ ಯೋಗ್ಯರು,
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ'.[29]

ಎಂದು ಹೇಳುತ್ತಾಳೆ.

ಅದೇ ರೀತಿ ಅಮ್ಮುಗೆ ರಾಯಮ್ಮ ಶರಣರಾದರು ಕೂಡ ಕಾಮ ವಿಕಾರಗಳನ್ನು ಬಿಡದವರನ್ನು ಕುರಿತು ನಿಂದಿಸುತ್ತಾಳೆ.

ಕಾವಿಕಾಷಾಂಬರವ ಹೊದ್ದು ಕಾಮ ವಿಕಾರಕ್ಕೆ ತಿರುಗುವ
ಕರ್ಮಿಗಳ ಮುಖವ ನೋಡಲಾಗದು
ಜಂಗಮವಾಗಿ ಜಗದಿಚ್ಛೆಯ ನುಡಿವ
ಜಂಗುಳಿಗಳ ಮುಖವ ನೋಡಲಾಗದು
ಲಿಂಗೈಕ್ಯರೆನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ
ಲಿಂಗದ್ರೋಹಿಗಳ ಮುಖವ ನೋಡಲಾಗದು
ಕಾಣಾ ಅಮುಗೇಶ್ವರಲಿಂಗವೇ.[30]

ಹಾಗಾಗಿ ಲಿಂಗದ್ರೋಹಿಗಳ ಮುಖವ ನೋಡಲಾಗದು ಎನ್ನುತ್ತಾಳೆ.

ಶರಣರು ಕಾಯಕ ತತ್ವವನ್ನು ಒಪ್ಪಿಕೊಂಡ ರೀತಿಯೆ 'ಆಸೆಯೆಂಬುದು ದುಃಖಕ್ಕೆ ಮೂಲ' ಎಂಬುದನ್ನು ಅರಿತವರು. ಆದ್ದರಿಂದಾಗಿಯೆ ತಮ್ಮ ಕಾಯಕದಲ್ಲಿ ಹಾಗೂ ಭಕ್ತಿಯಲ್ಲೂ ಕೂಡ ಆಸೆಯನ್ನು ದೂರವಿರಿಸಬೇಕು ಎಂದು ಹಾಗೂ ದ್ರವ್ಯದಿಂದ ಒದಗುವ ಕೇಡುಗಳನ್ನು ತಿಳಿಸುತ್ತಾ ಹೋಗುತ್ತಾರೆ. ಹೀಗೆ ತಿಳಿಸುವಲ್ಲಿ ಆಯ್ದಕ್ಕಿ ಲಕ್ಕಮ್ಮ ಪ್ರಮುಖಳಾಗಿ ನಿಲ್ಲುತ್ತಾಳೆ.

'ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡಿ;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಬದಲ್ಲಿ ಸುಜಲವ ತುಂಬಿದಂತೆ'[31]

ಎಂಬಲ್ಲಿ ಭಕ್ತಿ ಗರ್ವವನ್ನು ಹೊರತುಪಡಿಸಿರಬೇಕು. ಇಲ್ಲವಾದಲ್ಲಿ ತೋರಿಕೆಯ ಭಕ್ತಿಯಾಗಿ ದ್ರವ್ಯದ ಕೇಡು ಒದಗುವುದು ಎಂದು ತಿಳಿಸುತ್ತಾಳೆ. ಇದರ ಜತೆಗೆ ಮನ ಶುದ್ಧವಿದ್ದವನಿಗೆ ದ್ರವ್ಯದ ಬಡತನವಿರುವುದಿಲ್ಲ. ಹಾಗಾಗಿ ಚಿತ್ತ ಶುದ್ಧದಲ್ಲೇ ಕಾಯಕವನ್ನು ಮಾಡಿದಂಥ ಭಕ್ತನಿಗೆ ಎತ್ತ ನೋಡಿದರೂ ಲಕ್ಷ್ಮೀ ತಾನಾಗಿ ಒಲಿದು ಬರುತ್ತಾಳೆ ಎಂದು ತಿಳಿಸುತ್ತಾಳೆ.

ಸತ್ಯಕ್ಕ ಆಸೆಬುರುಕರನ್ನು ನಿಂದಿಸುವುದಕ್ಕಿಂತ ಮೊದಲು ತನ್ನಲ್ಲಿ ಆ ಆಸೆಯ ಗುಣಗಳಿಲ್ಲ ಎಂಬುದನ್ನು ತಿಳಿಯಪಡಿಸುತ್ತಾಳೆ.

'ಲಂಚವಂಚನಕ್ಕೆ ಕೈಯಾನದಭಾಷೆ.
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗ ಶಂಭುಕೇಶ್ವರಾ'[32]

ಸತ್ಯಕ್ಕ ತನ್ನನಷ್ಟೇ ಆಸೆಯಿಂದ ವಿಮುಕ್ತಳಾಗಿಸಿಕೊಳ್ಳಲು ನೋಡುತ್ತಿದ್ದಾಳೆಯೇ ಹೊರತು ಇತರ ಶರಣರನ್ನು ಆಸೆಯೆಂಬ ಭವ ಬಂಧನದಿಂದ ಬಿಡಿಸಿಕೊಳ್ಳಲು ಇತರರಂತೆ ಉಪದೇಶಿಸುತ್ತಿಲ್ಲ. ಹಾಗೇ ನೋಡಿದರೆ, ಇಲ್ಲಿ ಸತ್ಯಕ್ಕ ಶರಣೆಯಾಗಲು ಶರಣತ್ವದ ಗುಣವನ್ನು ಮೈಗೂಡಿಸಿಕೊಳ್ಳಲು ತನ್ನತನವನ್ನು ರೂಪಿಸಿಕೊಳ್ಳುತ್ತಿದ್ದಾಳೆ. ಆದರೆ, ಆಯ್ದಕ್ಕಿ ಲಕ್ಕಮ್ಮ ಹಾಗೂ ಇತರ ವಚನಕಾರ್ತಿಯರು ಶರಣರು ಹೇಗಿರಬೇಕು. ಆಸೆಯಿಂದ ಮುಕ್ತರಾಗಿರಬೇಕೆ? ಎಂದು ತಿಳಿಸುತ್ತಾಳೆ. ಆದರೆ, ಸತ್ಯಕ್ಕ ಮಾತ್ರ ಇಂಥ ಗೋಜಿಗೆ ಹೋಗುವುದಿಲ್ಲ. ತನ್ನನ್ನು ತಾನು ಶರಣೆಯಾಗಿ ರೂಪಿಸಿಕೊಳ್ಳಲು ಹೆಣಗಿದಂತೆ ಕಾಣುತ್ತದೆ.

ಕನ್ನಡಿ ಕಾಯಕದ ರೇವಮ್ಮ ವ್ರತಭ್ರಷ್ಟರನ್ನು ಹಾಗೂ ಭವಿಗಳನ್ನು ಕುರಿತು ಈ ರೀತಿಯ ನಿಲುವನ್ನು ಸೂಚಿಸುತ್ತಾಳೆ.

ಕೈಯಲ್ಲಿ ಕನ್ನಡಿ ಇರಲು ತನ್ನತಾ ನೋಡಬಾರದೆ?
ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ
ಕೊಂದಡೆ ಮುಕ್ತಿ ಇಲ್ಲ ಎಂಬರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನ್ನಿಕ್ಕುವೆ.
ಮುಂಡಿಗೆಯನ್ನೆತ್ತಿರೋ ಭ್ರಷ್ಟಭವಿಗಳಿರಾ!
ಎತ್ತಲಾರದಡೆ ಸತ್ತ ಕುನ್ನಿನಾಯ ಬಾಲವ
ನಾಲಗೆ ಮುರುಟಿರೋ ಸದ್ಗುರು ಸಂಗ ನಿರಂಗಲಿಂಗದ್ದಲ್ಲಿ[33]

ಇಲ್ಲಿ ರೇವಮ್ಮ ತನ್ನ ಕಾಯಕದ ಜತೆಗೆ ಶರಣೆಯರಾಗಿ ಶರಣತ್ವವನ್ನು ಅನುಸರಿಸದೇ ಇರುವವರನ್ನು ಕುರಿತು ಕೊಲ್ಲಬೇಕು ಎನ್ನುತ್ತಾಳೆ. ಅಹಿಂಸೆಯೇ ಪರಮ ಧರ್ಮ ಎಂದು

ತಿಳಿಸಿದರೆ ಕೊಲ್ಲಬಾರದು ಎಂದು ಹೇಳಿದವರ ಬಾಯಲ್ಲಿ ಪಡಿಹಾರನ ಪಾದರಕ್ಷೆಯನ್ನು ಇಕ್ಕುವೆ ಎನ್ನುತ್ತಾಳೆ. ರೇವಮ್ಮನಿಗೆ ಇಲ್ಲಿ ಅಹಿಂಸಾ ತತ್ವಕ್ಕಿಂತ ಹೆಚ್ಚಾಗಿ ತನ್ನ ಶರಣತ್ವದ ನಿಯಮಗಳೇ ಆಕೆಗೆ ಮುಖ್ಯವಾಗಿವೆ.

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ 'ಅಯ್ಯಾ ದುರಳಕಾಮಿನಿಯರಿಗೆ ಎರಗು ಹೊಲೆ ಮನಸೆ'.[34] ಎಂದು ಮನಸ್ಸಿನಲ್ಲಿ ಕಾಮವನ್ನು ಇರಿಸಿಕೊಂಡ ಕಾಮಿನಿಯರ ಮೋಹಕ್ಕೆ ಒಳಗಾದ ಶರಣರನ್ನು ಕುರಿತು ನಿಂದಿಸುವುದರ ಜತೆಗೆ ಹಲವರಿಗೆ ಹಲ್ಲದೆರದು ಹಲವರಿಗೆ ಬೋಧಿಸಿ ತನ್ನ ಉದರವ ಹೊರೆವ ಸಂದೇಹಿಗಳನ್ನು ಕಂಡು ತನ್ನ ಮನದಲ್ಲಿಯೇ ಸಂದೇಹಿಸುತ್ತಾಳೆ.

ಮುಕ್ತಾಯಕ್ಕನು ಶರಣರು ಹೇಗಿರಬೇಕು ಎಂಬ ಹಿತನುಡಿಗಳನ್ನು ನೀಡುತ್ತಾಳೆ.

'ನುಡಿಯಲುಬಾರದು ಕೆಟ್ಟ ನುಡಿಗಳ.
ನುಡಿಯಲುಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದ ವ್ರತ ಬಿಡದಿರಲು ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣತಂದೆ[35]

ಎಂದು ಶರಣನಾದವನು ಕೆಟ್ಟ ನುಡಿಗಳನ್ನು ಕೆಟ್ಟ ನಡತೆಗಳನ್ನು ನುಡಿಯಬಾರದು. ನುಡಿದರೂ ನುಡಿಯದಿದ್ದರೂ ಹಿಡಿದ ವ್ರತವನ್ನು ಮಾತ್ರ ಬಿಡಬಾರದು. ಹೀಗೆ ಹೇಳುವಲ್ಲಿ ಮುಕ್ತಾಯಕ್ಕನಿಗೆ ಶರಣನೊಬ್ಬನ ನಡೆನುಡಿಗಿಂತ ವ್ರತವೇ ಮುಖ್ಯವಾಗಿ ಕಾಣಿಸುತ್ತದೆ.

ಬಸವಣ್ಣನವರು 'ನುಡಿದರೆ ಮುತ್ತಿನಹಾರದಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ ಶಿವಮೆಚ್ಚಿ ಅಹುದು ಅಹುದು ಎನಬೇಕು.' ಎಂದು ತಿಳಿಸುವಾಗ ಇಲ್ಲಿ ಮನುಷ್ಯನೊಬ್ಬ ನುಡಿದಂತೆ ನಡೆಯಬೇಕು ಎಂದು ತಿಳಿಸಿದರೆ, ಮುಕ್ತಾಯಕ್ಕ ಮಾತ್ರ ನಡೆ ನುಡಿಗಿಂತ ಆಕೆಗೆ ವ್ರತವೇ ಹೆಚ್ಚಾಗಿ ಕಾಣಿಸುತ್ತದೆ. ಮುಕ್ತಾಯಕ್ಕನ ರೀತಿಯೇ ರೇವಣ್ಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮನು ಕೂಡ ಶರಣನಾದವನು ಹೇಗಿರಬೇಕು ಎಂಬುದನ್ನು ತಿಳಿಸುತ್ತಾಳೆ.

ಲಿಂಗಬಾಹ್ಯನ, ಆಚಾರಭ್ರಷ್ಟನ, ವ್ರತ ತಪ್ಪುಕನ,
ಗುರುಲಿಂಗ ಜಂಗಮನ ಕೊಂದವನ,
ಪಾದೋದಕ ಪ್ರಸಾದ ಧೂಷಕನ,
ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ,
ಶಕ್ತಿಯುಳ್ಳಡೆ ಸಂಹಾರವ ಮಾಡುವುದು,
ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡ
ಶಿವಮಂತ್ರ ಜಪಿಸುವುದು.
ಅಷ್ಟು ಆಗದಿದ್ದಡೆ, ಆ ಸ್ಥಳವ ಬಿಡುವುದು.
ಅದಲ್ಲದಿದ್ದಡೆ, ಕುಂಬೀಪಾತಕ ನಾಯಕ ನರಕದಲ್ಲಿಕ್ಕುವ
ಶ್ರೀ ಗುರುಸಿದ್ಧೇಶ್ವರನು.[36]

ಸತ್ಯಕ್ಕನು ಕೂಡ ಇತರ ವಚನಕಾರ್ತಿಯರಂತೆ ಆಚಾರವೇ ಪ್ರಧಾನವಾಗಿ ಇಟ್ಟುಕೊಂಡು, ಶರಣರಾದವರು ಹೇಗಿರಬೇಕು ಎಂದು ತಿಳಿಸುತ್ತಾಳೆ.

'ಅರ್ಚನೆ ಪೂಜನೆ ನೇಮವಲ್ಲ;
ಮಂತ್ರ ತಂತ್ರ ನೇಮವಲ್ಲ;
ಧೂಪ ದೀಪದಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇ ನೇಮ.
ಶಂಭುಕೇಶ್ವರನಲಿ ಇವು ಕಾಣಿರಣ್ಣಾ ನಿತ್ಯ ನೇಮ.[37]

ಎನ್ನುವಾಗ ಶರಣನೊಬ್ಬನ ನಿಜವಾದ ನೇಮ ಹಾಗೂ ವ್ರತ ಪರಧನಗಳನ್ನು, ಪರಸ್ತ್ರೀಯನ್ನು, ಪರದೈವವನ್ನು ಒಲ್ಲೆನೆಂಬ ಮನಸ್ಸಿರಬೇಕಾದುದೇ ವ್ರತ ಎಂದು ಹೇಳುತ್ತಾಳೆ. ಇಲ್ಲಿ ಸತ್ಯಕ್ಕನ ನೇಮದ ಆಚರಣೆಗೂ ಅಕ್ಕಮನ ವ್ರತದ ಆಚರಣೆಗೂ ವ್ಯತ್ಯಾಸವಿರುವುದನ್ನ ಕಾಣಬಹುದು.

ಸತ್ಯಕ್ಕ ಪರಧನ, ಪರಸ್ತ್ರೀ, ಪರದೈವಗಳನ್ನು ಒಪ್ಪದೇ ಇರುವುದೇ ನಿಜವಾದ ನೇಮ ಎನ್ನುತ್ತಾಳೆ. ಆದರೆ, ಅಕ್ಕಮ್ಮನೋ ಹೆಣ್ಣು, ಹೊನ್ನು, ಮಣ್ಣಿಗಾಗಿ ವ್ರತವೆಂಬ ನೇಮವನ್ನು ಮಾಡಬಾರದು ಎಂದು ಮಾಡಿದರೆ ಅಂತಹ ಗುಣಕ್ಕೆ ನಾಚಬೇಕಾಗುತ್ತದೆ ಎಂದು ಹೇಳುತ್ತಾಳೆ. ಅಂದರೆ, ಸತ್ಯಕ್ಕನಿಗೆ ಒಪ್ಪಿತವಾದ ಶರಣರ ಪರಧನ, ಪರಸ್ತ್ರೀ, ಪರದೈವಗಳ ವಿಚಾರ ಅಕ್ಕಮ್ಮನಿಗೆ ಪ್ರಶ್ನೆಯಾಗಿ ಕಾಡುತ್ತವೆ.

ಜಾತಿ ವ್ಯವಸ್ಥೆಯೊಂದನ್ನು ಧಿಕ್ಕರಿಸಿ ಹೊಸ ಸಮಾಜ ನಿರ್ಮಾಣದ ಕನಸು ಕಂಡ ಬಸವಣ್ಣ, ಚೆನ್ನಬಸವಣ್ಣನವರಿಗೆ ಶರಣರು ಶರಣರ ಸಮಾಜವೊಂದನ್ನು ನಿರ್ಮಿಸಲು ಸಾಧ್ಯವಾಯಿತು. ಈ ಶರಣ ಸಮಾಜದಲ್ಲಿ ತನ್ನನ್ನು ಗುರುತಿಸಿಕೊಂಡ ಶರಣ ಶರಣೆಯರು ತಮ್ಮ ಹೊಸ ವ್ಯಕ್ತಿತ್ವವೊಂದನ್ನು ಶರಣ ಸಮಾಜದಲ್ಲಿ ಕಟ್ಟಲು ಪ್ರಯತ್ನಿಸಿದರು. ಹೀಗೆ ಕಟ್ಟಿಕೊಂಡ ಶರಣ ವ್ಯಕ್ತಿತ್ವದಿಂದ ವೈದಿಕ ಸಮಾಜವನ್ನು ನೋಡಲು ಪ್ರಯತ್ನಿಸಿದಾಗ ಕಂಡ ಆ ವೈದಿಕ ಸಮಾಜದ ಕಟ್ಟು-ಕಟ್ಟಳೆಯನ್ನು ಹಡದಪ್ಪಣನ ಪುಣ್ಯಸ್ತ್ರೀ ಲಿಂಗಮ್ಮ ಹೀಗೆ ವಿವರಿಸುತ್ತಾಳೆ.

'ಬಟ್ಟ ಬಯಲಲ್ಲಿ ಒಂದ ಶರಧಿ ಹುಟ್ಟಿತ್ತು.
ಆ ಶರಧಿಯ ನಡುವೆ ಒಂದು ಕಮಲ ಹುಟ್ಟಿತ್ತು.
ಆ ಕಮಲದ ನೆಲೆಯ ಕಾಣಲರಿಯದೆ ತೊಳಲಿ ಬಳಲಿ,
ಜಗದೊಳಗೆ ನಚ್ಚು ಮೆಚ್ಚಿಗೊಳಗಾಗಿ, ಚುಚ್ಚಳ ಪೂಜೆಗೆ ಸಿಲುಕಿ,
ಕುಲಕ್ಕೆ ಛಲಕ್ಕೆ ಕೊಂದಾಡಿ, ಭವಕ್ಕೆ ಗುರಿಯಾಗುವ
ಮನುಜರ ಕಂಡು ನಾಚಿತ್ತೆನ್ನ ಮನವು.
ಆ ಮನದ ಬೆಂಬಳಿಗೊಂಡು ಹೋದವರೆಲ್ಲ ಮರುಳಾಗಿ ಹೋದರು.
ಇದರ ನೋಡಿ ನಾನು ಬಟ್ಟ ಬಯಲಲ್ಲಿ ನಿಂದು ನೋಡಿದಡೆ,
ಶರಧಿ ಬತ್ತಿತ್ತು; ಕಮಲ ಕಾಣಬಂದಿತ್ತು.
ಆ ಕಮಲ ವಿಕಾಸವಾಯಿತ್ತು; ಪರಿಮಳವೆಂಬ ವಾಸನೆ ತೀಡಿತ್ತು.

ಆ ವಾಸನೆವಿಡಿದು ಜಗದಾಸೆಯ ಹಿಂಗಿ ಮಾತು ಮಥನವ ಕೆಡಿಸಿ,
ಮಹಾಜ್ಯೋತಿಯ ಬೆಳಗಿನಲ್ಲಿ ಓಲಾಡುವ ಶರಣರ
ಆಸೆ ರೋಷ ಪಾಷಕ್ಕೊಳಗಾದ ಈ ಜಗದ ಹೇಸಿಗಳೆತ್ತ ಬಲ್ಲರು.
ಈ ಮಹಾಶರಣ ನೆಲೆಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ?[38]

ಲಿಂಗಮ್ಮ ನಿಂತದ್ದು ಬಟ್ಟ ಬಯಲಿನಲ್ಲಿ. ಆ ಬಯಲು ಶರಣ ಸಮುದಾಯ, ಇಲ್ಲಿಂದ ನೋಡಿದಾಗ ವೈದಿಕ ಸಮಾಜ ಶರಧಿಯಂತೆ ಕಂಡಿತು. ಆ ಶರಧಿಯೊಳಗೆ ಕಂಡ ಕಮಲವೇ ಶರಣ ಸಮಾಜ. ಆ ಶರಣ ಸಮಾಜ ನೋಡಲು ಹೋದಾಗ ಶರಧಿಯ ನೀರು ಹಿಂಗಿ ಅದು ಕೂಡ ಶರಣ ಸಮುದಾಯವೇ ಆಯಿತು. ಎಂದು ಶರಣರ ನೆಲೆಯನ್ನು ವಿವರಿಸುತ್ತಾಳೆ. ಮುಂದುವರೆದು

ಮರ್ತ್ಯದಲ್ಲಿ ಹುಟ್ಟಿ ಎತ್ತಲೆಂದರಿಯದೆ, ಕತ್ತಲೆಯೊಳು ಮುಳುಗಿ,
ಕಾಮನ ಬಲೆಯೊಳಗೆ ಸಿಕ್ಕಿದ ಎಗ್ಗ ಮನುಜರಿರಾ, ನೀವು ಕೇಳಿರೋ.
ನಿಮ್ಮ ಇರವು ಎಂತೆಂದಡೆ:
ಕಾಯವೆಂದಡೆ ಕಳವಳಕ್ಕೊಳಗಾಯಿತ್ತು;
ಜೀವವೆಂದಡೆ ಅರುಹು ಮರವೆಗೊಳಗಾಯಿತ್ತು;
ಮನವೆಂದಡೆ ಸಚರಾಚರವನೆಲ್ಲವ ಚರಿಸುವುದಕ್ಕೆ ಒಳಗಾಯಿತ್ತು;
ಪ್ರಾಣವೆಂದಡೆ ಇವೆಲ್ಲವನು ಆಡಿಸಿ ನೋಡುವುದಕ್ಕೆ ಒಳಗಾಯಿತ್ತು.
ಇವರೊಳಗೆ ಬಿದ್ದು ಏಳಲಾರದ ಬುದ್ಧಿಹೀನರಿರಾ, ನೀವು ಕೇಳಿ,
ಹೇಳಿಹೆನು.
ನಮ್ಮ ಶರಣರು ಜಗದೊಳಗೆ ಹುಟ್ಟಿ ಜಗವನೆ ಮರೆದು,
ಎಚ್ಚತ್ತು ಚಿತ್ತವ ಸುಯಿದಾನವ ಮಾಡಿ,
ಕಳವಳಕ್ಕೊಳಗಾಗಿದ್ದ ಕಾಯವನೆ ಸರ್ವಾಂಗ ಲಿಂಗವ ಮಾಡಿದರು
ಅರಹು ಮರವೆಗೊಳಗಾಗಿದ್ದ ಜೀವನ ಬುದ್ಧಿಯನೆ
ಪರಮನ ಬುದ್ಧಿಯನೆ ಮಾಡಿದರು.
ಈ ಸರ್ವಾಂಗವನು ಲಿಂಗವ ಮಾಡಿ
ಆ ಲಿಂಗವನು ಕಂಗಳ ಎರೆಹಿಂಗದೆ ನೋಡಿ
ಆ ಮಂಗಳ ಮಹಾ ಬೆಳಗಿನಲಿ ಬಯಲಾದರಯ್ಯಾ[39]

ಎಂದು ಈಕೆ ಕಾಮುಕರಾದ ಮನುಜರನ್ನು ಕುರಿತು ಈ ರೀತಿ ಹೇಳುತ್ತಾಳೆ. ಮರ್ತ್ಯದಲ್ಲಿ ಹುಟ್ಟಿ ಕತ್ತಲೆಯಲ್ಲಿ ಮುಳುಗಿ ಕಾಮನ ಬಲೆಗೆ ಸಿಕ್ಕಿದ್ದ ಮನುಜರನ್ನು ಕುರಿತು ಕಾಯ, ಜೀವ, ಮನ, ಪ್ರಾಣ–ಇವುಗಳಲ್ಲಿ ಬಿದ್ದು ಹೇಳಲಾರದ ಬುದ್ಧಿಹೀನಗಳಿರಾ, ಜಗತ್ತಿನಲ್ಲಿ ಹುಟ್ಟಿ ಜಗತ್ತನೇ ಮರೆತ ಶರಣರಿಗೆ ಸರ್ವಾಂಗವನ್ನು ಲಿಂಗವ ಮಾಡಿ ಮಹಾಬೆಳಗನ್ನು ತೋರಿಸಿ ಬಯಲಾದರೆಂದು ತಿಳಿಸುತ್ತಾಳೆ.

'ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ,
ಸತ್ಯ ಶರಣರ ಪಾದವಿಡಿದೆ.
ಈ ಶರಣರ ಪಾದವಿಡಿದು ಗುರುವ ಕಂಡೆ, ಲಿಂಗವ ಕಂಡೆ,

ಜಂಗಮವ ಕಂಡೆ, ಪಾದೋದಕವ ಕಂಡೆ, ಪ್ರಸಾದವ ಕಂಡೆ.
ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು.
ಕಂಗಳ ಮುಂದಣ ಕತ್ತಲೆ ಹರಿಯಲೊಡನೆ,
ಮಂಗಳ ಮಹಾ ಬೆಳಗಿನೊಳಗೋಲಾಡಿ ಸುಖಿಯಾದನೆಯ್ಯಾ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ.'[40]

ಎನ್ನುವಲ್ಲಿ ಲಿಂಗಮ್ಮ ತನ್ನನ್ನು ತಾನು ಕನಿಷ್ಠ ಜಾತಿಯಲ್ಲಿ ಹುಟ್ಟಿದರೂ ಕೂಡ ಉತ್ತಮ ಜಾತಿಗೆ ಬರಲಿಕ್ಕೆ ಸಾಧ್ಯವಾದದ್ದು, ಶರಣರಿಂದಲೇ ಎಂದು ಹೇಳಿಕೊಳ್ಳುತ್ತಾಳೆ. ಈ ಸತ್ಯ ಶರಣರ ಪಾದವಿಡಿದಿದ್ದರಿಂದಲೇ ಕನಿಷ್ಠ ಜಾತಿಯ ಕಳಂಕ ತೊಲಗಿ ಕಂಗಳ ಮುಂದಿನ ಕತ್ತಲೆ ಹರಿದು ಮಂಗಳ ಮಹಾ ಬೆಳಗಾದ ಸಮಾನತೆಯ ತತ್ವದ ಅಡಿಯಲ್ಲಿ ನಿರ್ಮಾಣವಾದ ಶರಣ ಸಮುದಾಯವೊಂದನ್ನು ಕಾಣಲು ಅದರಲ್ಲಿ ಸೇರಲು ಸಾಧ್ಯವಾಯಿತು ಎಂದು ಲಿಂಗಮ್ಮ ಹೇಳಿಕೊಳ್ಳುತ್ತಾಳೆ.

ಹೀಗೆ ಹೇಳಿಕೊಳ್ಳುವಾಗ ಕನಿಷ್ಠದಲ್ಲಿ ಹುಟ್ಟಿದೆ ಎಂಬುದು ಈಕೆಗೂ ಕೂಡ ಸಹಿಸಲಾಗದ ಜಾತಿ ವ್ಯವಸ್ಥೆಯಾಗಿದೆ. ಆದ್ದರಿಂದಾಗಿಯೇ ವೈದಿಕ ಧರ್ಮದ ತಳಹದಿಯಲ್ಲಿದ್ದ ಜಾತಿ ಪದ್ಧತಿಯನ್ನು ಹೋಗಲಾಡಿಸಿದಂತಹ ಶರಣರ ಪಾದವನ್ನು ಹಿಡಿಯುವೆ ಎಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಾಳೆ. ಇದರ ಜತಗೆ ಶರಣನಾದ ಮೇಲೆ ಹೇಗಿರಬೇಕು, ಈ ಶರಣ ಸಮುದಾಯದಲ್ಲಿ ಎಂದು ತಿಳಿಸುತ್ತಾಳೆ.

'ಅಂತರಂಗ ಬಹಿರಂಗ ಶುದ್ಧವಿಲ್ಲದೆ, ನುಡಿವರು ಸಂತೆಯ ಸೂಳೆಯರಂತೆ.
ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ.
ಅಂತರಂಗವೆಲ್ಲ ಅರುಹಾಯಿತ್ತು; ಬಹಿರಂಗದಲ್ಲಿ ಲಿಂಗವಾಯಿತ್ತು.
ಆ ಲಿಂಗದಲ್ಲೆ ನುಡಿದು, ಲಿಂಗದಲ್ಲೆ ನಡೆದು,
ಲಿಂಗದಲ್ಲೆ ಮುಟ್ಟಿ, ಲಿಂಗದಲ್ಲೆ ವಾಸಿಸಿ,
ಲಿಂಗದಲ್ಲೆ ಕೇಳಿ, ಲಿಂಗವಾಗಿ ನೋಡಿ,
ಸರ್ವಾಂಗವೂ ಲಿಂಗವಾಗಿ, ಆ ಲಿಂಗವ ನೋಡುವ ಕಂಗಳಲ್ಲೇ ಐಕ್ಯ.
ಕಂಡೆಯಾ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ.'[41]

ಎನ್ನುವಾಗ ಶರಣನಾದವನು ಮಾತ್ರ ಅಂತರಂಗ ಬಹಿರಂಗ ಶುದ್ಧಿಯನ್ನು ಉಳ್ಳವನು. ಇದಕ್ಕೆ ಕಾರಣ ಅಂತರಂಗ ಅರುಹಾಗಿ ಬಹಿರಂಗ ಲಿಂಗವಾಗಿರುವುದೇ ಕಾರಣ. ಆದರೆ, ಅಂತರಂಗ ಬಹಿರಂಗ ಶುದ್ಧವಿಲ್ಲದೆ ಭವಿಗಳು ನುಡಿದರೆ ಅದು ಸಂತೆಯ ಸೂಳೆ ನುಡಿದಂತೆ ಎಂದು ಹೇಳುತ್ತಾಳೆ ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ.

ಕುರಂಗೇಶ್ವರ ಲಿಂಗ ಎಂಬ ಅಂಕಿತನಾಮ ಉಳ್ಳ ವಚನಕಾರ್ತಿ ಶರಣಸಮುದಾಯದ ಜತೆ ಭವಿಗಳನ್ನು ನೋಡುವಲ್ಲಿ ಸಮಾಜವನ್ನು ಮತ್ತೆ ಭಕ್ತ–ಭವಿ ಎಂದು ವಿಂಗಡಿಸಿಕೊಂಡಂತೆ ಕಾಣಿಸುತ್ತದೆ. ಈಕೆಯ ಒಂದು ವಚನ ಮಾತ್ರ ಸಿಕ್ಕಿದೆ.

ಕಟ್ಟಕಡೆಯ ಕಟ್ಟಲು ಬಲಿವುದೆ?
ವ್ರತ ಹೋದಲ್ಲಿ ವ್ರತ ಒಪ್ಪುವುದೆ?
ಕೆಟ್ಟ ಕಣ್ಣಿಗೆ ದೃಷ್ಟಿಯುಂಟೆ?
ಭವಹರಕುರಂಗೇಶ್ವರಲಿಂಗ?[42]

ಒಂದು ಬಾರಿ ಶರಣನಾಗಿ ಶರಣ ಸಮುದಾಯವನ್ನು ಒಪ್ಪಿಕೊಂಡವನು; ಶರಣತ್ವವನ್ನು ತಪ್ಪಿ ನಡೆದರೆ ಶರಣ ಸಮುದಾಯ ಆತನನ್ನು ಶರಣನೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಕೆಟ್ಟ ಕಣ್ಣು ಅನ್ನುವುದು ಪುರುಷ ಸಮಾಜದ ಸ್ತ್ರೀ ಮೇಲಿನ ವ್ಯಾಮೋಹದ ನೋಟವೇ ಆಗಿರುತ್ತದೆ. ಶರಣನಾದವನು ಕೆಟ್ಟ ದೃಷ್ಟಿಯಿಂದ ದೂರವಿರಬೇಕು. ಇಲ್ಲವಾದಲ್ಲಿ ಅಂಥವರನ್ನು ಭವಹರನಾದಂಥ ಕುರಂಗೇಶ್ವರಲಿಂಗ ಒಪ್ಪಿಕೊಳ್ಳುವುದಿಲ್ಲ ತಿಳಿಸುತ್ತಾಳೆ.

ಮಸಣ್ಣಯ್ಯಪ್ರಿಯ ಮಾರೇಶ್ವರಲಿಂಗ ಎಂಬ ಅಂಕಿತವುಳ್ಳ ವಚನಕಾರ್ತಿಯು ತನ್ನ ವಚನದಲ್ಲಿ ಉತ್ತಮರು ಮತ್ತು ಹೊಲೆಯರು ಎಂಬ ಜಾತಿಗಳನ್ನು ಹಿಡಿದು ಮಾತನಾಡುವ ಹಾಗೂ ಚರ್ಮ, ಮಾಂಸ, ಶುಕ್ಲ ಶೋಣಿತದ ಗುಡಿಯ ಕಟ್ಟುವವರನ್ನು ಹೊಲೆಯರೆಂದು ಕರೆಯುತ್ತಾಳೆ.

'ಅಯ್ಯಾ, ಅಸ್ಥಿ ಚರ್ಮ ಮಾಂಸ ಶುಕ್ಲ ಶೇಣಿತದ ಗುಡಿಯ ಕಟ್ಟಿ,
ಹಂದಿಯ ದೇವರ ಮಾಡಿ ಕುಳ್ಳಿರಿಸಿ,
ಪಾದರಕ್ಷೆಯ ಪೂಜೆಯ ಮಾಡಿ
ನೈವೇದ್ಯವ ಹಿಡಿದು, ಮೂತ್ರದ ನೀರ ಕುಡಿಸಿ,
ಶ್ವಾನ ಕುಕ್ಕಟನಂತೆ ಕೂಗಿ ಬೊಗುಳಿ,
ದಡದಡ ನೆಲಕ್ಕೆ ಬಿದ್ದು ಕಾಡಿ ಕೊಂಡು
ಆ ದೇವರ ಒಡೆಯ ಮಾರೇಶ್ವರ
ಕಂಡ ಹೆಂಡ ಕೊಡುವವನಲ್ಲದೆ ಅನ್ನ ನೀರು ಕೊಡುವನೆ?
ಆ ದೇವರಿಗೆ ಹೊಲೆಯರು ಮಚ್ಚುವರಲ್ಲದೆ,
ಉತ್ತಮರು ಮಚ್ಚರು ನೋಡಯ್ಯ,
ಮಸಣಯ್ಯಪ್ರಿಯ ಮಾರೇಶ್ವರಲಿಂಗವೆ.'[43]

ಎನ್ನುವಾಗ ಮಾರೇಶ್ವರಲಿಂಗವನ್ನಲ್ಲದೆ, ಅನ್ಯ ದೈವವನ್ನು ಪೂಜೆ ಮಾಡಿದರೆ ಮಾರೇಶ್ವರ ಕಂಡ ಹೆಂಡ ಕೊಡುವನೇ ಹೊರತು ಅನ್ನ ನೀರನ್ನು ಕೊಡುವುದಿಲ್ಲ. ಅಲ್ಲದೆ, ಹಂದಿ ದೇವರ ಮಾಡಿ ಕುಳ್ಳಿರಿಸಿ ಪಾದರಕ್ಷೆಗೆ ಪೂಜೆ ಮಾಡುವವರು ಹೊಲೆಯರೇ ಹೊರತು ಉತ್ತಮರಲ್ಲ ಎನ್ನುತ್ತಾಳೆ.

ಈ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಕಂಡುಬರುವ ಒಟ್ಟಾರೆ ಸಾಮಾಜಿಕ ಚಿಂತನೆ ಎಂದರೆ, ಕೆಳವರ್ಗದಿಂದ ಬಂದು ತಮ್ಮ ಜಾತಿ ಸೂಚಕ ವೃತ್ತಿಗಳನ್ನೇ ಶರಣೆಯರಾದ ನಂತರವೂ ಮುಂದುವರೆಸುತ್ತಾ ಹೋದಾಗಲೂ ತಮ್ಮನ್ನು ಆ ಜಾತಿಗೆ ಅಂಟಿದ ಕಳಂಕದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಂತೆ ಕಾಣಿಸುತ್ತದೆ. ಹನ್ನೆರಡನೇ ಶತಮಾನದ ವಚನ

ಚಳುವಳಿಯನ್ನು ಸಮಾಜೋ–ಧಾರ್ಮಿಕ–ರಾಜಕೀಯ ಚಳುವಳಿ ಅನ್ನುವುದಕ್ಕಿಂತ ಎಲ್ಲವನ್ನು ಒಳಗೊಂಡ ಬಹುಮುಖ್ಯ ಸಾಂಸ್ಕೃತಿಕ ಚಳುವಳಿ ಎಂದು ಗುರುತಿಸಬಹುದು. ಸಮಾಜದಲ್ಲಿ ರೂಢಿಗತವಾಗಿ ಬಂದಿರುವ ಜಾತಿ ಪದ್ಧತಿ, ಅಸ್ಪೃಶ್ಯತೆ ಇವುಗಳೆಲ್ಲವನ್ನೂ ಕೂಡ ಧಿಕ್ಕರಿಸಿ ನಿಲ್ಲುವ ಮನೋಧರ್ಮ ಕೆಳವರ್ಗದ ಪುರುಷರಿಗೆ ಇಲ್ಲದೇ ಇರುವಾಗ ಬಸವಣ್ಣನಂಥವನ ನೇತೃತ್ವದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

ಆದರೆ, ಶರಣಯುಗದ ಮಹಿಳೆಯರಿಗೆ ಬಸವಣ್ಣನ ರೀತಿ ಒತ್ತಾಸೆ ನೀಡುವ ಯಾವ ಶರಣ–ಶರಣೆಯರು ಕಂಡುಬರುವುದಿಲ್ಲ. ತಮ್ಮೊಳಗಿನ ಅಂತಃಸತ್ವವನ್ನು ಪ್ರಚುರಗೊಳಿಸುವುದಕ್ಕಾಗಿಯೇ ನಮ್ಮ ಆಲೋಚನೆಗಳೂ ಕೂಡ ಪುರುಷ ಆಲೋಚನೆಯಷ್ಟೇ ಸಮರ್ಥವಾಗಿದೆ ಎಂಬುದನ್ನು ಶರಣೆಯರಾಗಿ, ವಚನಕಾರ್ತಿಯರಾಗಿ ಗುರುತಿಸಿಕೊಂಡಿದ್ದಾರೆ. ಈ ರೀತಿ ಗುರುತಿಸಿಕೊಂಡಿದ್ದರಿಂದಲೇ ವಚನಯುಗ ವಚನ ಚಳುವಳಿಯಾಗಿ, ಕ್ರಾಂತಿಯಾಗಿ ಬದಲಾದದ್ದು. ಯಾವುದೇ ಒಂದು ಕಾಲಘಟ್ಟದ ಚಳುವಳಿಯನ್ನು ತೆಗೆದುಕೊಂಡಾಗ ಕೇವಲ ಪುರುಷ ನಡೆಸಿದ ಹೋರಾಟವಷ್ಟೇ ಕ್ರಾಂತಿಯಾಗಲಾರದು. ಸ್ತ್ರೀ–ಪುರುಷರಿಬ್ಬರ ಜತೆಗಿನ ಹೋರಾಟವೇ ನಿಜವಾದ ಕ್ರಾಂತಿ. ಇತಿಹಾಸ ನಮಗೆ ಇಂಥ ಎಷ್ಟೋ ಉದಾಹರಣೆಗಳನ್ನು ಕಣ್ಣು ಮುಂದೆ ಇಡುತ್ತದೆ. ನಿಗ್ರೋ ಜನಾಂಗದ ಹೋರಾಟವಿರಬಹುದು, ಭಾರತದ ಸ್ವಾತಂತ್ರ್ಯ ಸಂಗ್ರಾಮವಿರಬಹುದು. ಇಲ್ಲೆಲ್ಲ ಪುರುಷರಷ್ಟೇ ಪ್ರಮುಖ ಪಾತ್ರವನ್ನು ಸ್ತ್ರೀಯರೂ ವಹಿಸಿರುವುದು ಕಂಡುಬರುತ್ತದೆ.

ಬಹುಶಃ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಕ್ಕೆ ಗಾಂಧೀಜಿಯ ಚಿಂತನೆಗಳಿಗೆ ಮೂಲ ಪ್ರಭಾವ ವಚನ ಚಳುವಳಿಯ ಅಂಶಗಳೇ ಇರಬಹುದು. ಒಟ್ಟಾರೆಯಾಗಿ ಹನ್ನೆರಡನೇ ಶತಮಾನದ ವಚನಯುಗವೊಂದು ಮಹತ್ತರವಾದ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ. ಈ ಯಶಸ್ವಿಯ ಮೆಟ್ಟಿಲುಗಳಿಗೆ ಶರಣೆಯರು ಕಾರಣವೆನ್ನಬಹುದು. ಹಾಗಾಗಿ ಈ ಪಾಲುದಾರಿಕೆಯನ್ನು ಶರಣ ಜತ ಜತೆಗೆ ಶರಣೆಯರೂ ಕೂಡ ಹಂಚಿಕೊಳ್ಳಬಹುದು. ಇಂದಿಗೂ ಸಾಧ್ಯವಾಗದ, ಸಂವಿಧಾನದ ಅಡಿಯಲ್ಲಿ ಎಲ್ಲರೂ ಒಂದೇ ಎಂಬ ನಿಯಮವಿದ್ದರೂ ಕೂಡ ಜಾತಿಯ ವೈಷಮ್ಯವನ್ನು ಭಾರತೀಯ ಮನಸ್ಸುಗಳಿಂದ ಅಳಿದು ಹಾಕಲಿಕ್ಕೆ ಸಾಧ್ಯವಾಗದೇ ಇರುವ ಸಂದರ್ಭದಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಈ ನಿಟ್ಟಿನಲ್ಲಿ ಪ್ರಗತಿಯ ಹೆಜ್ಜೆಗಳನ್ನು ಹಾಕಿದ್ದು, ಶ್ಲಾಘನೀಯ.

ಸಂವಿಧಾನಾತ್ಮಕವಾಗಿ ಎಲ್ಲಾ ಸವಲತ್ತುಗಳಿರುವ ಸಂದರ್ಭದಲ್ಲೂ, ಶಿಕ್ಷಣದ ಸೌಲಭ್ಯ ಇದ್ದಾಗಲೂ ಜಾತಿಯಾಚೆಗಿನ ಧೋರಣೆಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗದ ಸಂದರ್ಭದಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಜಾತಿಯನ್ನು ಕುರಿತು, ಅಸ್ಪೃಶ್ಯತೆಯನ್ನು ಕುರಿತು ದಲಿತನೊಬ್ಬ ಮಾತನಾಡುವ ಆತ್ಮಸ್ಥೈರ್ಯ ತಂದುಕೊಟ್ಟಂತಹ ಚಳುವಳಿ ಇದಾಗಿದೆ.

ಅಡಿ ಟಿಪ್ಪಣಿ

1. ಪಿ.ಶಾಂತರಸ: 'ಇತರ ಶರಣರು': ಬಸವಮಾರ್ಗ: ಸಂಪುಟ–2, ಸಂ: ಎಂ.ಎಂ.ಕಲ್ಬುರ್ಗಿ, ಮುದ್ರಣ: 1981, ಧಾರವಾಡ, ಪುಟ–39–49
2. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001,

ಪುಟ-28, ವಚನ-77

3. ಅಕ್ಕಮಹಾದೇವಿ: ಶರಣಸಂಪದ: ಡಾ. ಎಸ್.ಸುಮಿತ್ರಾಬಾಯಿ, ಮುದ್ರಣ: 2007 ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಪುಟ-8
4. ಅದೇ, ಪುಟ-78,
5. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-64-65, ವಚನ-215
6. ಅದೇ, ಪುಟ-225-226, ವಚನ-733(4)
7. ಅದೇ, ಪುಟ-226, ವಚನ-734(5)
8. ಸಾಹಿತ್ಯ ವಿಮರ್ಶೆ-67, ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಮುದ್ರಣ: 1998, ಪುಟ-134-135
9. ಅದೇ, ಪುಟ-136
10. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-232, ವಚನ-747(4)
11. ಅದೇ, ಪುಟ-324, ವಚನ-1094(3)
12. ಅದೇ, ಪುಟ-216-217, ವಚನ-700(112)
13. ಅದೇ, ಪುಟ-217, ವಚನ-702(114)
14. ಸಾಹಿತ್ಯ ವಿಮರ್ಶೆ-67, ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಮುದ್ರಣ: 1998, ಪುಟ-129-131
15. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-23-24
16. ಅದೇ, ಪುಟ-24
17. ಅದೇ, ಪುಟ-22
18. ಅದೇ, ಪುಟ-22
19. ಅದೇ, ಪುಟ-22
20. ಅದೇ, ಪುಟ-22-23
21. ಅದೇ, ಪುಟ-23
22. ಅದೇ, ಪುಟ-83, ವಚನ-282
23. ಅಕ್ಕಮಹಾದೇವಿ: ಶರಣಸಂಪದ: ಡಾ. ಎಸ್.ಸುಮಿತ್ರಾಬಾಯಿ, ಮುದ್ರಣ: 2007 ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಪುಟ-134
24. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ-2001, ಪುಟ-231, ವಚನ-746(3)
25. ಅದೇ, ಪುಟ-173, ವಚನ-555(121)
26. ಅದೇ, ಪುಟ-174, ವಚನ-557(123)
27. ಅದೇ, ಪುಟ-225, ವಚನ-731(2)
28. ಅದೇ, ಪುಟ-184, ವಚನ-586(152)
29. ಅದೇ, ಪುಟ-185, ವಚನ-588(158)
30. ಅದೇ, ಪುಟ-198, ವಚನ-633(45)
31. ಅದೇ, ಪುಟ-221, ವಚನ-716

32. ಅದೇ, ಪುಟ–371, ವಚನ–1229(24)
33. ಅದೇ, ಪುಟ–233, ವಚನ–748(1)
34. ಅದೇ, ಪುಟ–248, ವಚನ–780(1)
35. ಅದೇ, ಪುಟ–332, ವಚನ–1122(26)
36. ಅದೇ, ಪುಟ–363, ವಚನ–1205(1)
37. ಅದೇ, ಪುಟ–364, ವಚನ–1207(2)
38. ಅದೇ, ಪುಟ–377, ವಚನ–1240(6)
39. ಅದೇ, ಪುಟ–382–383, ವಚನ–1256(25)
40. ಅದೇ, ಪುಟ–396, ವಚನ–1298(64)
41. ಅದೇ, ಪುಟ–412, ವಚನ–1342(108)
42. ಅದೇ, ಪುಟ–416, ವಚನ–1350(1)
43. ಅದೇ, ಪುಟ–417, ವಚನ–1351(1)

ಸಮಾರೋಪ

ಜ್ಞಾನವು ಪುರುಷನ ಗೌರವ ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುತ್ತದೆ ಎಂದು ಚೀನೀ ಗಾದೆ ಹೇಳುತ್ತದೆ. "ಸ್ತ್ರೀ ಬುದ್ಧಿವಂತಳಾಗುವುದೇ ಮಹಾಪಾಪ" ಎಂದು ಮಾರ್ಟಿನ್ ಲೂಥರ ಕಿಂಗ್ ಹೇಳಿದರೆ, ಸೇಂಟ್‌ಪಾಲ್ ಎಂಬ ಕ್ರೈಸ್ತ ಗುರು "ಸ್ತ್ರೀಯರಿಗೆ ಮುಕ್ತಿಗೆ ಅವಕಾಶವೇ ಇಲ್ಲ" ಎನ್ನುತ್ತಾನೆ. ಹೀಗೆ ಪ್ರಪಂಚಾದ್ಯಂತ ಸ್ತ್ರೀ ಕುಲವೆಲ್ಲವೂ ನಿರ್ಲಕ್ಷಿತರಾಗಿದ್ದಾಗ ಯಾವ ಗುರುವೂ, ಚಿಂತಕನೂ, ದಾರ್ಶನಿಕರೂ ಎಂಬ ಖ್ಯಾತಿ ಪಡೆದವರೂ ಸಹಾ ಸ್ತ್ರೀಯರ ಬಗ್ಗೆ ಅನುಕಂಪವನ್ನಾಗಲಿ ತೋರಲಿಲ್ಲ.

ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್‌ರಂಥ ದಾರ್ಶನಿಕರು ಸಹಾ ಇದಕ್ಕೆ ಹೊರತಲ್ಲ. ಪ್ಲೇಟೋ ಒಂದೆಡೆ "Thank god, I am born not a woman but a man" ಎಂದು ತಾನು ಗಂಡಾಗಿ ಹುಟ್ಟಿದ್ದೇನೆ ಎಂದು ಹೆಮ್ಮೆಯಿಂದ ದೇವರಿಗೆ ವಂದಿಸುತ್ತಾನೆ. ಹೀಗೆ ಇತಿಹಾಸದಲ್ಲಿ ಸ್ತ್ರೀಯರನ್ನು ಕಗ್ಗತ್ತಲಿನಲ್ಲಿ ಇರಿಸಿದ ಪುರುಷ ಪ್ರಧಾನ ವ್ಯವಸ್ಥೆ ಹೆಮ್ಮೆಯಿಂದ ಹೆಗ್ಗಳಿಕೆಯ ಸಾಧನೆಗಳನ್ನು ಸಾರುತ್ತಿರುವುದು ವ್ಯಂಗ್ಯವೇ ಆಗಿದೆ.[1] ಹನ್ನೆರಡನೇ ಶತಮಾನದ ವಚನ ಚಳುವಳಿಯಿಂದಾಗಿ ಸಾಮಾಜಿಕ, ಆರ್ಥಿಕ ಕ್ರಾಂತಿ ನಡೆದು ಸ್ವತಂತ್ರ ವಿಶಾಲಶೀಲತೆಗೆ ಎಡೆ ನೀಡಿತ್ತು. ಜಾತಿ, ಕುಲ, ಭೇದಗಳನ್ನು ಮರೆತು ಜಗತ್ತಿನ ಸ್ತ್ರೀ ಧರ್ಮದ ಮೇಲ್ಮೆಯನ್ನು ಸಾರಿದರು. ಶರಣೆಯರಲ್ಲಿ ವೈಚಾರಿಕ ಮನೋಧರ್ಮವಿರುವುದು ಗಮನಾರ್ಹ.

ವೇದ ಪುರಾಣಗಳ ಅತಿಯಾದ ಸಂಪ್ರದಾಯಶೀಲತೆಯನ್ನು ತಿರಸ್ಕರಿಸುವ ಕ್ರಾಂತಿಕಾರಕ ಮನಸ್ಸು ಕಂಡುಬರುತ್ತದೆ. "ವೇದ ಶಾಸ್ತ್ರಾಗಮ ಪುರಾಣಗಳೆಂಬವು ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ"[2] ಎಂದು ಅವುಗಳಲ್ಲಿನ ಸಾರಹೀನತೆಯನ್ನು ಅಕ್ಕ ಹೇಳಿದರೆ 'ವೇದಶಾಸ್ತ್ರ, ಪುರಾಣಗಳಲ್ಲಿ ನುಡಿವುದು ಪುಸಿ'[3] ಎಂದು ಅಮುಗೆರಾಯಮ್ಮ ಹೇಳುತ್ತಾಳೆ. ಯಜ್ಞ ಯಾಗಾದಿಗಳು ಪ್ರಾಣಿ ಹಿಂಸೆ, ಜನಹಿಂಸೆಗೆ ಕಾರಣವಾಗಿದೆ ಎಂದು ಉರಿಲಿಂಗ ಪೆದ್ದಿಯ ಪತ್ನಿ ಕಾಳವ್ವೆಯಂಥ ವಿಚಾರವಂತೆ ಟೀಕಿಸಿದ್ದಾಳೆ. ಶರಣೆಯರು ಯಾವ ವಿಚಾರಗಳನ್ನು ಕೂಡ ಒಪ್ಪಿಕೊಂಡಂತೆ ಕಾಣುವುದಿಲ್ಲ. ಪರೀಕ್ಷೆ ಇಲ್ಲದೆ, ಮುಕ್ತಾಯಕ್ಕ, ಅಲ್ಲಮನನ್ನು ಗುರುವೆಂದು ಒಪ್ಪಿಕೊಳ್ಳದಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವಿಚಾರಶೀಲತೆಯ ಮನೋಧರ್ಮವನ್ನು ವಿಶಿಷ್ಟವಾಗಿ ಮೆರೆದ ಬಸವಣ್ಣನವರ ಧರ್ಮಪತ್ನಿಯಾಗಿ 'ವಿಚಾರ ಪತ್ನಿ' ಎಂದೇ ಅಭಿದಾನಗೊಂಡ ನೀಲಲೋಚನೆಯ ಸ್ತ್ರೀ-ಪುರುಷ ಭೇದ, ಪಾರಮಾರ್ಥಿಕ ನೆಲೆಯಲ್ಲಿನ ಚಿಂತನೆಗಳು ಉಲ್ಲೇಖಾರ್ಹ.

> "ಮಡದಿ ಎನ್ನಲಾಗದು ಬಸವಂಗೆ ಎನ್ನನು,
> ಪುರುಷನೆನ್ನಲಾಗದು ಬಸವನ ಎನಗೆ.
> ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು,
> ಬಸವನೆನ್ನ ಶಿಶುವಾದನು.
> ಪ್ರಥಮರು ಪುರಾತನರು ಸಾಕ್ಷಿಯಾಗಿ
> ಸಂಗಯ್ಯನಿಕ್ಕಿದ ದಿಬ್ಯವ ಮೀರದೆ ಬಸವನೊಳಗಾನಡಗಿದೆ."[4]

ಎಂಬಲ್ಲಿ ದೃಢ ನಿಲುವಿನಿಂದ ಆಧ್ಯಾತ್ಮಿಕ ನೆಲೆಯಲ್ಲಿ ಸ್ತ್ರೀ–ಪುರುಷ ಭೇದವನ್ನು ನಿರಾಕರಿಸುತ್ತಾಳೆ. ಸಾಮಾನ್ಯ ವರ್ಗದಲ್ಲಿ ಹುಟ್ಟಿ ಬೆಳೆದ ಶರಣೆಯರು ವಿಚಾರಶೀಲರಾಗಿರುವುದು ಗಮನಾರ್ಹ ಅಂಶ. ಹಡಪದ ಲಿಂಗಮ್ಮ, ಕೇತಲಾದೇವಿ, ಕದಿರ ರೆಮ್ಮವ್ವೆ, ಸೂಳೆ ಸಂಕವ್ವೆ ಮುಂತಾದ ಅದೆಷ್ಟೋ ಜನ ಶರಣೆಯರು ಕೆಳವರ್ಗದಿಂದ ಬಂದವರಾಗಿದ್ದರೂ, ಧಾರ್ಮಿಕ ಸಾಧನೆಯಲ್ಲಿ ಉನ್ನತಿ ಸಾಧಿಸಿ ತೋರಿಸಿದ್ದಾರೆ. ಈ ಶರಣೆಯರು ಜಾತಿಯತೆಯನ್ನು ಖಂಡಿಸಿದರು. ಕುಲದ ಭೇದವನ್ನು ನಿರ್ನಾಮ ಮಾಡುವ ವಿಚಾರಗಳನ್ನು ನಿರ್ಭೀತರಾಗಿ ಚರ್ಚಿಸಿದರು. "ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ"[5] ಎಂದ ಹಡಪದ ಲಿಂಗಮ್ಮ, 'ನಾ ತಿರುಹುವ ರಾಟೆಯ ಕುಲಜಾತಿಯ ಹೇಳಿರಣ್ಣಾ'[6] ಎಂದ ಕದಿರ ರೆಮ್ಮವ್ವೆ,

> 'ಕುರಿ ಕೋಳಿ ಕಿರಿ ಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು.
> ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರ.
> ಅವರೆಂತು ಕೀಳು ಜಾತಿಯಾದರು? ಜಾತಿಗಳೆ ನೀವೇಕೆ ಕೀಳಾದಿರೊ?[7]

ಎನ್ನುವ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಜಾತಿ, ವೃತ್ತಿಗಳಿಂದ, ಹುಟ್ಟಿನಿಂದ ಯಾರು ಕೀಳಲ್ಲ. ನಡೆ ನುಡಿಗಳಿಂದ ವ್ಯಕ್ತಿಯ ಮೇಲ್ಮೆಯನ್ನು ಗುರುತಿಸಬೇಕು ಎಂಬ ವಾಸ್ತವ ಅಂಶಕ್ಕೆ ಒತ್ತು ನೀಡುವ ಧೋರಣೆ ವ್ಯಕ್ತಪಡಿಸಿದ್ದಾಳೆ.

ಬಹುಪಾಲು ಶರಣೆಯರು ಸಂಸಾರದ ಸತ್ಯವನ್ನು ಅರಿತವರು. ಬದುಕಿನ ಶುದ್ಧತೆಯ ಬಗ್ಗೆ ಹಂಬಲಿಸಿದವರು. ಆಧ್ಯಾತ್ಮಕ್ಕೆ ಸಂಸಾರ ಬಂಧನವನ್ನು, ಅದು ಪ್ರೇರಕ ಪೋಷಕ ಎಂದು ಭಾವಿಸಿದರು. ವ್ರತಾಚರಣೆಗಳ ಬಗ್ಗೆ ಭಕ್ತಿ, ಜ್ಞಾನ, ಆಚರಣೆ ಬಗ್ಗೆ ಸ್ಪಷ್ಟ ನಿಲುವನ್ನು ಹೊಂದಿದವರು. ತಮ್ಮ ವಚನಗಳಿಗೆ ಅಂಕಿತವನ್ನು ಇಟ್ಟುಕೊಳ್ಳುವಲ್ಲಿ ಸಹ ಅವರ ಸ್ವಂತಿಕೆ ವ್ಯಕ್ತವಾಗುತ್ತದೆ. ಶರಣರು ಗುರು ಇಷ್ಟದೈವದ ಅಂಕಿತಗಳನ್ನು ಸಾಮಾನ್ಯವಾಗಿ ಬಳಸಿದಂತೆ ಸ್ತ್ರೀಯರು ಆಧ್ಯಾತ್ಮಿಕ ಸ್ವಾತಂತ್ರ್ಯದಿಂದ ಬೇರೆ ಬೇರೆ ಗುರುಗಳನ್ನು ಆಶ್ರಯಿಸಿ ಧರ್ಮ ದೀಕ್ಷೆಯನ್ನು ಪಡೆದಿರುವುದು ಉಂಟು. ಎಡೆಮಠದ ನಾಗಿದೇವಯ್ಯ ಗುರು ಸ್ಥಾನದಲ್ಲಿ ಇದ್ದರೂ ಅವರ ಪತ್ನಿ ಮಸಣಮ್ಮ 'ನಿಜಗುಣ' ಎಂಬ ಗುರುವನ್ನು ಸ್ವೀಕರಿಸಿ ಆತನ ಅಂಕಿತದಿಂದ ವಚನ ರಚಿಸಿದ್ದಾಳೆ.[8]

ವಚನಕಾರರು ನೀಡಿದ ಆರ್ಥಿಕ ಮೌಲ್ಯ, ಕಾಯಕ ತತ್ವದ ಪರಿಕಲ್ಪನೆಗೆ ಶಿವಶರಣೆಯರು ಸಹಮತವನ್ನು ನೀಡಿರುವ ವಚನಗಳಲ್ಲಿ ವೈಶಿಷ್ಟ್ಯತೆ ತುಂಬಿದೆ. 'ಆವ ಕಾಯಕ ಮಾಡಿದರೂ ಒಂದೇ ಕಾಯಕವಯ್ಯ"[9], ಎಂಬ ಹಾದರದ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮನ ಚಿಂತನೆ 'ಕಾಯಕ ತಪ್ಪಿದಡೆ ಸೈರಿಸಬಾರದು'[10] ಎಂಬ ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ಚಿಂತನೆಯಲ್ಲಾಗಲಿ, 'ಸತ್ಯ ಶುದ್ಧವಲ್ಲದುದು ಕಾಯಕವಲ್ಲ, ಆಸೆಯೆಂಬುದು ಭವದ ಬೀಜ'[11]

ಎಂಬ ಕಾಳವ್ವೆಯಾಗಲಿ, 'ಹುಸಿದು ತಂದು ಮಾಡುವಾತ ಭಕ್ತನೇ'[12] ಎಂದು ಪ್ರಶ್ನಿಸುವ ಪರಿ, ಶರಣೆಯರ ವಿಚಾರಶೀಲ ಮನೋಧರ್ಮವೇ ಕಾಣಿಸುತ್ತದೆ.

'ಜ್ಞಾನ ಎಂಬುದು ಬೀದಿಯ ಪಸರವೆ,
ಬೊಕ್ಕಣಕ್ಕೆ ತುಂಬುವ ಹುರುಳಿಯೇ'[13]

ಎಂದು ಪ್ರಶ್ನಿಸುವ 'ಕುಂಜರನ ವೇಷತೊಟ್ಟು ಹಂದಿಯಂತೆ ತಿರುಗುವ ಅಜ್ಞಾನಿಗಳನ್ನು ಕೆರುಹಿ ನಟ್ಟೆಯಲ್ಲಿ ಹೊಯ್ಯಬೇಕು'[14] ಎಂಬ ದಿಟ್ಟ ನಿಲುವಿನ ಜ್ಞಾನ ಪಿಪಾಸು ರಾಯಮ್ಮ ಮುಂತಾದ ಶರಣೆಯರು ಕೆಳವರ್ಗದಿಂದ ಬಂದವರು.

ರೋಗಗ್ರಸ್ತ ವೈದಿಕ ಸಂಸ್ಕೃತಿಯಲ್ಲಿ ಅಜ್ಞಾನಿಯಾಗಿ ಶಾಪಗ್ರಸ್ತರಂತೆ ಪರಿತ್ಯಕ್ತರಾಗಿದ್ದ ಸ್ತ್ರೀಯರು ಸಮಾನತೆ, ಸ್ವಾತಂತ್ರ್ಯ ಎಂಬ ಮನೋಭಾವ ಪಡೆದು ಪುರುಷರ ಸರಿಸಮನಾಗಿ ಸಾಮಾಜಿಕ, ಧಾರ್ಮಿಕ ಆಂದೋಲನದಲ್ಲಿ ಪಾಲ್ಗೊಂಡರು. ವಚನಕಾರ್ತಿಯರಾಗಿ ಸಾಹಿತ್ಯ ರಚನೆಗೈದರು. ಪಾರಮಾರ್ಥಿಕ ನೆಲೆಯಲ್ಲಿ ಆಧ್ಯಾತ್ಮ ವಿಕಾಸಗೊಳಿಸಿಕೊಂಡು ಅನುಭಾವಿಕ ಹಂತವನ್ನೇರಿದ ಇವರ ಸಾಧನೆ ಮೆಚ್ಚುವಂಥದ್ದೇ ಆಗಿದೆ.

ಅಡಿ ಟಿಪ್ಪಣಿ

1. ವಚನ ಸಾಹಿತ್ಯ ಸಂಚಯ, ಡಾ. ಕೆ.ಎಸ್.ರತ್ನಮ್ಮ, ಮುದ್ರಣ: 2001, ಕಾವ್ಯಶ್ರೀ ಪ್ರಕಾಶನ, ಮೈಸೂರು, ಪುಟ–173
2. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–110, ವಚನ–372
3. ಅದೇ, ಪುಟ–213, ವಚನ–687(99)
4. ಅದೇ, ಪುಟ–307, ವಚನ–1024(228)
5. ಅದೇ, ಪುಟ–396, ವಚನ–1298(64)
6. ಅದೇ, ಪುಟ–232, ವಚನ–747(4)
7. ಅದೇ, ಪುಟ–225, ವಚನ–733(4)
8. ವಚನ ಸಾಹಿತ್ಯ ಸಂಚಯ, ಡಾ. ಕೆ.ಎಸ್.ರತ್ನಮ್ಮ, ಮುದ್ರಣ: 2001, ಕಾವ್ಯಶ್ರೀ ಪ್ರಕಾಶನ, ಮೈಸೂರು, ಪುಟ–175–178
9. ಶಿವಶರಣೆಯರ ವಚನ ಸಂಪುಟ ಸಂ: ವೀರಣ್ಣ ರಾಜೂರ, ಮುದ್ರಣ–2001, ಪುಟ–415, ವಚನ–1349(1)
10. ಅದೇ, ಪುಟ–323, ವಚನ–1090(1)
11. ಅದೇ, ಪುಟ–226, ವಚನ–735(6)
12. ಅದೇ, ಪುಟ–227, ವಚನ–737(8)
13. ಅದೇ, ಪುಟ–202, ವಚನ–645(57)
14. ಅದೇ, ಪುಟ–192, ವಚನ–609(21)

ಗ್ರಂಥಸೂಚಿ

1. ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್ ತರೀಕೆರೆ, ಮುದ್ರಣ: 2005, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

2. ಅಕ್ಕಮಹಾದೇವಿ, ಡಾ. ಬಿ.ಎಸ್.ಸುಮಿತ್ರಾಬಾಯಿ, ಮುದ್ರಣ: 2007, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

3. ಅಕ್ಕಮಹಾದೇವಿಯ ವಚನಗಳಲ್ಲಿ ಪ್ರತಿಭಟನೆ ಮತ್ತು ಅನುಭಾವ, ಡಾ. ವಿಜಯಾ ಸುಬ್ಬರಾಜ್, ಮುದ್ರಣ: 2006, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ

4. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ: ಸಂ: ಡಾ. ಎಚ್.ಎಸ್.ಶ್ರೀಮತಿ, ಮುದ್ರಣ: 2006, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

5. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ವಿಚಾರ ಸಂಕಿರಣ ಮಾಲೆ, ಮುದ್ರಣ: 2006 ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

6. ಕಲ್ಯಾಣ ಕ್ರಾಂತಿ –ಮಾತಾಜಿ, ಮುದ್ರಣ: ಜೂನ್ 2004, ವಿಶ್ವಕಲ್ಯಾಣ ಮಿಷನ್ ಬಸವ ಮಂಟಪ

7. ಕಾಯಕ–ದಾಸೋಹ ಸಂ: ಮಾತೆ ಕಸ್ತೂರಿ ದೇವಿ, ಮುದ್ರಣ–ಜನವರಿ 2008, ಬಸವ ಮಂಟಪ, ಬೆಂಗಳೂರು.

8. ಪಿ.ಶಾಂತರಸ: 'ಇತರ ಶರಣರು': ಬಸವಮಾರ್ಗ: ಸಂಪುಟ–2, ಸಂ: ಎಂ.ಎಂ.ಕಲ್ಬುರ್ಗಿ, ಮುದ್ರಣ: 1981, ಧಾರವಾಡ

9. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ, ಚರಿತ್ರ ಸಾಹಿತ್ಯ–2, ಸಂಪುಟ–11, ಸಂ. ಡಾ. ಎಂ.ಎಸ್.ಮದಭಾವಿ, ಮುದ್ರಣ:2007, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ –ವಿಜಾಪುರ.

10. ಮರುಚಿಂತನೆ, ಕೆ.ಜಿ. ನಾಗರಾಜಪ್ಪ, ಮುದ್ರಣ: 1985, ಪ್ರಣತಿ ಪ್ರಕಾಶನ, ತುಮಕೂರು

11. ಮಹಿಳಾ ಸಮಾಜಿಕತೆ, ಡಾ. ಜ್ಯೋತಿ ಶಶಿಕುಮಾರ್, ಮುದ್ರಣ: 2007, ಮಹಿಳಾ ಅಧ್ಯಯನ ಕೇಂದ್ರ, ಹಂಪಿ ವಿಶ್ವವಿದ್ಯಾಲಯ

12. ಲಿಂಗಾಯಿತ ಧರ್ಮ: ಒಂದು ಅಧ್ಯಯನ, ಹಿರೇಮಲ್ಲೂರು ಈಶ್ವರನ್, ಮುದ್ರಣ: 1997, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

13. ವಚನ ಪ್ರವೇಶ: ಮೊದಲ ಓದು, ಸಂ: ಡಾ. ಎಂ.ಎಸ್.ಆಶಾದೇವಿ, ಮುದ್ರಣ: ಅಕ್ಟೋಬರ್ 2006, ಅಕ್ಷರ ಪ್ರಕಾಶನ–ಹೆಗ್ಗೋಡು(ಸಾಗರ) ಕರ್ನಾಟಕ

14. ವಚನ ಧರ್ಮಸಾರ, ಎಂ.ಆರ್. ಶ್ರೀನಿವಾಸಮೂರ್ತಿ ಬಿ.ಎ., ಮುದ್ರಣ: 1977, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ

15. ವಚನಗಳಲ್ಲಿ ಪ್ರಸಾದದ ಪರಿಕಲ್ಪನೆ, ಎನ್.ಜಿ.ಮಹಾದೇವಪ್ಪ, ಮುದ್ರಣ: 1994, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ

16. ವಚನ ಶೋಧ–2, ಡಾ. ಎಂ.ಚಿದಾನಂದಮೂರ್ತಿ, ಮುದ್ರಣ: 1998, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

17. ವಚನ ಸಾಹಿತ್ಯ ಸಂಚಯ, ಡಾ. ಕೆ.ಎಸ್.ರತ್ನಮ್ಮ, ಮುದ್ರಣ: 2001, ಕಾವ್ಯಶ್ರೀ ಪ್ರಕಾಶನ, ಮೈಸೂರು

18. ವಿನಯ ವಿಮರ್ಶೆ, ಜಿ.ಎಚ್.ನಾಯಕ, ಮುದ್ರಣ: 1991, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

19. ಶಿವಶರಣರ ನೂರೊಂದು ವಚನಗಳು, ಡಾ. ಪ್ರಭುಶಂಕರ, ಮುದ್ರಣ: 2006, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು

20. ಶಿವಶರಣೆಯರ ವಚನ ಸಂಪುಟ, ಸಂ: ಡಾ. ವೀರಣ್ಣ ರಾಜೂರ, ಮುದ್ರಣ: 2001, ಕನ್ನಡ ಪುಸ್ತಕ ಪ್ರಾಧಿಕಾರ

21. ಸಾಂಸ್ಕೃತಿಕ ಅಧ್ಯಯನ: ರಹಮತ್ ತರೀಕೆರೆ, ಮುದ್ರಣ: 2004, ಕನ್ನಡ ಸಾಹಿತ್ಯ ಅಕಾಡೆಮಿ

22. ಸಾಹಿತ್ಯ ವಿಮರ್ಶೆ–1997, ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಮುದ್ರಣ: 1998, ಕರ್ನಾಟಕ ಸಾಹಿತ್ಯ ಅಕಾಡೆಮಿ

23. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಸಂ: ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಮುದ್ರಣ: 1994, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು